# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 18 ಬುಧವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 299 | ಪುಟಗಳು: 12
ಜಾಹೀರಾತು: ad@mysurumithra.com, *website: www.mysurumithra.com*
ಸುದ್ದಿ, ಫೋಟೋಗೆ: news@mysurumithra.com


₹4



# ಫೆ.28ರಿಂದ ದ್ವಿತೀಯ ಪಿಯು ಮಾ.18ರಿಂದ ಎಸ್‌ಎಸ್‌ಎಲ್‌ಸಿ { ಪರೀಕ್ಷೆ

ಬೆಂಗಳೂರು, ಫೆ. 17(ಕೆಎಂಶಿ)– ದ್ವಿತೀಯ ಪಿಯುಸಿ ಪರೀಕ್ಷೆ ಫೆಬ್ರವರಿ 28ರಿಂದ, ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಮಾರ್ಚ್ 18ರಿಂದ ಆರಂಭಗೊಳ್ಳಲಿವೆ.

ದ್ವಿತೀಯ ಪಿಯುಸಿ ಪರೀಕ್ಷೆಗಳು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ರವರೆಗೆ, ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಬೆಳಗ್ಗೆ 10 ರಿಂದ ಮಧ್ಯಾಹ್ನ 1:15 ರವರೆಗೆ ನಡೆಯಲಿವೆ.




ಮಧು ಬಂಗಾರಪ್ಪ

ದ್ವಿತೀಯ ಪಿಯುಸಿ ಪರೀಕ್ಷೆಗೆ ಒಟ್ಟು 7,10,363 ವಿದ್ಯಾರ್ಥಿಗಳು ನೋಂದಾಯಿಸಿ ಕೊಂಡಿದ್ದು, ಈ ಪೈಕಿ ಹೊಸಬರು 6,46,801, ಪುನರಾವರ್ತಿತ 50,540 ವಿದ್ಯಾರ್ಥಿಗಳು ಹಾಗೂ 13,022 ಖಾಸಗಿ ಅಭ್ಯರ್ಥಿಗಳಿದ್ದಾರೆ. ರಾಜ್ಯಾದ್ಯಂತ ಒಟ್ಟು 1217 ದ್ವಿತೀಯ ಪಿಯು ಪರೀಕ್ಷೆ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಏಪ್ರಿಲ್ 7ರಂದು ದ್ವಿತೀಯ ಪಿಯು ಫಲಿತಾಂಶ ಪ್ರಕಟಿಸುವ ಸಾಧ್ಯತೆ ಇದೆ ಎಂದರು.

ಸುದ್ದಿಗೋಷ್ಠಿಯಲ್ಲಿಂದು ಪರೀಕ್ಷಾ ವೇಳೆ ಪಟ್ಟಿ ಬಿಡುಗಡೆ ಮಾಡಿದ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಮಧು ಬಂಗಾರಪ್ಪ, ಪರೀಕ್ಷಾ ಅವ್ಯವಹಾರ ತಡೆಯುವ ಉದ್ದೇಶದಿಂದ ಜಿಲ್ಲಾಧಿಕಾರಿಗಳು ತಮ್ಮ ಕಚೇರಿಯಿಂದಲೇ ಪರೀಕ್ಷಾ ಕೇಂದ್ರ ಮತ್ತು ಕೊಠಡಿಗಳನ್ನು ನೇರವಾಗಿ ವೀಕ್ಷಿಸುವ ವ್ಯವಸ್ಥೆ ಮಾಡಲಾಗಿದೆ.

ಎಲ್ಲಿಯಾದರೂ ತೊಂದರೆ ಆದರೆ, ತಕ್ಷಣವೇ ಜಿಲ್ಲಾಧಿಕಾರಿಗಳು ಕಾರ್ಯ ಪ್ರವೃತ್ತರಾಗಿ ಕ್ರಮ ತೆಗೆದುಕೊಳ್ಳುತ್ತಾರೆ. ಪರೀಕ್ಷಾ ಕೊಠಡಿಗಳಿಗೆ ವಿದ್ಯಾರ್ಥಿಗಳು ಮೊಬೈಲ್ ಹಾಗೂ ವಿದ್ಯುನ್ಮಾನ ವಸ್ತುಗಳನ್ನು ತರುವುದು ಹಾಗೂ ಬಳಸುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದರು.

ಮುನ್ನೆಚ್ಚರಿಕಾ ಕ್ರಮವಾಗಿ ಪರೀಕ್ಷಾ ಕೇಂದ್ರಗಳಿಂದ 200 ಮೀಟರ್ ಸುತ್ತಳತೆಯಲ್ಲಿ ನಿಷೇಧಾಜ್ಞೆ ಜಾರಿಯಲ್ಲಿರುತ್ತದೆ. ಫೆಬ್ರವರಿ 28ರಿಂದ ಆರಂಭಗೊಳ್ಳಲಿರುವ ದ್ವಿತೀಯ ಪಿಯುಸಿ ಪರೀಕ್ಷೆ ಮಾರ್ಚ್ 17ರವರೆಗೆ ನಡೆಯಲಿದೆ. ಮರು ದಿನ, ಅಂದರೆ, ಮಾರ್ಚ್18ರಿಂದ ಎಸ್‌ಎಸ್ ಎಲ್‌ಸಿ ಪರೀಕ್ಷೆಗಳು ಆರಂಭಗೊಂಡು ಏಪ್ರಿಲ್ 2ಕ್ಕೆ ಮುಕ್ತಾಯಗೊಳ್ಳಲಿವೆ. ಎಸ್‌ಎಸ್ ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳ ಫಲಿತಾಂಶ ವೃದ್ಧಿಗಾಗಿ ಇಲಾಖೆಯು ಹಂತ ಹಂತಗಳಲ್ಲಿ ಕಾರ್ಯಾಗಾರ ಮತ್ತು ಸಭೆಗಳನ್ನು ನಿರಂತರವಾಗಿ ನಡೆಸಿ ವಿದ್ಯಾರ್ಥಿಗಳನ್ನು ಮುಖ್ಯ ಪರೀಕ್ಷೆಗೆ ತಯಾರು ಮಾಡಲಾಗಿದೆ. ಪರೀಕ್ಷಾ ವೇಳೆ ವಿದ್ಯಾರ್ಥಿಗಳು ಪ್ರವೇಶ ಪತ್ರವನ್ನು ತೋರಿಸಿದರೆ, ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಮಾಡಿಕೊಡಲಾಗುತ್ತದೆ ಎಂದರು.

## ದ್ವಿತೀಯ ಪಿಯು ವೇಳಾಪಟ್ಟಿ

ಫೆಬ್ರವರಿ 28ರಂದು ದ್ವಿತೀಯ ಪಿಯುಸಿಯ ಕನ್ನಡ ಹಾಗೂ ಅರೇಬಿಕ್, ಮಾರ್ಚ್ 2ರಂದು ಭೂಗೋಳಶಾಸ್ತ್ರ, ಸಂಖ್ಯಾಶಾಸ್ತ್ರ ಹಾಗೂ ಮನಃಶಾಸ್ತ್ರ.

ಮಾರ್ಚ್ 3ರಂದು ಇಂಗ್ಲಿಷ್, ಮಾ.4ರಂದು ತಮಿಳು, ತೆಲುಗು, ಮಲಯಾಳಂ, ಮರಾಠಿ, ಉರ್ದು, ಸಂಸ್ಕೃತ ಹಾಗೂ ಫ್ರೆಂಚ್ ಭಾಷೆಗಳಿಗೂ, ಮಾ.5ರಂದು ಇತಿಹಾಸ, ಮಾ.6ರಂದು ಭೌತಶಾಸ್ತ್ರ.

ಮಾರ್ಚ್ 7ರಂದು ಐಚ್ಛಿಕ ಕನ್ನಡ, ವ್ಯವಹಾರ ಅಧ್ಯಯನ, ಭೂಗರ್ಭ ಶಾಸ್ತ್ರ, ಮಾ.9ರಂದು ರಸಾಯನಶಾಸ್ತ್ರ, ಶಿಕ್ಷಣ ಶಾಸ್ತ್ರ, ಮೂಲ ಗಣಿತ, ಮಾ.10ರಂದು ಅರ್ಥಶಾಸ್ತ್ರ, ಮಾ.11ರಂದು ತರ್ಕಶಾಸ್ತ್ರ, ವಿದ್ಯುನ್ಮಾನ ಶಾಸ್ತ್ರ ಹಾಗೂ ಗೃಹ ವಿಜ್ಞಾನ ವಿಷಯಗಳ ಪರೀಕ್ಷೆ.

ಮಾರ್ಚ್ 12ರಂದು ಹಿಂದಿ, ಮಾ.13ರಂದು ರಾಜ್ಯಶಾಸ್ತ್ರ, ಮಾ.14ರಂದು ಲೆಕ್ಕಶಾಸ್ತ್ರ ಹಾಗೂ ಗಣಿತ, ಮಾ.16ರಂದು ಸಮಾಜಶಾಸ್ತ್ರ, ಜೀವಶಾಸ್ತ್ರ ಮತ್ತು ಗಣಕವಿಜ್ಞಾನ, ಮಾ.17ರಂದು ಹಿಂದೂಸ್ತಾನಿ ಸಂಗೀತ ಮತ್ತು ಇತರ ವಿಷಯಗಳ ಪರೀಕ್ಷೆ ಜರುಗಲಿದೆ.

## ಎಸ್‌ಎಸ್‌ಎಲ್‌ಸಿ ಟೈಂ ಟೇಬಲ್

ಮಾರ್ಚ್ 18ರಂದು ಆರಂಭಗೊಳ್ಳುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಮೊದಲ ದಿನ ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್, ಇಂಗ್ಲಿಷ್ ಎನ್‌ಸಿಇಆರ್‌ಟಿ ಹಾಗೂ ಸಂಸ್ಕೃತ.

ಮಾರ್ಚ್ 23: ವಿಜ್ಞಾನ, ರಾಜ್ಯಶಾಸ್ತ್ರ, ಹಿಂದೂಸ್ತಾನಿ ಸಂಗೀತ ಹಾಗೂ ಕರ್ನಾಟಿಕ್ ಸಂಗೀತ, ಮಾ.25: ದ್ವಿತೀಯ ಇಂಗ್ಲಿಷ್ ಹಾಗೂ ಕನ್ನಡ, ಮಾ.28: ಗಣಿತ ಹಾಗೂ ಸಮಾಜಶಾಸ್ತ್ರ, ಮಾ.30: ತೃತೀಯ ಭಾಷೆ ಕನ್ನಡ, ಹಿಂದಿ ಇಂಗ್ಲಿಷ್ ಸೇರಿದಂತೆ ಇತರ ಭಾಷೆಗಳಿಗೂ, ಏಪ್ರಿಲ್ 1ರಂದು ಅರ್ಥಶಾಸ್ತ್ರ ಹಾಗೂ ಎಲಿಮೆಂಟ್ ಆಫ್ ಇಂಜಿನಿಯರಿಂಗ್ ವಿಷಯಗಳಿಗೂ, ಏಪ್ರಿಲ್ 2ರ ಕೊನೆಯ ದಿನದಂದು ಸಮಾಜವಿಜ್ಞಾನ ಪರೀಕ್ಷೆ ಜರುಗಲಿದೆ.









# ಮೈಸೂರಿನ ಡೋಲ್ಫಿನ್ ಕಾಂಪ್ಲೆಕ್ಸ್ ಎಂಡಿಎ ವಶಕ್ಕೆ; ಬಾಡಿಗೆದಾರರ ತೆರವಿಗೆ ಮೂರು ತಿಂಗಳ ಗಡುವು

- ಮೈಸೂರು ಶಿವರಾಂಪೇಟೆ–ದೇವರಾಜ ಅರಸ್ ರಸ್ತೆಗೆ ಹೊಂದಿಕೊಂಡಂತಿರುವ ಕಾಂಪ್ಲೆಕ್ಸ್
- 40 ಮಳಿಗೆ ಬಾಡಿಗೆದಾರರಿಗೆ ಮೈಸೂರು ಅಭಿವೃದ್ಧಿ ಪ್ರಾಧಿಕಾರ ನೋಟಿಸ್ ಜಾರಿ


ಮೈಸೂರಿನ ಶಿವರಾಂಪೇಟೆ ಹಾಗೂ ದೇವರಾಜ ಅರಸ್ ರಸ್ತೆಗೆ ಹೊಂದಿಕೊಂಡಂತೆ ಇರುವ ಡೋಲ್ಫಿನ್ ಕಾಂಪ್ಲೆಕ್ಸ್

ಮೈಸೂರು, ಫೆ.17(ಬಿಎಲ್‌ಯು)– ಮೈಸೂರಿನ ಹೃದಯ ಭಾಗ, ಶಿವರಾಂಪೇಟೆ ಹಾಗೂ ದೇವರಾಜ ಅರಸ್ ರಸ್ತೆಗೆ ಹೊಂದಿಕೊಂಡಂತೆ ಇರುವ ಬಹು ಕೋಟಿ ಮೌಲ್ಯದ ಡೋಲ್ಫಿನ್ ಕಾಂಪ್ಲೆಕ್ಸ್ ಅನ್ನು ರಾಜ್ಯ ಹೈಕೋರ್ಟ್ ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ)ದ ವಶಕ್ಕೆ ನೀಡಿದ್ದು, ಮಳಿಗೆಯ ಬಾಡಿಗೆದಾರರ ತೆರವಿಗೆ ಮೂರು ತಿಂಗಳ ಕಾಲಾವಕಾಶ ನೀಡಿದೆ.

ಕಾನೂನು ಹೋರಾಟಕ್ಕೆ ಹೈಕೋರ್ಟ್‌ನಲ್ಲಿ ಮಹತ್ವದ ಜಯ ದೊರೆತಿದ್ದು, ಈ ಹಿನ್ನೆಲೆಯಲ್ಲಿ ಕಾಂಪ್ಲೆಕ್ಸ್ ತನ್ನ ವಶಕ್ಕೆ ಪಡೆಯುವ ಕಾನೂನಾತ್ಮಕ ಪ್ರಕ್ರಿಯೆಯಲ್ಲಿ ಈಗ ಎಂಡಿಎ ತೊಡಗಿದೆ.

ಸಾಂಸ್ಕೃತಿಕ ನಗರಿ ಮೈಸೂರಿನ ಪ್ರಧಾನ ಭಾಗದ ಈ ಆಸ್ತಿಗಳಿಗೆ ಕೋಟಿ ಕೋಟಿ ಬೆಲೆ. ಇದರಲ್ಲಿ ನೂರಾರು ಕೋಟಿ ಬೆಲೆ ಬಾಳುವ ಡೋಲ್ಫಿನ್ ಕಾಂಪ್ಲೆಕ್ಸ್ ಕೂಡ ಒಂದು. ಹಾಗಾಗಿ ಡೋಲ್ಫಿನ್ ಕಾಂಪ್ಲೆಕ್ಸ್ ಉಳಿಸಿಕೊಳ್ಳಲು ಕಾನೂನಾತ್ಮಕ ಹೋರಾಟ ಹಲವು ಸ್ವರೂಪಗಳನ್ನು ಪಡೆದುಕೊಂಡಿತ್ತು.

ಡೋಲ್ಫಿನ್ ಕಾಂಪ್ಲೆಕ್ಸ್ ಅನ್ನು ತನ್ನ ವಶಕ್ಕೆ ಪಡೆಯುವಂತೆ ಹೈಕೋರ್ಟ್ ಮುಡಾಗೆ ನಿರ್ದೇಶನ ನೀಡಿದ್ದು, ಕರ್ನಾಟಕ ಪಬ್ಲಿಕ್ ಪ್ರಿಮಿಸಸ್ ಕಾಯ್ದೆ ಪ್ರಕಾರವೇ ಪ್ರಕ್ರಿಯೆ ಕೈ ಗೊಳ್ಳುವಂತೆ ■ 6ನೇ ಪುಟಕ್ಕೆ

## ಮಾರ್ಚ್ ಮೊದಲ ವಾರದಲ್ಲಿ ಡೋಲ್ಫಿನ್ ಕಾಂಪ್ಲೆಕ್ಸ್ ಮಳಿಗೆಯ ಬಾಡಿಗೆದಾರರ ತೆರವು

ಮೈಸೂರು, ಫೆ.17(ಬಿಎಲ್‌ಯು)– ಮೈಸೂರಿನ ಡೋಲ್ಫಿನ್ ಕಾಂಪ್ಲೆಕ್ಸ್ ಮಳಿಗೆಗಳ ಬಾಡಿಗೆದಾರರ ತೆರವುಗೊಳಿಸಿ ಇಡೀ ಸಮುಚ್ಛಯವನ್ನು ಮಾರ್ಚ್ ಮೊದಲ ವಾರದೊಳಗೆ ಸ್ವಾಧೀನಕ್ಕೆ ತೆಗೆದುಕೊಳ್ಳುತ್ತೇವೆ ಎಂದು ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಕೆ.ಆರ್.ರಕ್ಷಿತ್ ತಿಳಿಸಿದ್ದಾರೆ.


ಕೆ.ಆರ್.ರಕ್ಷಿತ್

ಡೋಲ್ಫಿನ್ ಕಾಂಪ್ಲೆಕ್ಸ್ ಸಂಬಂಧ ಎಂಡಿಎ ಪರವಾಗಿ ಹೈಕೋರ್ಟ್ ತೀರ್ಪು ನೀಡಿರುವ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಅವರು, ಡೋಲ್ಫಿನ್ ಕಾಂಪ್ಲೆಕ್ಸ್ ಅನ್ನು ವಶಕ್ಕೆ ತೆಗೆದುಕೊಳ್ಳುವ ಮುನ್ನ ಕರ್ನಾಟಕ ಪ್ರಿಮಿಸಸ್ ಕಾಯ್ದೆ ಅನ್ವಯ ಕಾನೂನಾತ್ಮಕ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕಿದೆ ಎಂದರು. ಈ ಕಾಯ್ದೆ ಅನ್ವಯ ನಾವು ಕಾಂಪ್ಲೆಕ್ಸ್ ವಶಕ್ಕೆ ಪಡೆಯದಿದ್ದರೆ ಸ್ವಾಧೀನದಲ್ಲಿ ಇರುವವರು ನ್ಯಾಯಾಲಯದಲ್ಲಿ ತಡೆಯಾಜ್ಞೆ ತರುವ ಸಾಧ್ಯತೆ ಇದೆ ಎಂದು ರಕ್ಷಿತ್ ಅಭಿಪ್ರಾಯಪಟ್ಟರು.

ನಾವು ಕೈಗೊಳ್ಳುವ ಕಾನೂನಾತ್ಮಕ ಪ್ರಕ್ರಿಯೆಯಲ್ಲಿ ಯಾವುದೇ ವೈಫಲ್ಯಗಳು ಎದುರಾಗದಂತೆ ಬಹಳ ಎಚ್ಚರಿಕೆಯಿಂದ ಕಾನೂನು ವ್ಯಾಪ್ತಿಯಲ್ಲೇ ಕಾರ್ಯ ನಿರ್ವಹಿಸಿ, ಆ ಜಾಗವನ್ನು ವಶಕ್ಕೆ ಪಡೆಯುತ್ತೇವೆ ಎಂದು ಹೇಳಿದರು. ಡೋಲ್ಫಿನ್ ಕಾಂಪ್ಲೆಕ್ಸ್ ಜಾಗ ಮೈಸೂರಿನ ಹೃದಯ ಭಾಗ ದಲ್ಲಿ ಇದೆ. ಇಲ್ಲಿ ಶಾಪಿಂಗ್ ಕಾಂಪ್ಲೆಕ್ಸ್ ನಿರ್ಮಿಸಬಹುದು. ಇಲ್ಲವೆ ಪಾರ್ಕಿಂಗ್ ಲಾಟ್ ನಿರ್ಮಾಣ ಮಾಡಬಹುದು ಎಂದರು.

ಸಾರ್ವಜನಿಕರಿಗೆ ಅನುಕೂಲವಾಗುವಂತೆ ಯಾವುದಾದರೊಂದು ಉಪಯೋಗಕ್ಕೆ ಈ ಜಾಗ ಹೊಂದುತ್ತದೆ. ಈ ಹಿನ್ನೆಲೆಯಲ್ಲಿ ಕಾನೂನು ವ್ಯಾಪ್ತಿಯಲ್ಲಿ ಪ್ರಕ್ರಿಯೆ ಕೈಗೊಂಡು ಕಾಂಪ್ಲೆಕ್ಸ್ ಜಾಗವನ್ನು ನಮ್ಮ ವಶಕ್ಕೆ ಪಡೆಯುತ್ತೇವೆ ಎಂದು ರಕ್ಷಿತ್ ಪುನರ್ ಸ್ಪಷ್ಟಪಡಿಸಿದರು.

# ನಾಳೆ ಸಾರಿಗೆ ನೌಕರರಿಂದ ಬೆಂಗಳೂರು ಚಲೋ ಮುಷ್ಕರ



ಮೈಸೂರು, ಫೆ.17(ಎಸ್‌ಪಿಎನ್)– ತಾಂತ್ರಿಕ ಕಾರಣದಿಂದಾಗಿ ಮುಂದೂಡಲಾಗಿದ್ದ ಸಾರಿಗೆ ನೌಕರರ 'ಬೆಂಗಳೂರು ಚಲೋ' ಮುಷ್ಕರವನ್ನು ಫೆ.19ರಂದು ಬೆಂಗಳೂರು ಫ್ರೀಡಂ ಪಾರ್ಕಿನಲ್ಲಿ ಬೆಳಿಗ್ಗೆ 11 ಗಂಟೆಯಿಂದ ಆರಂಭವಾಗಲಿದೆ ಎಂದು ಕೆಎಸ್‌ಆರ್‌ಟಿಸಿ ನೌಕರರ ಜಂಟಿ ಕ್ರಿಯಾ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ಜ.29 ರಂದು ಕೆಎಸ್‌ಆರ್‌ಟಿಸಿ ಜಂಟಿ ಕ್ರಿಯಾ ಸಮಿತಿ ವತಿಯಿಂದ ಬೆಂಗಳೂರು ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಆದರೆ, ಹಿರಿಯ ಕಾರ್ಮಿಕ ಎಚ್.ವಿ.ಅನಂತಸುಬ್ಬರಾವ್ ಅವರ ಹಠಾತ್ ನಿಧನದಿಂದ ಹೋರಾಟ ಮುಂದೂಡಲಾಗಿತ್ತು. ಈ ಹಿನ್ನೆಲೆಯಲ್ಲಿ ಜಂಟಿ ಕ್ರಿಯಾ ಸಮಿತಿ ಸದಸ್ಯರು ಫೆ.3ರಂದು ಸಭೆ ಸೇರಿ ಸಾರಿಗೆ ನೌಕರರ ನ್ಯಾಯಯುತ ಬೇಡಿಕೆ ಈಡೇರಿಕೆಗಾಗಿ ಸರ್ಕಾರದ ವಿರುದ್ಧ 'ಬೆಂಗಳೂರು ಚಲೋ' ಮುಷ್ಕರ ನಡೆಸಲು ತೀರ್ಮಾನಿಸಲಾಗಿತ್ತು.

ಈ ಸಮಸ್ಯೆ ಬಗೆಹರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಾಲ್ಕು ಸಭೆ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರ ನೇತೃತ್ವದಲ್ಲಿ ಏಳೆಂಟು ಸಭೆ ಹಾಗೂ ಅಧಿಕಾರಿಗಳ ಮಟ್ಟದಲ್ಲಿ ಹತ್ತಾರು ಸಭೆಗಳನ್ನು ನಡೆಸಿದರೂ ಸರ್ಕಾರವಾಗಲಿ, ಆಡಳಿತ ವರ್ಗದವರಾಗಲಿ, ಸಾರಿಗೆ ನೌಕರರ ಬೇಡಿಕೆಗಳಿಗೆ ಸರಿಯಾಗಿ ಸ್ಪಂದಿಸದೇ ಅಸಡ್ಡೆ ತೋರಿದ್ದಾರೆ. ಈ ಹಿನ್ನೆಲೆಯಲ್ಲಿ ನಮ್ಮ ಬೇಡಿಕೆ ಈಡೇರಿಸಿಕೊಳ್ಳಲು ಹೋರಾಟ ಬಿಟ್ಟು ಅನ್ಯ ಮಾರ್ಗವಿಲ್ಲ ಎಂಬ ನಿರ್ಧಾರಕ್ಕೆ ಬಂದಿರುವ ಕಾರ್ಮಿಕ ಮುಖಂಡರು, ಫೆ.19 ರಂದು ಬೆಂಗಳೂರು ಚಲೋ ಮುಷ್ಕರದಲ್ಲಿ ನಾಲ್ಕು ಸಾರಿಗೆ ನಿಗಮಗಳ ನೌಕರರು ಸಾವಿರಾರು ಸಂಖ್ಯೆಯಲ್ಲಿ ಪಾಲ್ಗೊಂಡು ಹೋರಾಟ ಯಶಸ್ವಿಗೊಳಿಸಬೇಕೆಂದು ಜಂಟಿ ಕ್ರಿಯಾ ಸಮಿತಿ ಕರೆ ನೀಡಿದೆ.

# ದೋಷಪೂರಿತ 378 ಸೈಲೆನ್ಸರ್ ನಾಶ

ಮೈಸೂರು, ಫೆ.17(ಎಂಕೆ)–ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ ಅಂಗವಾಗಿ ನಗರದೆಲ್ಲೆಡೆ ನಡೆದ ವೀಲ್ಹಿಂಗ್ ಮತ್ತು ದೋಷಪೂರಿತ ಬೈಕ್ ಹಾಗೂ ಸ್ಕೂಟರ್ ಸೈಲೆನ್ಸರ್ ಕಾರ್ಯಾಚರಣೆಯಲ್ಲಿ ವಶಪಡಿಸಿಕೊಂಡಿದ್ದ 378 ದೋಷಪೂರಿತ ಸೈಲೆನ್ಸರ್‌ಗಳನ್ನು ನಾಶಪಡಿಸಲಾಯಿತು.

ಲಲಿತ ಮಹಲ್ ರಸ್ತೆಯಲ್ಲಿರುವ ಪೊಲೀಸ್ ಕ್ಯಾಂಟೀನ್ ಆವರಣದಲ್ಲಿ ಕಳೆದ ಜನವರಿ ತಿಂಗಳಲ್ಲಿ ದೋಷಪೂರಿತ ಬೈಕ್ ಮತ್ತು ಸ್ಕೂಟರ್ ಸೈಲೆನ್ಸರ್ ಬಳಕೆ ಮತ್ತು ವೀಲ್ಹಿಂಗ್ ಮಾಡುವವರ ವಿರುದ್ಧ ನಡೆದ ಕಾರ್ಯಾಚರಣೆಯಲ್ಲಿ ವಶಪಡಿಸಿಕೊಂಡಿದ್ದ ಸೈಲೆನ್ಸರ್‌ಗಳನ್ನು ರೋಲರ್ ಮೂಲಕ ನಾಶಪಡಿಸಲಾಯಿತು.

ದೇವರಾಜ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 26 ಸೈಲೆನ್ಸರ್, ಕೆ.ಆರ್.ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 59, ಎನ್.ಆರ್.ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 50, ಸಿದ್ದಾರ್ಥನಗರ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 43 ಹಾಗೂ ವಿವಿ ಪುರಂ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 200 ಸೇರಿ ಒಟ್ಟು 378 ಸೈಲೆನ್ಸರ್‌ಗಳನ್ನು ವಶಪಡಿಸಿಕೊಳ್ಳಲಾಗಿತ್ತು.

**ಕಾರ್ಯಾಚರಣೆ ಮುಂದುವರೆಯಲಿದೆ:** ದೋಷಪೂರಿತ ಸೈಲೆನ್ಸರ್‌ಗಳ ಬಳಕೆ ಹಾಗೂ ವೀಲ್ಹಿಂಗ್ ಮಾಡುವುದು ಸಂಚಾರ ನಿಯಮ ಉಲ್ಲಂಘಟನೆಯಾಗಿದ್ದು, ರಾಷ್ಟ್ರೀಯ ರಸ್ತೆ ಸುರಕ್ಷತೆ ಮಾಸಾಚರಣೆ ಅಂಗವಾಗಿ ನಡೆದ ವಿಶೇಷ ಕಾರ್ಯಾಚರಣೆಯಲ್ಲಿ ವಶಕ್ಕೆ ಪಡೆದಿದ್ದ ಸೈಲೆನ್ಸರ್‌ಗಳನ್ನು ನಾಶಪಡಿಸಲಾಗಿದೆ ಎಂದು ಡಿಸಿಪಿ ಸುಂದರ್‌ರಾಜ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.



**ಪೊಲೀಸ್ ಕ್ಯಾಂಟೀನ್ ಆವರಣದಲ್ಲಿ ದೋಷಪೂರಿತ ಸೈಲೆನ್ಸರ್‌ಗಳನ್ನು ನಾಶಪಡಿಸಲಾಯಿತು. ಈ ಸಂದರ್ಭದಲ್ಲಿ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಡಿಸಿಪಿ ಸುಂದರ್‌ರಾಜ್, ಎಸಿಪಿ ಶಿವಶಂಕರ್ ಮತ್ತಿತರರು ಉಪಸ್ಥಿತರಿದ್ದರು.**

ಮುಂದಿನ ದಿನಗಳಲ್ಲಿಯೂ ವೀಲ್ಹಿಂಗ್ ಮಾಡುವವರ ಹಾಗೂ ದೋಷಪೂರಿತ ಸೈಲೆನ್ಸರ್ ಅಳವಡಿಸಿಕೊಂಡು ಸಂಚರಿಸುವ ದ್ವಿಚಕ್ರ ವಾಹನ ಸವಾರರ ವಿರುದ್ಧ ವಿಶೇಷ ತಪಾಸಣೆ ಮುಂದುವರೆಯಲಿದೆ. ಸಂಚಾರ ನಿಯಮ ಉಲ್ಲಂಘಿಸುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು. ಸಂಚಾರ ವಿಭಾಗದ ಎಸಿಪಿ ಶಿವಶಂಕರ್, ಸಂಚಾರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್, ಸಬ್‌ಇನ್ಸ್‌ಪೆಕ್ಟರ್ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

## ನಾಳೆ ಬಹುಭಾಷಾ ಚಲನ ಚಿತ್ರ ಗೀತೆಗಳ ರಸ ಸಂಜೆ

ಮೈಸೂರು,ಫೆ.17(ಜಿಎ)–ಮೈಸೂರಿನ ರಿದಮ್ಸ್ ಕರೋಕೆ ಕ್ಲಬ್‌ನಿಂದ ನಾದಬ್ರಹ್ಮ ಸಂಗೀತ ಸಭಾದಲ್ಲಿ ಫೆ.19ರಂದು ಸಂಜೆ 4.30ಕ್ಕೆ 'ಸಂಗೀತದ ಅಲೆಗಳ ಮೇಲೆ ಪ್ರೀತಿಯ ಪಯಣ' ಶೀರ್ಷಿಕೆಯಲ್ಲಿ ಬಹುಭಾಷಾ ಚಲನಚಿತ್ರಗೀತೆಗಳ ರಸ ಸಂಜೆ–ಸೀಸನ್–3 ಕಾರ್ಯಕ್ರಮ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕ್ಲಬ್ ಸಂಚಾಲಕ ಎಸ್.ಅಮರ್ ಈ ವಿಷಯ ತಿಳಿಸಿ, ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹವ್ಯಾಸಿ ಗಾಯಕರು ಸುಮಾರು 40 ಗೀತೆಗಳನ್ನು ಹಾಡಲಿದ್ದು, ಕರೋಕೆ ಕಾರ್ಯಕ್ರಮವಾಗಿದೆ. ಮುಖ್ಯ ಅತಿಥಿಗಳಾಗಿ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕನ್ನಡ ಸುಗಮ ಸಂಗೀತ ಪರಿಷತ್ತು ಜಿಲ್ಲಾ ಘಟಕದ ಅಧ್ಯಕ್ಷ ನಾಗರಾಜ್ ವಿ.ಬೈರಿ, ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಬಿಜೆಪಿ ನಗರ ಘಟಕದ ಉಪಾಧ್ಯಕ್ಷ ಬಾಲಕೃಷ್ಣ, ಪ್ರಮುಖರಾದ ವೈಡಿ.ರಾಜಣ್ಣ, ಗುಬ್ಬಿಗೂಡು ರಮೇಶ್ ಆಗಮಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಹವ್ಯಾಸಿ ಗಾಯಕರಾದ ಶ್ರೀನಾಥ್ ಪೈ, ವೆಂಕಟೇಶ ಪದಕಿ, ಅಶ್ವತ್ಥ ನಾರಾಯಣ, ಕ್ಲಬ್ ವ್ಯವಸ್ಥಾಪಕ ಪ್ರವೀಣ್ ಘಾಡ್ಕೆ ಉಪಸ್ಥಿತರಿದ್ದರು.

## ನಿಧನ



**ಪುಟ್ಟಮ್ಮ**

ಮೈಸೂರು,ಫೆ.17–ಮೈಸೂರಿನ ಕೆ.ಜಿ.ಕೊಪ್ಪಲು ನಿವಾಸಿ ದಿವಂಗತ ಮರಿಯಪ್ಪ ಅವರ ಪತ್ನಿ ಪುಟ್ಟಮ್ಮ(100) ಫೆ.15ರಂದು ನಿಧನರಾದರು. ಮೃತರು ನಾಲ್ವರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಕೆ.ಜಿ.ಕೊಪ್ಪಲಿನ ರುದ್ರಭೂಮಿಯಲ್ಲಿ (ಫೆ.15) ರಂದು ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

**ಸರಸ್ವತಮ್ಮ**



ಮೈಸೂರಿನ ಮಂಡಿ ಮೊಹಲ್ಲಾ ನಿವಾಸಿ ದಿವಂಗ ವಿಶ್ವನಾಥ ಶೆಟ್ಟಿ ಅವರ ಪತ್ನಿ ಸರಸ್ವತಮ್ಮ(100) ಫೆ.15ರಂದು ನಿಧನರಾದರು. ಮೂಲತಃ ಕೌದಳ್ಳಿಯವರಾದ ಇವರು ಪುತ್ರರಾದ ನಾಗರಾಜ ಶೆಟ್ಟಿ ಪಾಂಡು ಮತ್ತು ಸುರೇಶ್ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



**ಪಳನಿಯಮ್ಮ**

ಮೈಸೂರಿನ ವಿದ್ಯಾರಣ್ಯಪುರಂ ನಿವಾಸಿ ದಿವಂಗತ ಸುಂದರಂ ಚೆಟ್ಟಿಯಾರ್ ಪತ್ನಿ ಶ್ರೀಮತಿ ಪಳನಿಯಮ್ಮ ಇಂದು (ಫೆ.17) ನಿಧನರಾದರು. ಮೃತರಿಗೆ 80 ವರ್ಷ ವಯಸ್ಸಾಗಿತ್ತು. ಮೃತರು ಬಂಡೀಪಾಳ್ಯದ ವರ್ತಕ ವರದರಾಜ್ ಸೇರಿದಂತೆ ಮೂವರು ಪುತ್ರಿಯರು, ಸೊಸೆ ಮೊಮ್ಮಕ್ಕಳು ಸೇರಿದಂತೆ ಅಪಾರ ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿ ಬೆಟ್ಟದ ತಪ್ಪಲಿನ ಚಿತಾಗಾರದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

**ಕ್ಯಾಪ್ಟನ್ ಚೊಟ್ಟೆಯಂಡಮಾಡ ಕಾಳಯ್ಯ**



ಮೈಸೂರಿನ ವಿಜಯನಗರ 4ನೇ ಹಂತದಲ್ಲಿರುವ ಡ್ಯಾಮ್‌ಡೆನ್ ಫೌನಾಸ್ ಬಡಾವಣೆ ನಿವಾಸಿ ಕ್ಯಾಪ್ಟನ್ ಚೊಟ್ಟೆಯಂಡಮಾಡ ಕಾಳಯ್ಯ (ವಾಸು) ಶನಿವಾರ (ಫೆ.14) ನಿಧನರಾದರು. ಅವರಿಗೆ 66 ವರ್ಷ ವಯಸ್ಸಾಗಿತ್ತು. ಇವರು ಮೂಲತಃ ಕೊಡಗು ಜಿಲ್ಲೆ ಪೊನ್ನಂಪೇಟೆ ತಾಲೂಕು ಟಿ.ಶೆಟ್ಟಿಗೇರಿ ಗ್ರಾಮ, ವಗಾರೆಯವರಾಗಿದ್ದು, ಪತ್ನಿ ದೇವಕಿ/ಪಟ್ಟು (ನಾಟೋಲಂಡ, ಕಕ್ಕಬೆ), ಪುತ್ರ ಭುವನ್ ಬೋಪಣ್ಣ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ವಿಜಯನಗರ 4ನೇ ಹಂತದ ಮುಕ್ತಿಧಾಮದಲ್ಲಿ ಫೆ.15ರಂದು ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



**ಕೆ.ನಾಗರಾಜ**

ಮೈಸೂರಿನ ಚಾಮುಂಡಿಪುರಂ ನಿವಾಸಿ ಹಾಗೂ ಪ್ರಾಡಕ್ಟ್ ಪ್ರಮೋಟರ್ಸ್ ಸಂಸ್ಥಾಪಕರಾದ ಕೆ.ನಾಗರಾಜ(66) ಫೆ.15ರಂದು ನಿಧನರಾದರು. ಮೃತರು ಪತ್ನಿ ಎಂ.ಎನ್.ಪ್ರಭಾ, ಪುತ್ರ ಎನ್.ಅಕ್ಷಯ್, ಪುತ್ರಿ ಎನ್.ಅನನ್ಯ, ಸೊಸೆ ಪಿ.ಸುವಿದಾ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಲ್ಲಿ ಸೋಮವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

**ಜಾಕಿಯಾ ಬಾನು**

ಮೈಸೂರಿನ ಸೇಂಟ್ ಫಿಲೋಮಿನಾ ಕಾಲೇಜಿನ ನಿವೃತ್ತ ಉರ್ದು ಪ್ರಾಧ್ಯಾಪಕರು ಹಾಗೂ ದಿವಂಗತ ಎಂ.ಹೆಚ್. ನಾಸಿರ್ ಉಲ್ಲಾ (ವಕೀಲ) ಅವರ ಪತ್ನಿ ಜಾಕಿಯಾ ಬಾನು(78) ಬನ್ನಿಮಂಟಪ 'ಸಿ' ಬಡಾವಣೆಯ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಇವರ ಪತಿ ಫೆ.8ರಂದು ನಿಧನರಾಗಿದ್ದರು. ಬನ್ನಿಮಂಟಪದ ಟಿಪ್ಪು ಮಸೀದಿಯಲ್ಲಿ ನಮಾಜ್ ಇ ಜನಾಜ ನಡೆದು ನಂತರ ಟಿಪ್ಪು ಸರ್ಕಲ್‌ನ ಮುಸಲ್ಮಾನರ ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



**ಪ್ರಭಾಕರ್**

ಮೈಸೂರು,ಫೆ.17– ನಗರದ ತ್ಯಾಗರಾಜ ರಸ್ತೆಯಲ್ಲಿರುವ ಶ್ರೀ ಪ್ರಸನ್ನ ಸಾಯಿಬಾಬಾ ಮಂದಿರದ ಮುಖ್ಯಸ್ಥ ಪ್ರಭಾಕರ್ (63) ಮಂಗಳವಾರ ನಿಧನರಾದರು. ಮೃತರು ತಾಯಿ, ಸಹೋದರಿ ಸೇರಿದಂತೆ ಅಪಾರ ಬಂಧು–ಬಳಗ, ಭಕ್ತ ವೃಂದವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ನಾಳೆ (ಫೆ.18ರ ಬುಧವಾರ) ಬೆಳಗ್ಗೆ 10 ಗಂಟೆಗೆ ಚಾಮುಂಡಿಬೆಟ್ಟದ ಪಾದದ ಬಳಿಯ ಸ್ಮಶಾನದಲ್ಲಿ ನೇರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

**ಎಂ.ಸತೀಶ್**



ಮೈಸೂರು,ಫೆ.17– ಗಾಂಧಿನಗರದ ನಿವಾಸಿ, ಕೃಷಿ ಇಲಾಖೆ ನಿವೃತ್ತ ಅಧಿಕಾರಿ ಎಂ.ಸತೀಶ್ (79) ವಯೋಸಹಜ ಅನಾರೋಗ್ಯದಿಂದ ನಿಧನರಾದರು.

ಮೃತರು ಪತ್ನಿ ಸುಂದರಮ್ಮ, ಬಿಜೆಪಿ ಮುಖಂಡ ಎಸ್.ಶರತ್ ಸೇರಿದಂತೆ ಇಬ್ಬರು ಪುತ್ರರು, ಮೂವರು ಪುತ್ರಿಯರು, ಸೊಸೆ, ಪಾಲಿಕೆ ಮಾಜಿ ಸದಸ್ಯೆ ಡಾ.ಅಶ್ವಿನಿ ಶರತ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ನಾಳೆ (ಫೆ.18ರ ಬುಧವಾರ) ಮಧ್ಯಾಹ್ನ 1 ಗಂಟೆಗೆ ಉದಯಗಿರಿಯಲ್ಲಿರುವ ಗಾಂಧಿನಗರದ ಆದಿ ಕರ್ನಾಟಕ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.



**ಅರ್ಜುನಹಳ್ಳಿ ರಾಜಯ್ಯ**

ಮೈಸೂರು, ಫೆ.17– ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ, ಹಿರಿಯ ಕಾಂಗ್ರೆಸ್ ಮುಖಂಡರಾದ ಅರ್ಜುನಹಳ್ಳಿ ರಾಜಯ್ಯ(70) ಅವರು ನಿಧನರಾದರು. ಇವರು ಮೈಸೂರು ಜಿಲ್ಲಾ ವಕೀಲರ ಸಂಘದ ಸದಸ್ಯರು ಹಾಗೂ ಜಿಲ್ಲಾ ಕಾಂಗ್ರೆಸ್ ಕಾನೂನು ಘಟಕದ ಅಧ್ಯಕ್ಷ ಎ.ಆರ್.ಕಾಂತರಾಜ್ ಅವರ ತಂದೆ.

ಸ್ವಗ್ರಾಮ ಕೆ.ಆರ್.ತಾಲೂಕು, ಅರ್ಜುನಳ್ಳಿ ಗ್ರಾಮದಲ್ಲಿ ನಾಳೆ(ಬುಧವಾರ) ಮಧ್ಯಾಹ್ನ 1.30ಕ್ಕೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿಯ ಎನ್.ಭಾಸ್ಕರ್, ಅಪರ ಜಿಲ್ಲಾ ಸರ್ಕಾರಿ ವಕೀಲ ತಿಮ್ಮಯ್ಯ, ಮೈಸೂರು ವಕೀಲರ ಸಂಘದ ಉಪಾಧ್ಯಕ್ಷ ಎಂ.ವಿ.ಚಂದ್ರಶೇಖರ್, ಜಂಟಿ ಕಾರ್ಯದರ್ಶಿ ಚರಣ್‌ರಾಜ್, ವಕೀಲರಾದ ಹೆಚ್.ಎಸ್.ಪುಟ್ಟರಸ ಮುಂತಾದವರು ಅಂತಿಮ ದರ್ಶನ ಪಡೆದು, ಕುಟುಂಬದವರಿಗೆ ಸಾಂತ್ವನ ಹೇಳಿದರು.

## ಇಂದು ನೇರ ಫೋನ್–ಇನ್ ಕಾರ್ಯಕ್ರಮ

ಮೈಸೂರು, ಫೆ. 17–ಜೆಎಸ್‌ಎಸ್ ರೇಡಿಯೋ 91.2 FM ವತಿಯಿಂದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿವಿಧ ಸೇವಾ ಸೌಲಭ್ಯಗಳ ಕುರಿತು ನೇರ ಫೋನ್ ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ. ಕಾರ್ಯಕ್ರಮವು ಬುಧವಾರ ಫೆ.18ರಂದು ಬೆಳಿಗ್ಗೆ 11.30ರಿಂದ ಮಧ್ಯಾಹ್ನ 12.30ರವರೆಗೆ ಪ್ರಸಾರವಾಗಲಿದೆ.



ರೇಖಾ ಬಿ.ಪಿ.


ಕಾರ್ಯಕ್ರಮದಲ್ಲಿ ಮೈಸೂರು ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಶ್ರೀಮತಿ ರೇಖಾ ಬಿ.ಪಿ. ಭಾಗವಹಿಸಿ, ಇಲಾಖೆಯ ವಿವಿಧ ಯೋಜನೆಗಳು ಹಾಗೂ ವಿಶೇಷವಾಗಿ ವಿದ್ಯಾರ್ಥಿಗಳಿಗಾಗಿ ಇರುವ ಹಾಸ್ಟೆಲ್‌ಗಳ ಸೇವಾ ಸೌಲಭ್ಯಗಳ ಕುರಿತು ಮಾಹಿತಿ ನೀಡಲಿದ್ದಾರೆ. ಹಿಂದುಳಿದ ವರ್ಗಗಳ ಇಲಾಖೆಯ ಸೇವೆಗಳು, ಯೋಜನೆಗಳು, ಹಾಸ್ಟೆಲ್ ಸೌಲಭ್ಯಗಳು ಸೇರಿದಂತೆ ಯಾವುದೇ ಪ್ರಶ್ನೆಗಳು, ಸಮಸ್ಯೆಗಳು ಅಥವಾ ಮಾಹಿತಿಗಾಗಿ ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳು ನೇರವಾಗಿ ಕಾರ್ಯಕ್ರಮದ ವೇಳೆ ಕರೆಮಾಡಿ ಅಧಿಕಾರಿಗಳೊಂದಿಗೆ ಸಂವಾದಿಸಬಹುದು.

ಕರೆಮಾಡ ಬಹುದಾದ ದೂರವಾಣಿ ಸಂಖ್ಯೆಗಳು: 8296725912 / 0821–2546563. ಜಗತ್ತಿನ ಯಾವುದೇ ಭಾಗದಿಂದ ಕಾರ್ಯಕ್ರಮವನ್ನು ಕೇಳಲು ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಲಭ್ಯವಿರುವ JSS Radio ಮೊಬೈಲ್ ಆಪ್ ಅನ್ನು ಬಳಸಬಹುದು.

## ಫೆ.22, ವಧು–ವರರ ಸಮಾವೇಶ

ಮೈಸೂರು,ಫೆ.17– ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ವಿವಾಹ ವೇದಿಕೆ ವತಿಯಿಂದ ಫೆ.22 ರಂದು ವಧು–ವರರ ಸಮಾವೇಶವನ್ನು ಆಯೋಜಿಸಲಾಗಿದೆ. ಜೆಎಸ್‌ಎಸ್ ಆಸ್ಪತ್ರೆಯ ಆವರಣದಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಬೆಳಗ್ಗೆ 10 ಗಂಟೆಗೆ ವಧು–ವರರ ಸಮಾವೇಶ ನಡೆಯಲಿದೆ. ಸಮಾವೇಶದಲ್ಲಿ ಭಾಗವಹಿಸುವವರು ಮುಂಚಿತವಾಗಿ www.jssmtatrimony.com ವೆಬ್‌ಸೈಟ್ ಮೂಲಕ ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಜೆಎಸ್‌ಎಸ್ ಮಹಾವಿದ್ಯಾಪೀಠದ ವಿವಾಹ ವೇದಿಕೆ ದೂರವಾಣಿ 0821–2430322, 83101213228, 9480770855, 9481530441 ಸಂಪರ್ಕಿಸಬಹುದು ಎಂದು ಸಂಸ್ಥೆಯ ಕಾರ್ಯದರ್ಶಿ ಎಸ್.ಶಿವಕುಮಾರ ಸ್ವಾಮಿ ಪ್ರಕಟಣೆಯಲ್ಲಿ ಕೋರಿದ್ದಾರೆ.

## ಫೇಸ್ ರೆಕಗ್ನಿಷನ್ ಹಾಜರಾತಿ ಬಿಟ್ಟು, ಎಐ ತಂತ್ರಜ್ಞಾನದ ಮೂಲಕ ಮಕ್ಕಳಿಗೆ ಹಾಜರಾತಿ



ಮೈಸೂರು, ಫೆ.17(ಎಸ್‌ಪಿಎನ್)– ನಿರಂತರ ಕಾರ್ಯಕ್ರಮದಡಿ Face Recognition ತಂತ್ರಾಜ್ಞಾನದ ಮೂಲಕ ಸರ್ಕಾರಿ ಹಾಗೂ ಅನುದಾನಿತ ಶಾಲಾ ಮಕ್ಕಳ ಹಾಜರಾತಿಯನ್ನು ಖಚಿತಪಡಿಸುವ ಈ ಹಿಂದಿನ ಆದೇಶವನ್ನು ಹಿಂಪಡೆದು, AI-Based Student Facial Attendance Monitoring System ಮೊಬೈಲ್ ಆಧಾರಿತ ಹಾಜರಾತಿ ವ್ಯವಸ್ಥೆಯನ್ನು ಜಾರಿಗೊಳಿಸಿ ಶಾಲಾ ಶಿಕ್ಷಣ ಇಲಾಖೆ ಹೊಸ ಆದೇಶ ಹೊರಡಿಸಿದೆ.

2025–26ನೇ ಸಾಲಿನ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಗೆ ಸಂಬಂಧಿಸಿದ ರಾಜ್ಯ ಸರ್ಕಾರಿ ಹಾಗೂ ಅನುದಾನಿತ ಶಾಲಾ–ಕಾಲೇಜು ವಿದ್ಯಾರ್ಥಿಗಳ ಹಾಜರಾತಿಯನ್ನು AI-Based Student Facial Attendance Monitoring System ಮೊಬೈಲ್ ಆಪ್ಲಿಕೇಷನ್ ಮೂಲಕ ದಾಖಲಿಸುವ ನಿರಂತರ ಕಾರ್ಯಕ್ರಮವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ (ಇ–ಆಡಳಿತ) ಇಲಾಖೆಯು ಇ–ಆಡಳಿತ ಕೇಂದ್ರದ ಮೂಲಕ ಅಂದಾಜು ಮೊತ್ತ 2,16,87,232 (ಜಿಎಸ್‌ಟಿ ಸೇರಿ)ರೂ.ಗಳಲ್ಲಿ ಅಭಿವೃದ್ಧಿಪಡಿಸಿ, 2026–27ನೇ ಶೈಕ್ಷಣಿಕ ಸಾಲಿನ ಪ್ರಾರಂಭದಿಂದಲೇ ಕಡ್ಡಾಯವಾಗಿ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲಾ–ಕಾಲೇಜುಗಳಲ್ಲಿ ಅನುಷ್ಠಾನಗೊಳಿಸಲು ಆದೇಶ ಹೊರಡಿಸಲಾಗಿದೆ.

AI-Based Student Facial Attendance Monitoring System ಮೊಬೈಲ್ ಆಪ್ಲಿಕೇಷನ್ ಶಾಲಾ ಕಾಲೇಜುಗಳಲ್ಲಿ ದಿನನಿತ್ಯ ದಾಖಲಿಸುವ ಹಾಜರಾತಿ ವಿವರಗಳು ಎಸ್‌ಎಟಿಎಸ್ ತಂತ್ರಾಂಶದ ಮೂಲಕ ಸಾರ್ವಜನಿಕ ವೀಕ್ಷಣೆಗೆ ಲಭ್ಯವಾಗಿರತಕ್ಕದ್ದು, ನಿರಂತರ ಕಾರ್ಯಕ್ರಮದ ಆದೇಶ ಪ್ರತಿಯನ್ನು ಇಲಾಖೆಗಳ ಜಾಲಾತಾಣದಲ್ಲಿ ಪ್ರಕಟಿಸತಕ್ಕದ್ದು, ಸದರಿ ಕಾರ್ಯಕ್ರಮ ಪ್ರಗತಿಯ ವರದಿಯನ್ನು ಪ್ರತಿ ತಿಂಗಳು ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಎಂದು ಶಾಲಾ ಶಿಕ್ಷಣ ಇಲಾಖೆ ಅಧೀನ ಕಾರ್ಯದರ್ಶಿ ಶುಭಮಂಗಳ ಆದೇಶಿಸಿದ್ದಾರೆ.

# ಶಾಲಾ ವಸತಿನಿಲಯದ 3ನೇ ಮಹಡಿಯಿಂದ ಜಿಗಿದು 10ನೇ ತರಗತಿ ವಿದ್ಯಾರ್ಥಿ ಸಾವು

**ಚಿತ್ರದುರ್ಗ:** ಜಿಲ್ಲೆಯಲ್ಲಿ 10ನೇ ತರಗತಿ ವಿದ್ಯಾರ್ಥಿ ಶಾಲೆಯ ವಸತಿ ನಿಲಯದ ಮೂರನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ. ಈ ಸಂಬಂಧ ಶಾಲಾ ಆಡಳಿತ ಮತ್ತು ಇತರರ ವಿರುದ್ಧ ನಿರ್ಲಕ್ಷ್ಯದ ಪ್ರಕರಣವನ್ನು ಪೊಲೀಸರು ದಾಖಲಿಸಿದ್ದಾರೆ.

ಮೃತ ವಿದ್ಯಾರ್ಥಿಯನ್ನು ಕೊಟ್ರೇಶ್ ಎಂದು ಗುರುತಿಸಲಾಗಿದ್ದು, ಡಿವಿಎಸ್ ರೆಸಿಡೆನ್ಷಿಯಲ್ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು. ಪೊಲೀಸರ ಮಾಹಿತಿ ಪ್ರಕಾರ, ಘಟನೆ ಸೋಮವಾರ ಬೆಳಗ್ಗೆ ಸುಮಾರು 7:15ಕ್ಕೆ ನಡೆದಿದೆ.

ತನಿಖಾಧಿಕಾರಿಗಳು ಪರಿಶೀಲಿಸಿದ ಸಿಸಿಟಿವಿ ದೃಶ್ಯಗಳಲ್ಲಿ, ವಿದ್ಯಾರ್ಥಿ ವಸತಿ ನಿಲಯದ ರೇಲಿಂಗ್ ಬಳಿ ನಡೆದು ಬಂದು ಕೆಲ ಕ್ಷಣಗಳು ನಿಂತು ಬಳಿಕ ಬಾಲಕ ಜಿಗಿದಿರುವುದು ಕಂಡು ಬಂದಿದೆ. ಅದಕ್ಕೂ ಮೊದಲು ದಾರಿಯಲ್ಲಿ ಹಲವಾರು ಬಾರಿ ಅಲೆದಾಡುತ್ತಿರುವುದು ಕಂಡು ಬಂದಿದ್ದು, ಒತ್ತಡದಲ್ಲಿದ್ದಂತೆ ತೋರುತ್ತಿದೆ.



ಕೊಟ್ರೇಶ್


ವಿದ್ಯಾರ್ಥಿಯ ತಂದೆ ನೀಡಿದ ದೂರಿನ ಆಧಾರದ ಮೇಲೆ, ಶಾಲಾ ಆಡಳಿತ, ವಾರ್ಡನ್, ಮುಖ್ಯೋಪಾಧ್ಯಾಯರು ಹಾಗೂ ಸಹಪಾಠಿಯ ವಿರುದ್ಧ ನಿರ್ಲಕ್ಷ್ಯ ಸೇರಿದಂತೆ ಸಂಬಂಧಿತ ಆರೋಪಗಳಡಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ತಮ್ಮ ದೂರಿನಲ್ಲಿ, ತಮ್ಮ ಮಗನಿಗೆ ಸಹಪಾಠಿಯೊಂದಿಗೆ ಜಗಳವಾಗಿತ್ತು. ವಾಗ್ವಾದದ ವೇಳೆ ಆ ಸಹಪಾಠಿ ಚಪ್ಪಲಿಯಿಂದ ಹೊಡೆದು, ಕಬ್ಬಿಣದ ರಾಡ್‌ನಿಂದ ದಾಳಿ ಮಾಡಲು ಪ್ರಯತ್ನಿಸಿದ್ದಾನೆ ಎಂದು ತಂದೆ ಆರೋಪಿಸಿದ್ದಾರೆ.

ಪ್ರಾಥಮಿಕ ಮಾಹಿತಿಯ ಪ್ರಕಾರ, ವಿದ್ಯಾರ್ಥಿಯ ಕುಟುಂಬದವರು ಮತ್ತು ಕೆಲವು ಸ್ನೇಹಿತರೂ ಶಾಲೆಯ ವಾರ್ಡನ್ ಹಾಗೂ ಮುಖ್ಯೋಪಾಧ್ಯಾಯರು ಅವನ ಮೇಲೆ ಒತ್ತಡ ಹಾಕುತ್ತಿದ್ದರು ಎಂಬುದಾಗಿ ಪೊಲೀಸರಿಗೆ ತಿಳಿಸಿದ್ದಾರೆ.

ವಿದ್ಯಾರ್ಥಿ ಕೊಟ್ರೇಶ್ನ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಕಳುಹಿಸಲಾಗಿದೆ. ಘಟನೆಯ ಸಂಪೂರ್ಣ ಹಿನ್ನೆಲೆ ಮತ್ತು ದೂರಿನಲ್ಲಿ ಹೆಸರು ಉಲ್ಲೇಖಗೊಂಡಿರುವವರ ಪಾತ್ರ ಹಾಗೂ ಜವಾಬ್ದಾರಿಗಳನ್ನು ತಿಳಿದುಕೊಳ್ಳಲು ಸ್ಥಳೀಯ ಪೊಲೀಸರು ಹೆಚ್ಚಿನ ತನಿಖೆ ನಡೆಸುತ್ತಿದ್ದಾರೆ.

## ಉಚಿತ ಸಮಾಲೋಚನೆ



ಡಾ.ಶರತ್‌ಕುಮಾರ್

ಮೈಸೂರು.ಫೆ.17–ತುಮಕೂರಿನ ಸಿದ್ದಗಂಗಾ ವೈದ್ಯಕೀಯ ಕಾಲೇಜಿನಲ್ಲಿರುವ ಶ್ರೀ ಶಿವಕುಮಾರ ಸ್ವಾಮೀಜಿ ಆಸ್ಪತ್ರೆಯಲ್ಲಿ ಪ್ರತಿ ಗುರುವಾರ ಲೈಂಗಿಕ ತಜ್ಞ ಡಾ.ಸಿ.ಶರತ್‌ಕುಮಾರ್ ಉಚಿತ ಸಮಾಲೋಚನೆ ನಡೆಸಲಿದ್ದಾರೆ. ಡಾ.ಸಿ.ಶರತ್ ಕುಮಾರ್ ಅವರು ಲೈಂಗಿಕ ತೊಂದರೆ, ಪುರುಷ ಮತ್ತು ಸ್ತ್ರೀ ಬಂಜೆತನ, ಲೈಂಗಿಕ ಶಸ್ತ್ರ ಚಿಕಿತ್ಸೆಗಳನ್ನು ನಿರ್ವಹಿಸುವಲ್ಲಿ 40 ವರ್ಷಗಳ ಅನುಭವ ಹೊಂದಿದ್ದು, ಪ್ರತಿ ಗುರುವಾರ ತುಮಕೂರಿನ ಸಿದ್ದಗಂಗಾ ವೈದ್ಯಕೀಯ ಕಾಲೇಜಿನಲ್ಲಿರುವ ಶ್ರೀ ಶಿವಕುಮಾರ ಸ್ವಾಮೀಜಿ ಆಸ್ಪತ್ರೆಯಲ್ಲಿ ಮಧ್ಯಾಹ್ನ 2 ರಿಂದ ಸಂಜೆ 4 ಗಂಟೆಯವರೆಗೆ ಉಚಿತ ಸಮಾಲೋಚನೆ ನಡೆಸಲಿದ್ದಾರೆ. ಹೆಚ್ಚಿನ ಮಾಹಿತಿಗೆ ಸಿದ್ದಗಂಗಾ ಆಸ್ಪತ್ರೆ ದೂರವಾಣಿ 8162602222ಗೆ ಸಂಪರ್ಕಿಸಬಹುದು ಎಂದು ಮೈಸೂರು ಕ್ಲಿನಿಕಲ್ ಸೊಸೈಟಿ ಪ್ರಕಟಣೆಯಲ್ಲಿ ತಿಳಿಸಿದೆ.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

**18.2.2026 ಬುಧವಾರ, ಮಳೆ ನಕ್ಷತ್ರ: ಧನಿಷ್ಠ 6.02.2026 ರಿಂದ 18.02.2026 ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಶತಭಿಷ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ**

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಪಾರ್ಕಿಸನ್ ಕಾಯಿಲೆ, ಮೈಗ್ರೇನ್, ಕಣ್ಣು–ಮೂಗಿನ ಅಲರ್ಜಿ ಮತ್ತು ಕೊಲೆಸ್ಟ್ರಾಲ್‌ಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ**: ಸೋರಿಯಾಸಿಸ್(ಕಿಟಿಬಾ ಕುಷ್ಠ), ಶ್ರವಣ ಮತ್ತು ಕಿವಿಯ ಆರೈಕೆ ಕುರಿತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ
- **ಮೈಸೂರು ವಿಶ್ವವಿದ್ಯಾನಿಲಯ, ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗ, ವಿಶ್ವವಿದ್ಯಾನಿಲಯ ವೃತ್ತಿ ಕೇಂದ್ರ** : ಉದ್ಯೋಗಾರ್ಹತೆ, ಸಂವಹನ ಮತ್ತು ಮೃದು ಕೌಶಲ್ಯ ಕುರಿತು ರಾಷ್ಟ್ರೀಯ ತರಬೇತಿ ಕಾರ್ಯಕ್ರಮ, ಅಧ್ಯಕ್ಷತೆ : ಮೈಸೂರು ವಿವಿ ಕುಲಸಚಿವ ಪ್ರೊ. ಎನ್. ನಾಗರಾಜ, ಮುಖ್ಯ ಅತಿಥಿಗಳು : ಮೈಸೂರು ವಿವಿ ವೃತ್ತಿ ಕೇಂದ್ರದ ಸಂಯೋಜಕ ಪ್ರೊ. ಆರ್. ಮಹೇಶ್, ಉಪಸ್ಥಿತರು : ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ. ಬಿ. ಸಣ್ಣಪ್ಪ, ಪ್ರೊ.ಟಿ.ಎಸ್. ಜಗದೀಶ್ ಕುಮಾರ್, ಸ್ಥಳ : ವಿಚಾರ ಸಂಕಿರಣ ಕೊಠಡಿ, ಮಾನಸಗಂಗೋತ್ರಿ, ಬೆಳಗ್ಗೆ 10.15ಕ್ಕೆ
- **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ:** ಸಂಸ್ಥೆಯ 90ನೇ ವಾರ್ಷಿಕೋತ್ಸವ, ಮಹಾಶಿವರಾತ್ರಿ ಪ್ರಯುಕ್ತ ಗುಜರಾತಿನ ಸುಪ್ರಸಿದ್ಧ ಶ್ರೀ ಸೋಮನಾಥ ದಿವ್ಯ ದರ್ಶನ, ಸಂಜೆ 6.15 ರಿಂದ ಪ್ರಜಾಪಿತ ಬ್ರಹ್ಮಕುಮಾರಿಯ ಸಂಚಾಲಕರಾದ ಬಿ.ಕೆ. ದಾನೇಶ್ವರಿ ಅವರಿಂದ ಕೃತಜ್ಞತಾ ಭಾವ ಕುರಿತು ಪ್ರವಚನ, ಸಂಜೆ 7ಕ್ಕೆ ಜೆಎಸ್‌ಎಸ್ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ ಅವರಿಂದ ವ್ಯಕ್ತಿತ್ವ ವಿಕಾಸದ ಮೆಟ್ಟಿಲುಗಳು ಕುರಿತು ಉಪನ್ಯಾಸ, ರಾತ್ರಿ 8 ರಿಂದ ಅಧ್ಯಯನ ಶಾಲಾ ತಂಡದಿಂದ ಕೋಲಾಟ, ಸ್ಥಳ: ಹುಣಸೂರು ರಸ್ತೆ, ಐಶ್ವರ್ಯ ಪೆಟ್ರೋಲ್ ಬಂಕ್ ಎದುರು.
- **ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್** : ಕಲಾ ಸಪ್ತಮಿ ವಾರದ ಸಂಗೀತ ಕಾರ್ಯಕ್ರಮ, ಸಂಜೆ 5.30 ರಿಂದ ವಿದುಷಿ ಎಸ್.ಸಿ. ಸಹನಾ ಅವರಿಂದ ವೀಣಾ ವಾದನ, ವಿದ್ವಾನ್ ಕೆ.ಯು ಜಯಚಂದ್ರರಾವ್–ಮೃದಂಗ; ಸಂಜೆ 7.15 ರಿಂದ ಶ್ರೀವಿದ್ಯಾ ಕಾಮತ್ ಅವರಿಂದ ಒಂದು ಮಹಿಳಾ ನಾಟಕ, ಸ್ಥಳ: ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್, ವಿಜಯನಗರ 1ನೇ ಹಂತ.
- **ಕರ್ನಾಟಕ ನಾಟಕ ಅಕಾಡೆಮಿ, ಮಹಾಜನ ಕಾಲೇಜು** : ರಂಗ ತರಬೇತಿ ಶಿಬಿರದ ಸಮಾರೋಪ ಸಮಾರಂಭ, ಪುಸ್ತಕ ಬಿಡುಗಡೆ ಹಾಗೂ ಊರ ಸುಟ್ಟರೂ ಹನುಮಪ್ಪ ಹೊರಗ ನಾಟಕ ಪ್ರದರ್ಶನ, ಸಮಾರೋಪ ಭಾಷಣ : ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಡಾ. ನಾಗರಾಜಮೂರ್ತಿ, ಪ್ರಾಸ್ತಾವಿಕ ನುಡಿ : ಹಿರಿಯ ರಂಗಕರ್ಮಿ ಡಾ. ಜನಾರ್ಧನ್ (ಜನ್ನಿ), ಉಪಸ್ಥಿತರು : ವಿಜ್ಞಾನಿ ಡಾ. ರತಿರಾವ್, ಕರ್ನಾಟಕ ನಾಟಕ ಅಕಾಡೆಮಿ ಕುಲಸಚಿವೆ ಶ್ರೀಮತಿ ನೀಲಮ್ಮ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಅಧ್ಯಕ್ಷತೆ : ಮಹಾಜನ ಕಾಲೇಜು ಪ್ರಿನ್ಸಿಪಾಲ್ ಡಾ.ಬಿ.ಆರ್. ಜಯಕುಮಾರಿ, ಉಪಸ್ಥಿತರು : ಅಭಿರುಚಿ ಪ್ರಕಾಶನದ ಪ್ರಕಾಶಕ ಅಭಿರುಚಿ ಗಣೇಶ್, ಸ್ಥಳ: ಕಿರುರಂಗ ಮಂದಿರ, ಸಂಜೆ 6ಕ್ಕೆ.
- **ಮೈಸೂರು ಜಿಲ್ಲಾ ಅರಣ್ಯ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ** : ಸರ್ವ ಸದಸ್ಯರ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ವಿನಯಚಂದ್ರ, ಸ್ಥಳ: ಶ್ರೀ ರೇಣುಕಾದೇವಿ ದೇವಸ್ಥಾನ ಸಮುದಾಯ ಭವನ, ಇಂದಿರಾನಗರ, ಬೆಳಗ್ಗೆ 11ಕ್ಕೆ.

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಅಂಚೆ ದನಿ ಪಾರಿವಾಳದಿಂದ ಡ್ರೋನ್ ವರೆಗೆ ಅಂಚೆ ಪಯಣ–ಬಾನುಲಿ ಸರಣಿ, ಪ್ರಸ್ತುತಿ–ಡಾ. ಅಮ್ಮ ಸಂದ್ರ ಸುರೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಹಂಸಿನಿ ಎಸ್. ಕುಮಾರ್ ಹಾಗೂ ಎನ್.ಹೇಮಾ, ವ್ಯಾಖ್ಯಾನ–ಡಾ. ಹೆಚ್.ಎಂ. ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಪ್ರಾಯೋಜಿತ ಕಾರ್ಯಕ್ರಮ– ಲಿಡ್ಕರ್ ನಂಬಿಕೆ ನಿರಂತರ, ಪ್ರಾಯೋಜಕರು–ಡಾ. ಬಾಬುಜಗಜೀವನ್ ರಾಮ್ ಚರ್ಮೋದ್ಯಮಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು, 8.30 ಯುವವಾಣಿ : ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ದ್ವಿತೀಯ ಪಿ.ಯು.ಸಿ. ಪರೀಕ್ಷಾ ಸಿದ್ಧತೆ ಕುರಿತು ಬಾನುಲಿ ಸರಣಿ ಕಾರ್ಯಕ್ರಮ. ವಿಷಯ–ಗಣಿತ (Mathematics), ಭಾಗವಹಿಸುತ್ತಾರೆ–ಮಂಡ್ಯ ಜಿಲ್ಲೆ, ಮಳವಳ್ಳಿ ತಾಲೂಕು ಹಲಗೂರಿನ ಸರಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಮಹಂತೇಶ್ .ಎಂ, ಪ್ರಸ್ತುತಿ– ದಿಗ್ವಿಜಯ್ .ಬಿ., 9.15 ಚಿತ್ರಗೀತೆಗಳು, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

**ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ–ಭವ್ಯಾ ಪೈ, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಶಾಂತಿರಾವ್–ವೀಣಾ ವಾದನ, 4.00 ಮಹಿಳಾರಂಗ–ಚರ್ಚೆ, ವಿಷಯ– ರೇಡಿಯೋ ಅಂದು–ಇಂದು, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ –ಎಸ್‌ಎನ್. ಭಟ್ ಸೈಪಂಗಲ್ಲು, 5.00 ಕಟ್ಟೋಣ ಬನ್ನಿ ನಿರ್ಮಾಣ ತಾಂತ್ರಿಕತೆಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು–ಅಸೋಸಿಯೇಷನ್ ಆಫ್ ಕನ್ಸ್‌ಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಇಂಡಿಯಾ, ಮೈಸೂರು ಛಾಪ್ಟರ್, ವಿಷಯ–ಪರ್ಯಾಯ ಕಟ್ಟಡ ನಿರ್ಮಾಣ ಸಾಮಾಗ್ರಿಗಳು ಭಾಗವಹಿಸುತ್ತಾರೆ–ದಿಲೀಪ್ ಶ್ರೀನಿವಾಸ್, ಮ್ಯಾನೇಜರ್, ಎಲ್&ಟಿ, ಕಾರ್ಪೂರೇಟ್ ಟೆಕ್ನಾಲಜಿ ಮತ್ತು ಇಂಜಿನಿಯರ್ ಅಕಾಡೆಮಿ ಹಾಗೂ ಎ. ಸಿ. ಕದಿರ್ ವೇಲು, ಸ್ಟ್ರಕ್ಚರಲ್ ಕನ್ಸಲ್ಟಂಟ್, ಬೆಂಗಳೂರು, ಪ್ರಸ್ತುತಿ–ಎನ್.ಕೇಶವಮೂರ್ತಿ, 5.30 ಚಿತ್ರಗೀತೆಗಳು, 6.30 ICC T20 ಪುರುಷರ ವಿಶ್ವಕಪ್ ಪಂದ್ಯಾವಳಿ–2026 ಭಾರತ ಹಾಗೂ ನೆದರ್‌ಲ್ಯಾಂಡ್ ತಂಡಗಳ ನಡುವೆ ಅಹಮದಾಬಾದ್, ನರೇಂದ್ರಮೋದಿ ಕ್ರೀಡಾಂಗಣದಲ್ಲಿ ನಡೆಯುವ ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ.

# ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಡ್ರಗ್ಸ್ ಜಾಲ ಪೂರ್ಣ ನಾಶ ಮಾಡ್ತೇವೆ...

## -ಸೀಮಾ ಲಾಟ್ಕರ್, ಪೊಲೀಸ್ ಆಯುಕ್ತರು

ಮೈಸೂರು, ಫೆ.17(ಪಿಎಂ)- ಮೈಸೂರು ನಗರದಲ್ಲಿ ಗಾಂಜಾ, ಇತರೆ ಮಾದಕ ವಸ್ತುಗಳು ಹಾಗೂ ಮಾತ್ರೆ ರೂಪದ ಮಿಥಿಲೀನ್-ಡಯಾಕ್ಸಿ-ಮೆಥಾ-ಮೆಫೆಟಮೈನ್ (ಎಂಡಿಎಂಎ) ಉತ್ಪಾದನೆ ಮತ್ತು ಬಳಕೆ ವಿರುದ್ಧ ಮೈಸೂರು ನಗರ ಪೊಲೀಸರು, ಆಯುಕ್ತರಾದ ಸೀಮಾ ಲಾಟ್ಕರ್ ನೇತೃತ್ವದಲ್ಲಿ ಸಮರ ಸಾರಿದ್ದಾರೆ.

'ಮಾದಕ ದ್ರವ್ಯಗಳು ಮತ್ತು ಮನೋವಿಕೃತ ವಸ್ತುಗಳ ಅಕ್ರಮ ಸಾಗಣೆ ತಡೆಗಟ್ಟುವಿಕೆ (ಪಿಟ್ ಎನ್‌ಡಿಪಿಎಸ್) ಕಾಯ್ದೆ-1988' ಅನ್ವಯ ಪ್ರಥಮ ಮಾಹಿತಿ ವರದಿ (ಎಫ್‌ಐಆರ್) ದಾಖಲಿಸದೇ ಡ್ರಗ್ ಪೆಡ್ಲರ್‌ಗಳ (ಮಾದಕ ವಸ್ತು ಮಾರಾಟಗಾರರು) ಹೆಡೆಮುರಿ ಕಟ್ಟಲು ಸಜ್ಜಾಗಿದ್ದಾರೆ.

'ಮೈಸೂರು ಮಿತ್ರ'ನೊಂದಿಗೆ ಮಾತುಕತೆಯಲ್ಲಿ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರು, ತಮ್ಮ ಪೊಲೀಸರ ಮಹತ್ವದ ಕಾರ್ಯಾಚರಣೆ ವಿವರಿಸಿದ್ದಾರೆ. ಮೈಸೂರಿನಲ್ಲಿ ಮಾದಕ ವಸ್ತುಗಳ ಹಾವಳಿ ಬೆಳಕಿಗೆ ಬಂದ ನಂತರ ಪರಿಣಾಮಕಾರಿ ಕ್ರಮ ಕ್ಕಾಗಿ ಮೂರು ಕಾರ್ಯತಂತ್ರಗಳ ಪ್ರಸ್ತಾವನೆ ಸಿದ್ಧಪಡಿಸಿದ್ದು, ಈ ಪೈಕಿ ಒಂದನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇದರ ಅನುಮೋದನೆಗಾಗಿ ರಾಜ್ಯ ಕಾನೂನು-ಸುವ್ಯವಸ್ಥೆ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರ (ಎಡಿಜಿಪಿ) ಕಚೇರಿಗೆ ಕಳುಹಿಸಲಾಗಿದೆ.

ಈ ಕಾರ್ಯತಂತ್ರವು ಎಫ್‌ಐಆರ್ ದಾಖಲಾಗುವ ಸಾಮಾನ್ಯ ಕ್ರಿಮಿನಲ್ ಪ್ರಕರಣಕ್ಕಿಂತ ವಿಭಿನ್ನವಾಗಿದೆ. ಪಿಟ್ ಎನ್‌ಡಿಪಿಎಸ್ ಕಾಯ್ದೆ-1988ರಡಿ ಆರೋಪಿಯು ಮುಂದೆ ನಡೆಸಬಹುದಾದ ಅಪರಾಧ ತಡೆಗಟ್ಟುವ ನಿಟ್ಟಿನಲ್ಲಿ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬಹುದು. ಇದರಡಿ ಹೊಸದಾಗಿ ಪ್ರತ್ಯೇಕ ಎಫ್‌ಐಆರ್ ದಾಖಲಿಸದೇ ಆರೋಪಿಯ ಬಂಧನ ಮಾಡಬಹುದು. ಈ ಕಾಯ್ದೆಯಡಿ ಆಸ್ತಿ ಜಪ್ತಿ ಮಾಡುವುದೂ ಒಂದು ಬಲವಾದ ಕಾನೂನು ಅಸ್ತ್ರ. ಇದು ಮಾದಕ ವಸ್ತು ದಂಧೆಕೋರರ ಆರ್ಥಿಕ ಮೂಲವನ್ನು ಹತ್ತಿಕ್ಕಲು ಸಹಕಾರಿ ಎಂದು ವಿವರಿಸಿದರು.

**ಮಾದಕ ವಸ್ತು ಸೇವನೆ ವಿರುದ್ಧ ಪ್ರಹಾರ:** ಮೈಸೂರನ್ನು ಮಾದಕ ವಸ್ತು ಮುಕ್ತ ನಗರವನ್ನಾಗಿ ರೂಪಿಸುವುದು ತಮ್ಮ ಪ್ರಮುಖ ಆದ್ಯತೆಗಳಲ್ಲಿ ಒಂದಾಗಿದೆ. ಈವರೆಗೆ ವಿವಿಧ ಕಾನೂನು, ವಿಧಿಗಳಡಿ ಮಾದಕ ವಸ್ತು ಮಾರಾಟಗಾರರ (ಡ್ರಗ್ ಪೆಡ್ಲರ್) ವಿರುದ್ಧ ಮಾತ್ರ ಪ್ರಕರಣಗಳು ಹೆಚ್ಚಾಗಿ ದಾಖಲಿಸಲಾಗುತ್ತಿತ್ತು. ಈಗ ಸೇವನೆ ಮಾಡುವವರ ವಿರುದ್ಧವೂ ಕ್ರಮ ಕೈಗೊಳ್ಳುತ್ತಿದ್ದೇವೆ. ಏಕೆಂದರೆ ಸೇವನೆ ಮಾಡುವವರಿಂದ ಬೇಡಿಕೆ ಉಂಟಾಗದೇ ಮಾರಾಟಗಾರರು ಪೂರೈಕೆ ಮಾಡುವುದಿಲ್ಲ ಎಂದು ಹೇಳಿದರು.

2026, ಪ್ರಸಕ್ತ ವರ್ಷದ, ಒಂದೂವರೆ ತಿಂಗಳೊಳಗೆ 91 ಮಾದಕ ದ್ರವ್ಯ ಸೇವನೆ ವಿರುದ್ಧ ಪ್ರಕರಣಗಳನ್ನು ದಾಖಲಿಸಿದ್ದೇವೆ. ಆದರೆ ಹಿಂದಿನ ವರ್ಷದಲ್ಲಿ ಒಟ್ಟು 414 ಪ್ರಕರಣಗಳು ದಾಖಲಾಗಿವೆ. 2024ರಲ್ಲಿ ಕೇವಲ ಒಂದು ಪ್ರಕರಣ ದಾಖಲಾಗಿತ್ತು. ಪದೇ ಪದೆ ಮಾದಕ ವಸ್ತು ಸೇವನೆಗೆ ಮುಂದಾಗುವುದನ್ನು ತಡೆಗಟ್ಟಲು ಸೇವನೆ ಮಾಡುವವರ ವಿರುದ್ಧವೂ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅವರು ಹೇಳಿದರು.

ಈ ಮಾದಕ ವಸ್ತು ಪಿಡುಗಿನ ವಿರುದ್ಧದ ಹೋರಾಟದಲ್ಲಿ ಪೋಷಕರು ಹಾಗೂ ಶಿಕ್ಷಕರು ಪ್ರಮುಖ ಪಾತ್ರ ವಹಿಸಬೇಕು. ಮಕ್ಕಳು ತಡವಾಗಿ ಮನೆಗೆ ಬರುವುದು, ಅಸಹಜವಾಗಿ ವರ್ತಿಸುವುದು, ಹೀಗೆ ವಿಚಿತ್ರ ಲಕ್ಷಣಗಳು ಕಂಡು ಬಂದರೆ ಅವರನ್ನು ಪ್ರಶ್ನಿಸುವ ಜೊತೆಗೆ ಕೂಡಲೇ ಎಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು. ಅಲ್ಲದೆ, ತರಗತಿಗಳಲ್ಲಿ ಯಾವುದೇ ವಿದ್ಯಾರ್ಥಿ ವಿಚಿತ್ರವಾಗಿ ವರ್ತಿಸುತ್ತಿದ್ದರೆ, ಗೈರಾಗುತ್ತಿದ್ದರೆ ಅದಕ್ಕೆ ಮಾದಕ ವಸ್ತು ಕಾರಣವೇ ಎಂಬುದನ್ನು ಪರಿಶೀಲಿಸಲು ಶಿಕ್ಷಕರು ಮುಂದಾಗಬೇಕು. ಇದರಿಂದ ಮಾದಕ ವಸ್ತುಗಳ ವಿರುದ್ಧದ ಹೋರಾಟದಲ್ಲಿ ಸಂಘಟನಾತ್ಮಕವಾಗಿ ಬಹುತೇಕ ಜಯ ಸಾಧಿಸಿದಂತಾಗುತ್ತದೆ ಎಂದರು.

**ಸಿಸಿಟಿವಿ ಕ್ಯಾಮರಾಗಳ ಹೆಚ್ಚಳ:** ನಗರದಲ್ಲಿ ಸಿಸಿಟಿವಿ ಕ್ಯಾಮರಾಗಳ ಸಂಖ್ಯೆಯನ್ನು 34,806ಕ್ಕೆ ಹೆಚ್ಚಳ ಮಾಡಲಾಗಿದೆ. ಈ ಪೈಕಿ 2025ರಲ್ಲಿ 24,710 ಕ್ಯಾಮರಾ ಅಳವಡಿಸಿ, ಜಿಯೋ-ಟ್ಯಾಗ್ ಮಾಡಲಾಗಿದೆ. ವಾಣಿಜ್ಯ ಕಟ್ಟಡಗಳು, ಮನೆಗಳು ಹಾಗೂ ಇತರರು ಅಳವಡಿಸಿರುವ ಕ್ಯಾಮರಾಗಳು ಸಹ ಪೊಲೀಸರಿಗೆ ನೆರವಾಗಲಿವೆ. ಯಾವುದೇ ಅಪರಾಧ ಅಥವಾ ಅಪಘಾತ ಸಂಭವಿಸಿದಾಗ, ಪೊಲೀಸರು ಸಿಸಿಟಿವಿ ದೃಶ್ಯಗಳ ಹಾಗೂ ಜಿಯೋ ಟ್ಯಾಗಿಂಗ್ ಮಾಹಿತಿ ಅವಲಂಬಿಸಿ ಘಟನೆ ನಡೆದ ನಿಖರ ಸ್ಥಳವನ್ನು ಪತ್ತೆ ಮಾಡುತ್ತಾರೆ. ಜೊತೆಗೆ ಅಲ್ಲಿನ ಸುತ್ತಮುತ್ತಲ ಖಾಸಗಿ ಸಿಸಿಟಿವಿ ಕ್ಯಾಮರಾಗಳ ಗುರುತಿಸಲಾಗುತ್ತದೆ. ಇದು ತನಿಖೆ ಚುರುಕುಗೊಳಿಸಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಸಂಚಾರಕ್ಕೆ ಸಂಬಂಧಿಸಿದಂತೆ ಅನೇಕ ಅಪಘಾತಗಳಲ್ಲಿ ಗಾಯಗೊಂಡವರು ಸಕಾಲದಲ್ಲಿ ಚಿಕಿತ್ಸೆ ದೊರೆಯದೇ ಆಸ್ಪತ್ರೆಗಳಲ್ಲಿ ಸಾವನ್ನಪ್ಪುತ್ತಾರೆ. ಹಾಗಾಗಿ ಇದಕ್ಕೆ ಆಸ್ಪದವಾಗದಂತೆ ಗಾಯಗೊಂಡವರಿಗೆ ತಕ್ಷಣ ಚಿಕಿತ್ಸೆ ಲಭ್ಯವಾಗುವ ನಿಟ್ಟಿನಲ್ಲಿ ವಿಶೇಷ ಗಮನ ನೀಡಲು ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

**ಮಹಿಳೆ ಬಹು ಕಾರ್ಯ ಚತುರೆ:** ಪೊಲೀಸ್ ಇಲಾಖೆಗೆ ಸೇರುವ ಮಹಿಳೆಯರ ಸಂಖ್ಯೆ ಹೆಚ್ಚುತ್ತಿರುವುದು ಹಾಗೂ ಅವರಿಗೆ ಪ್ರಮುಖ ಜವಾಬ್ದಾರಿ ನೀಡುತ್ತಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸೀಮಾ ಲಾಟ್ಕರ್, ಮಹಿಳೆಯರು ಬಹುಕಾರ್ಯ ಸಾಮರ್ಥ್ಯ ಹೊಂದಿದ್ದು, ಬದ್ಧತೆ, ಸಮರ್ಪಣೆ ಮನೋಭಾವ ಹಾಗೂ ಕರ್ತವ್ಯದಲ್ಲಿ ದೃಢ ನಿಶ್ಚಯದಂತಹ ಗುಣಗಳನ್ನು ಸಹಜವಾಗಿಯೇ ಹೊಂದಿರುತ್ತಾರೆ ಎಂದು ಅವರು ಅಭಿಪ್ರಾಯಪಟ್ಟರು.

ಅನಗತ್ಯವಾಗಿ ದೀರ್ಘಕಾಲ ಕೆಲಸ ಮಾಡುವ ಬದಲು ಅಗತ್ಯತೆಯನ್ನು ಗುರುತಿಸಿ ಸ್ಮಾರ್ಟ್ ಪೊಲೀಸಿಂಗ್ ಇಂದಿನ ಅಗತ್ಯವಾಗಿದೆ. ನನ್ನ ದಿನದಾರಂಭ ಪ್ರಕರಣಗಳ ವಿಶ್ಲೇಷಣೆ, ಕಾರ್ಯವಿಧಾನದ ಅಧ್ಯಯನ ದೊಂದಿಗೆ ಆರಂಭವಾಗುತ್ತದೆ. ಖಾಕಿ ಸಮವಸ್ತ್ರ ಧರಿಸುವುದಕ್ಕೆ ನನ್ನಲ್ಲಿ ಹೆಮ್ಮೆಯ ಭಾವನೆ ಇದೆ. ಶಾಲಾ-ಕಾಲೇಜುಗಳ ಕಾರ್ಯಕ್ರಮಗಳಿಗೆ ನನ್ನನ್ನು ಅತಿಥಿಯಾಗಿ ಆಹ್ವಾನಿಸಲಾಗುತ್ತದೆ. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುವಾಗ, ಒಬ್ಬರಾದರೂ ಸ್ಫೂರ್ತಿ ಪಡೆದರೆ ಸಾರ್ಥಕವಾಗುತ್ತದೆ ಎಂದು ಸೀಮಾ ಲಾಟ್ಕರ್ ಹೇಳಿದರು.

**ಶೀಘ್ರ ನೂತನ ಡಿಸಿಪಿ:** ಈ ಹಿಂದೆ ಕಾನೂನು ಮತ್ತು ಸುವ್ಯವಸ್ಥೆ ಡಿಸಿಪಿ ಆಗಿ ಕಾರ್ಯ ನಿರ್ವಹಿಸುತ್ತಿದ್ದ ಬಿಂದು ಮಣಿಯವರು ಕೊಡಗು ಎಸ್ಪಿಯಾಗಿ ವರ್ಗಾವಣೆಯಾದ ನಂತರ ಈ ಸ್ಥಾನ ಖಾಲಿ ಇರುವ ಬಗ್ಗೆ ಆಯುಕ್ತರ ಗಮನಕ್ಕೆ ತಂದಾಗ, ಸರ್ಕಾರ ಶೀಘ್ರದಲ್ಲಿ ನೇಮಿಸುವ ಸಾಧ್ಯತೆ ಇದೆ ಎಂದು ತಿಳಿಸಿದರು.

**ಸುಗಮ ಸಂಚಾರ:** ನಗರದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಅಪರಾಧಗಳನ್ನು ಹತ್ತಿಕ್ಕಲು ಕೈಗೊಳ್ಳಲಾಗುತ್ತಿರುವ ಸಂಘಟಿತ ಪ್ರಯತ್ನಗಳ ಬಗ್ಗೆ ವಿವರಿಸಿದ ಅವರು, ಸಂಚಾರ ದಟ್ಟಣೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಹಾಗೂ ವಿಶೇಷವಾಗಿ ವಾರಾಂತ್ಯಗಳಲ್ಲಿ ಪ್ರವಾಸಿಗರ ವಾಹನಗಳಿಂದ ಉಂಟಾಗುವ ದಟ್ಟಣೆಯ ನಿರ್ವಹಣೆಯಲ್ಲಿ ಸುಗಮ ಸಂಚಾರ ಖಚಿತ ಪಡಿಸಲು ಕೈಗೊಂಡಿರುವ ಸುಧಾರಣಾ ಕ್ರಮಗಳ ಬಗ್ಗೆ ತಿಳಿಸಿದರು.

**ಆರಂಭದಲ್ಲೇ ಸವಾಲು:** 2024ರ ಜುಲೈ 5ರಂದು ನಾನು ಪೊಲೀಸ್ ಆಯುಕ್ತಾಗಿ ಅಧಿಕಾರ ಸ್ವೀಕರಿಸಿದ ದಿನದಿಂದಲೇ ಹಲವು ಪ್ರಕ್ಷುಬ್ಧ ಸನ್ನಿವೇಶಗಳನ್ನು ನಿಭಾಯಿಸಬೇಕಾಯಿತು. ರಾಜಕೀಯ ಪಕ್ಷವೊಂದು ಆಯೋಜಿಸಿದ್ದ 'ಚಾಮುಂಡಿಬೆಟ್ಟ ಚಲೋ' ಪ್ರತಿಭಟನೆ ಹಾಗೂ ಪಕ್ಷಗಳ ಕಾರ್ಯಕರ್ತರ ನಡುವಿನ ಘರ್ಷಣೆಗಳು ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಸವಾಲಾಗಿ ಪರಿಣಮಿಸಿದ್ದವು. **ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತ ಲೇಖಕಿ ಬಾನು ಮುಷ್ತಾಕ್ ಅವರನ್ನು 2025ರ ದಸರಾ ಮಹೋತ್ಸವ ಉದ್ಘಾಟನೆಗೆ ಆಯ್ಕೆ** ಮಾಡಿದಾಗ, ಉಂಟಾದ ಪರ-ವಿರೋಧದ ಸಂದಿಗ್ಧತೆ ಹೆಚ್ಚು ಸವಾಲಿನದ್ದಾಗಿತ್ತು.

ಯಾರೂ ಆತಂಕಕ್ಕೀಡಾಗುವ ಅಗತ್ಯವಿಲ್ಲವೆಂದು ನಾನು ಮೊದಲಿಗೆ ಸಾರ್ವಜನಿಕರಿಗೆ ಹೇಳಬಯಸುತ್ತೇನೆ. 'ಭಗವದ್ಗೀತೆಯ ಬೋಧೆಯಂತೆ, ವ್ಯಕ್ತಿಗೆ ಒಳ್ಳೆಯದೇನಾದರೂ ಲಭಿಸಿದರೆ, ಅದನ್ನು ಸಂಗ್ರಹಿಸಿಡುವುದಕ್ಕಿಂತ ತ್ಯಾಗ ಮತ್ತು ಸೇವೆಯ ಮೂಲಕ ಸಮಾಜಕ್ಕೆ ಮರಳಿ ನೀಡಬೇಕು' ಎಂಬುದರಲ್ಲಿ ತಾವು ದೃಢ ನಂಬಿಕೆ ಹೊಂದಿರುವುದಾಗಿ ತಿಳಿಸಿದರು.

### ವೃತ್ತಿಪರ ಅಪರಾಧ ಕಡಿಮೆ

ಹತ್ಯೆ, ಹತ್ಯೆ ಯತ್ನ ಮತ್ತು ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ ಬಹುತೇಕರು ಅಪರಾಧ ಹಿನ್ನೆಲೆ ಇಲ್ಲದ ಹಾಗೂ ವೃತ್ತಿಪರ ಅಪರಾಧ ಹಿನ್ನೆಲೆ ಇಲ್ಲದವರು. 2025ರಲ್ಲಿ ದಾಖಲಾಗಿರುವ 18 ಹತ್ಯೆ ಪ್ರಕರಣಗಳ ಪೈಕಿ ಕೇವಲ ಒಂದು ಪ್ರಕರಣ ಮಾತ್ರವೇ ರೌಡಿ ಶೀಟರ್‌ಗೆ ಸಂಬಂಧಿಸಿದೆ. ಮತ್ತೊಂದು ಪ್ರಕರಣದಲ್ಲಿ ಲಾಭಕ್ಕಾಗಿ ಕೊಲೆ ಮಾಡಿದ್ದಾಗಿದೆ. ಎರಡು ಪ್ರಕರಣಗಳಲ್ಲಿ ದ್ವೇಷದ ಹಿನ್ನೆಲೆಯಲ್ಲಿ ಹತ್ಯೆ ನಡೆಸಲಾಗಿದೆ. ಎರಡು ಹಠಾತ್ ಜಗಳಗಳಿಂದ ನಡೆದಿದ್ದರೆ, ಎರಡು ವಿವಾದಗಳಿಂದ ನಡೆದಿದೆ. ಮೂರು ಪ್ರಕರಣಗಳು ಕೌಟುಂಬಿಕ ಕಲಹದಿಂದ ಆಗಿವೆ. ನಾಲ್ಕು ಪ್ರಕರಣಗಳು ಅನೈತಿಕ ಸಂಬಂಧ ಹಾಗೂ ಪ್ರೀತಿ-ಪ್ರೇಮಕ್ಕೆ ಸಂಬಂಧಿಸಿವೆ. ಇದರಲ್ಲಿ ದಸರಾ ವಸ್ತುಪ್ರದರ್ಶನದ ಬಳಿ ಕಲಬುರಗಿಯ ಬಾಲಕಿಯ ಮೇಲೆ ಅತ್ಯಾಚಾರ-ಹತ್ಯೆಗೈದಿರುವುದೂ ಸೇರಿದೆ.



ಮೈಸೂರಿನ ನಜರ್‌ಬಾದ್‌ನ ತಮ್ಮ ಕಚೇರಿಯಲ್ಲಿ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ 'ಮೈಸೂರು ಮಿತ್ರ'ನೊಂದಿಗೆ ಮಾತು-ಕತೆ.

ಮೈಸೂರು ನಗರವನ್ನು ಮಾದಕ ವಸ್ತು ಮುಕ್ತ ಮಾಡುವುದು ನನ್ನ ಪ್ರಮುಖ ಆದ್ಯತೆಗಳಲ್ಲಿ ಒಂದಾಗಿದೆ. ಈವರೆಗೆ ವಿವಿಧ ಕಾನೂನುಗಳಡಿ ಕೇವಲ ಮಾದಕ ವಸ್ತುಗಳ ಮಾರಾಟಗಾರರ (ಡ್ರಗ್ ಪೆಡ್ಲರ್) ವಿರುದ್ಧ ಮಾತ್ರವೇ ಪ್ರಕರಣ ದಾಖಲಿಸಲಾಗುತ್ತಿತ್ತು. ಆದರೆ ಈಗ ಸೇವನೆ ಮಾಡುವವರ ವಿರುದ್ಧವೂ ನಾವು ಕ್ರಮಕ್ಕೆ ಮುಂದಾಗಿದ್ದೇವೆ. ಏಕೆಂದರೆ ಬೇಡಿಕೆ ಇಲ್ಲದಿದ್ದರೆ ಪೂರೈಕೆ ಕೂಡ ಇರುವುದಿಲ್ಲ. ಮೈಸೂರಿನ ನಾಗರಿಕರು ಮಾದಕ ವಸ್ತುಗಳ ಮಾರಾಟ, ಸೇವನೆ ಮತ್ತು ಸಂಗ್ರಹಣೆ ಕುರಿತು ಮಾಹಿತಿ ದೊರೆತಲ್ಲಿ 82779-48080 ಸಂಖ್ಯೆಗೆ ವಾಟ್ಸಪ್ ಮೂಲಕ ಅಥವಾ 112ಕ್ಕೆ ಕರೆ ಮಾಡಿ ತಿಳಿಸಲು ಮನವಿ ಮಾಡುತ್ತೇನೆ.

-ಸೀಮಾ ಲಾಟ್ಕರ್
ನಗರ ಪೊಲೀಸ್ ಆಯುಕ್ತರು, ಮೈಸೂರು.

### ಚಹಾ ಅಂಗಡಿಗಳಲ್ಲೂ ಮಾಹಿತಿ ಸಂಗ್ರಹ; ಯುವಕರಲ್ಲಿನ ಮಾದಕ ವ್ಯಸನಕ್ಕೆ ಕಡಿವಾಣ

ಮಾದಕ ದ್ರವ್ಯ ವ್ಯಸನ ಹಾಗೂ ತಂಬಾಕು ಸೇವನೆಯಲ್ಲಿ ಯುವಕರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಚಹಾ ಅಂಗಡಿಗಳು ಸೇರಿದಂತೆ ಯುವಕರು ಸೇರುವ ನಾನಾ ಸ್ಥಳಗಳಿಗೆ ಪೊಲೀಸರನ್ನು ನಿಯೋಜಿಸಲಾಗಿದೆ. ಪ್ರತಿದಿನ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸುತ್ತಾರೆ.


**ಕೋಟ್ಪಾ ಪ್ರಕರಣಗಳು:** ಇದಕ್ಕೆ ಉದಾಹರಣೆಯಾಗಿ ಪ್ರಸಕ್ತ ವರ್ಷದ ಕೇವಲ ಒಂದೂವರೆ ತಿಂಗಳಲ್ಲಿ ಸಿಗರೇಟ್ ಮತ್ತು ಇತರ ತಂಬಾಕು ಉತ್ಪನ್ನಗಳು ಕೋಟ್ಪಾ ಕಾಯ್ದೆ 2003ರ ಅಡಿಯಲ್ಲಿ 2,524 ಪ್ರಕರಣಗಳನ್ನು ದಾಖಲಿಸಲಾಗಿದೆ. ಅಲ್ಲದೆ, 4,313 ಪೆಟಿ (ಸಣ್ಣ) ಪ್ರಕರಣಗಳನ್ನು ದಾಖಲಿಸಲಾಗಿದೆ.

ಕಳೆದ ವರ್ಷ ಕೋಟ್ಪಾ ಅಡಿಯಲ್ಲಿ 8,908 ಪ್ರಕರಣಗಳನ್ನು ದಾಖಲಿಸಲಾಗಿದ್ದು, 2024ರಲ್ಲಿ 4,278 ಪ್ರಕರಣಗಳು ದಾಖಲಿಸಲಾಗಿದೆ. 2025ರಲ್ಲಿ ಒಟ್ಟು 12,480 ಪೆಟಿ ಕೇಸ್‌ಗಳು ಮತ್ತು 2024ರಲ್ಲಿ 7,116 ಪೆಟಿ ಕೇಸ್‌ಗಳು ದಾಖಲಾಗಿವೆ. ಡ್ರಗ್ ಪೆಡ್ಲರ್‌ಗಳ ವಿರುದ್ಧವೂ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ. 2025ರಲ್ಲಿ 12 ಪೆಡ್ಲರ್‌ಗಳನ್ನು ಗಡಿಪಾರು ಮಾಡಿದ್ದು, ಪ್ರಸಕ್ತ ವರ್ಷದಲ್ಲಿ ಮತ್ತೊಬ್ಬ ಪೆಡ್ಲರ್ ಗಡಿಪಾರು ಮಾಡಲು ಪ್ರಸ್ತಾವನೆ ಸಲ್ಲಿಸಲಾಗಿದೆ.

### ಪುಡಿ ರೌಡಿಗಳಾಗುತ್ತಿರುವ ಯುವಕರ ಚಲನ-ವಲನದ ಮೇಲೆ ತೀವ್ರ ನಿಗಾ

ನಗರದಲ್ಲಿ ಆರಂಭಿಕ ಹಂತದಲ್ಲೇ ರೌಡಿ ಚಟುವಟಿಕೆಗಳನ್ನು ನಿಗ್ರಹಿಸಲು ನಗರ ಪೊಲೀಸರು ಮುಂದಾಗಿದ್ದು, ಪುಡಿ ರೌಡಿಗಳಂತಾಗುತ್ತಿರುವ ಯುವಕರನ್ನು ಗುರುತಿಸಿ, ಅವರ ಚಲನವಲನಗಳ ಮೇಲೆ ನಿಗಾ ವಹಿಸಲಾಗಿದೆ. ವಿವಿಧ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಇಂತಹ 148 ಮಂದಿ ಪುಂಡರನ್ನು ಗುರುತಿಸಲಾಗಿದೆ. ಅವರ ಚಟುವಟಿಕೆಗಳ ಬಗ್ಗೆ ಸ್ಥಳೀಯ ಗುಪ್ತಚರ ಮಾಹಿತಿ ಆಧಾರದಲ್ಲಿ ನಿರಂತರವಾಗಿ ನಿಗಾ ಇಡಲಾಗುತ್ತಿದೆ.

ರೌಡಿ ಚಟುವಟಿಕೆಗಳ ಸಂಬಂಧ ಸೆಕ್ಯೂರಿಟಿ ಕೇಸ್‌ಗಳನ್ನು ದಾಖಲಿಸಲಾಗುತ್ತಿದೆ. ಜೊತೆಗೆ ಅಂತಹವರನ್ನು ಗಡಿಪಾರು ಮಾಡುವ ಆದೇಶಗಳನ್ನು ಸಹ ಹೊರಡಿಸಲಾಗುತ್ತಿದೆ. ಈವರೆಗೆ 56 ಸೆಕ್ಯೂರಿಟಿ ಕೇಸ್‌ಗಳನ್ನು ದಾಖಲು ಮಾಡಿದ್ದು, ಈ ಪೈಕಿ 36 ರೌಡಿ ಚಟುವಟಿಕೆಗಳಿಗೆ ಸಂಬಂಧಿಸಿದ್ದಾಗಿವೆ. 2025ರಲ್ಲಿ 856 ಹಾಗೂ 2024ರಲ್ಲಿ 1,021 ಸೆಕ್ಯೂರಿಟಿ ಕೇಸ್‌ಗಳನ್ನು ದಾಖಲಿಸಲಾಗಿದೆ.



ಜಯಲಕ್ಷ್ಮೀಪುರಂ ಪೊಲೀಸ್ ಠಾಣೆಯಲ್ಲಿ ಇನ್ಸ್‌ಪೆಕ್ಟರ್ ಕುಮಾರ್ 'ವಿಮುಕ್ತಿ ಪೋಸ್ಟರ್' ಅಂಟಿಸುತ್ತಿರುವುದು.

### ರೌಡಿ ಚಟುವಟಿಕೆ ನಿಷ್ಕ್ರೀಯ

ನಗರದಲ್ಲಿ 650ಕ್ಕೂ ಹೆಚ್ಚು ಮಂದಿ ರೌಡಿಶೀಟರ್‌ಗಳ ಪಟ್ಟಿ ಮಾಡಿದ್ದರೂ ಅವರಲ್ಲಿ ಕೆಲವೇ ಮಂದಿಯಷ್ಟೇ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಬಹುತೇಕರು ಸಣ್ಣಪುಟ್ಟ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿದ್ದು, ಉಳಿದಂತೆ ಮತ್ತೋ ವೃದ್ಧರಾದವರು ಹಾಗೂ ದೈಹಿಕವಾಗಿ ದುರ್ಬಲರಾದವರು ಇದ್ದಾರೆ.

ಕಾನೂನು ಪ್ರಕಾರ, 10 ವರ್ಷಗಳ ಕಾಲ ಯಾವುದೇ ಎಫ್‌ಐಆರ್ ದಾಖಲಾಗದೇ ಅಪರಾಧ ಚಟುವಟಿಕೆಯಿಂದ ದೂರವಿದ್ದರೆ, ಅನಾರೋಗ್ಯದಿಂದ ಹಾಸಿಗೆ ಹಿಡಿದು ಅಪರಾಧ ಚಟುವಟಿಕೆಗಳಿಂದ ಮುಕ್ತವಾಗಿದ್ದರೆ, ಅಂತಹವರ ಹೆಸರುಗಳನ್ನು ನಿಯಮಾನುಸಾರ ರೌಡಿಶೀಟರ್ ಪಟ್ಟಿಯಿಂದ ಕೈಬಿಡಲಾಗುತ್ತದೆ.

### ನಗರ ಪೊಲೀಸ್ ಸರಹದ್ದು ವಿಸ್ತರಣೆ

ಮೈಸೂರು ನಗರವು ವೇಗವಾಗಿ ಬೆಳೆಯುತ್ತಿರುವ ಕಾರಣ ನಗರ ಪೊಲೀಸ್ ಸರಹದ್ದು ವಿಸ್ತರಿಸುವ ಸಂಬಂಧ ಪರಿಶೀಲನೆ ನಡೆಯುತ್ತಿದೆ. ಪ್ರಸ್ತುತ ಜಿಲ್ಲಾ ಪೊಲೀಸ್ ವ್ಯಾಪ್ತಿ ಹೊಂದಿರುವ ಮೈಸೂರು ನಗರದ ಹೊರವಲಯದ ಪ್ರದೇಶಗಳನ್ನು ನಗರ ವ್ಯಾಪ್ತಿಗೆ ಸೇರಿಸುವ ಸಂಬಂಧ ಪ್ರಸ್ತಾವನೆ ಸಿದ್ಧಪಡಿಸಲಾಗುತ್ತಿದೆ. ತ್ವರಿತ ಕ್ರಮಕ್ಕೆ ಪೂರಕವಾಗಿ ಈ ವ್ಯವಸ್ಥೆ ಮಾಡಲು ಪರಿಶೀಲನೆ ನಡೆಯುತ್ತಿದೆ.



ಎಸಿಪಿ ರಾಜೇಂದ್ರ ನೇತೃತ್ವದಲ್ಲಿ 'ಡ್ರಗ್ಸ್ ಮುಕ್ತ ಮೈಸೂರಿನತ್ತ ಒಂದು ಹೆಜ್ಜೆ-ವಿಮುಕ್ತಿ' ಜಾಗೃತಿ ಕಾರ್ಯಕ್ರಮದಲ್ಲಿ ಮೈಸೂರು ಮಹಾರಾಣಿ ಜೂನಿಯರ್ ಕಾಲೇಜು ವಿದ್ಯಾರ್ಥಿನಿಯರು ಅತ್ಯಂತ ಉತ್ಸಾಹದಿಂದ ಪಾಲ್ಗೊಂಡಿದ್ದರು.





ಲಷ್ಕರ್ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಎನ್.ಲೋಲಾಕ್ಷಿ ಅವರ ನೇತೃತ್ವದಲ್ಲಿ ಸಂತ ಫಿಲೋಮಿನಾ ಚರ್ಚ್ ಎದುರು 'ವಿಮುಕ್ತಿ-ಮಾದಕ ವಸ್ತು ವಿರುದ್ಧದ ಜಾಗೃತಿ ಅಭಿಯಾನ'ದಡಿ ಅರಿವು ಮೂಡಿಸಲಾಯಿತು. ಮತ್ತೊಂದು ಚಿತ್ರದಲ್ಲಿ ಮಂಡಿ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ದಿವಾಕರ್, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಸರ್ಕಾರಿ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳೊಂದಿಗೆ ವಿಮುಕ್ತಿ ಪೋಸ್ಟರ್ ಪ್ರದರ್ಶಿಸಿ ಜಾಗೃತಿ ಮೂಡಿಸಿದರು.

---



# ಮುಡಾ ಮಾಜಿ ಆಯುಕ್ತ ಒಬ್ಬ ಕರೆಪ್ಟ್...! ಸಿದ್ದರಾಮಯ್ಯ ಇದು ಆಡಳಿತನಾ...!!

## ಎಂಎಲ್ಸಿ ಹೆಚ್.ವಿಶ್ವನಾಥ್ ವಾಗ್ದಾಳಿ

ಬೆಂಗಳೂರು: ಮುಡಾ (ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ) ಮಾಜಿ ಆಯುಕ್ತ ನಟೇಶ್‌ಗೆ ಮುಂಬಡ್ತಿ ನೀಡಿರುವ ವಿಚಾರಕ್ಕೆ ಸಂಬಂಧಿಸಿದಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ತೀವ್ರ ವಾಗ್ದಾಳಿ ನಡೆಸಿದ್ದಾರೆ. ನಟೇಶ್‌ಗೆ ಪ್ರಮೋಷನ್ ಕೊಡಲು ಲಂಚ ನೀಡಲಾಗಿದೆ ಎಂಬ ಸ್ನೇಹಮಯಿ ಕೃಷ್ಣ ಆರೋಪದ ಬೆನ್ನಲ್ಲೇ, ಸರ್ಕಾರದ ನಡೆಗೆ ವಿಶ್ವನಾಥ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಇದೇನು ಹೊಸ ವಿಷಯವಲ್ಲ. ಈ ಎಲ್ಲ ವಿಚಾರಗಳು ಈಗಾಗಲೇ ಜನರಿಗೆ ಗೊತ್ತಿರುವ ಸಂಗತಿಗಳೇ. ನಟೇಶ್ ಒಬ್ಬ ಕರೆಪ್ಟ್ ಅಧಿಕಾರಿ ಎನ್ನುವುದು ಎಲ್ಲರಿಗೂ ತಿಳಿದಿರುವ ಸತ್ಯ ಎಂದು ಹೇಳಿದ್ದಾರೆ.

**ಅರೆಸ್ಟ್ ಮಾಡಿದರೆ ಸತ್ಯ ಹೊರಬರುತ್ತೆ ಅನ್ನೋ ಭಯ:** ನಟೇಶ್ ವಿರುದ್ಧ ಗಂಭೀರ ಆರೋಪಗಳು ಮತ್ತು ತನಿಖೆಗಳು ನಡೆಯುತ್ತಿದ್ದರೂ ಕೂಡ ಸರ್ಕಾರ ಅವರ ವಿರುದ್ಧ ಯಾವುದೇ ಕಠಿಣ ಕ್ರಮ ಕೈಗೊಂಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ ವಿಶ್ವನಾಥ್, 'ಈ ಸರ್ಕಾರ ಇನ್ನೂ ಅವರನ್ನ ಅರೆಸ್ಟ್ ಮಾಡಿಲ್ಲ. ಏಕೆಂದರೆ, ಅವನನ್ನ ಅರೆಸ್ಟ್ ಮಾಡಿದರೆ ಸಿದ್ದರಾಮಯ್ಯ ಅವರದ್ದೇ ಅನೇಕ ಸಂಗತಿಗಳು ಹೊರಗೆ ಬರುತ್ತವೆ ಅನ್ನೋ ಭಯದಲ್ಲಿ ಬಂಧಿಸಿಲ್ಲ' ಎಂದು ಕಿಡಿಕಾರಿದ್ದಾರೆ.

**ಯಾವ ರಾಜ್ಯದಲ್ಲಿ ಹೀಗಿದೆ:** ನಟೇಶ್ ವಿರುದ್ಧ ಸೈಟ್ ಹಗರಣ, ಮುಡಾ ದುರುಪಯೋಗ ಸೇರಿದಂತೆ ಗಂಭೀರ ಆರೋಪಗಳ ತನಿಖೆ ನಡೆಯುತ್ತಿದ್ದರೂ ಕೂಡ ಮುಂಬಡ್ತಿ ನೀಡಿರುವುದನ್ನು ಪ್ರಶ್ನಿಸಿದ ವಿಶ್ವನಾಥ್, ತನಿಖೆ ನಡೆಯುತ್ತಿದ್ದರೂ ಮುಂಬಡ್ತಿ ಕೊಟ್ಟಿದ್ದಾರೆ ,ಯಾವ ರಾಜ್ಯದಲ್ಲಿದೆ ಈ ರೀತಿ...! ಸೈಟ್ ಕದ್ದಿದ್ದಿಯಾ, ಮುಡಾ ಹಾಳು ಮಾಡಿದ್ದೀಯಾ ಅಂತ ತನಿಖೆ ನಡೆಯುತ್ತಿದ್ದರೆ ಅವನಿಗೆ ಪ್ರಮೋಷನ್ ಕೊಟ್ಟಿದ್ದೀರಾ. ಥೂ...ಥೂ..ನಗೆ ಪಾಟಲು, ನಾಚಿಕೆ ಆಗುತ್ತೆ ಸಿದ್ದರಾಮಯ್ಯ, ಇದು ಒಂದು ಆಡಳಿತನಾ...! ಛೀ...ಛೀ...ನೋ... ಎಂದು ಅತ್ಯಂತ ಕಠಿಣ ರೀತಿ ಟೀಕಿಸಿದರು.

**ಮೈಸೂರನ್ನು ಹಾಳು ಮಾಡಿದ ಆಡಳಿತ:** ಮೈಸೂರು ನಗರಾಭಿವೃದ್ಧಿಯಲ್ಲಿ ನಡೆದ ಅಕ್ರಮಗಳ ಬಗ್ಗೆ ಪ್ರಸ್ತಾಪಿಸಿ, 'ಮೈಸೂರನ್ನ ಹಾಳು ಮಾಡಿದ್ದೀರಲ್ಲಪ್ಪಾ. ಮುಡಾ ಹಾಳು ಮಾಡಿದವರನ್ನ ರಕ್ಷಿಸಿ, ಅವರಿಗೆ ಬಹುಮಾನವಾಗಿ ಮುಂಬಡ್ತಿ ಕೊಡ್ತೀರಾ!' ಎಂದು ಸರ್ಕಾರವನ್ನು ಪ್ರಶ್ನಿಸಿದರು.

**ಕಾಂಗ್ರೆಸ್ ಶಾಸಕರ ವಿದೇಶಿ ಪ್ರವಾಸ:** ಇದೇ ವೇಳೆ, ಕಾಂಗ್ರೆಸ್ ಶಾಸಕರ ವಿದೇಶಿ ಪ್ರವಾಸ ವಿಚಾರದಲ್ಲೂ ಸಿಎಂ ಸಿದ್ದರಾಮಯ್ಯ ವಿರುದ್ಧ ಎಚ್.ವಿಶ್ವನಾಥ್ ಅಸಮಾಧಾನ ವ್ಯಕ್ತಪಡಿಸಿದರು. ಕರ್ನಾಟಕದ ರಾಜಕಾರಣ ದಿನೇ ದಿನೆ ಅಧೋಗತಿಗೆ ಇಳಿಯುತ್ತಿದೆ. ಶಾಸಕರು ಯಾಕೆ ವಿದೇಶಕ್ಕೆ ಹೋಗುತ್ತಿದ್ದಾರೆ ಅನ್ನುವುದು ಜನರಿಗೆ ಗೊತ್ತಾಗಲ್ಲ ಅನ್ನೋ ಭ್ರಮೆ ಯಾರಿಗೂ ಬೇಡ. ಕರ್ನಾಟಕದಲ್ಲಿ 90% ಸಾಕ್ಷರತೆ ಇದೆ. ಜನರು ಮೂರ್ಖರಲ್ಲ ಎಂದರು.

**ಜನರನ್ನು ಫೂಲ್ ಮಾಡೋಕೆ ಆಗಲ್ಲ:** ನೀವು ಮಾಡುತ್ತಿರುವುದು ಜನರಿಗೆ ಚೆನ್ನಾಗಿ ಅರ್ಥವಾಗುತ್ತಿದೆ. ಸಿದ್ದರಾಮಯ್ಯ ಜನರನ್ನು ಫೂಲ್ ಮಾಡೋಕೆ ಆಗಲ್ಲ. ಏನೇ ಇದ್ದರೂ ನೇರವಾಗಿ ಹೇಳಿ, ಕುರ್ಚಿ ಉಳಿಸಿಕೊಳ್ಳಲು ಈ ರೀತಿ ಸರ್ಕಸ್ ಬೇಕಾ! ಇದರಿಂದ ಜನರಿಗೆ ಏನು ಪ್ರಯೋಜನ? ಕಳೆದ 2.5 ವರ್ಷಗಳಿಂದ ಇದೇ ಕಥೆ. ಕರ್ನಾಟಕದಲ್ಲಿ ಆಡಳಿತವೂ ಇಲ್ಲ, ಅಭಿವೃದ್ಧಿಯೂ ಇಲ್ಲ. ಬರೀ ಕಿರಿಚಾಟ, ಎರೆಚಾಟ ಮಾತ್ರ ನಡೆಯುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

**ಜನ ಓಟ್ ಕೊಟ್ಟಿರೋದು ಅಭಿವೃದ್ಧಿಗೆ, ನಾಟಕಕ್ಕೆ ಅಲ್ಲ:** ಜನರು ನಿಮಗೆ ಅಧಿಕಾರ ಕೊಟ್ಟಿದ್ದು ವಿದೇಶ ಪ್ರವಾಸಕ್ಕೆ ಹೋಗಲು ಅಲ್ಲ. ಒಬ್ಬರಿಗೊಬ್ಬರು ಕಿತ್ತಾಡಲು, ಬೈದಾಡಲು ಅಲ್ಲ. ಜನರ ಕೆಲಸ ಮಾಡಲು, ರಾಜ್ಯದ ಅಭಿವೃದ್ಧಿಗೆ ಈ ಓಟ್ ನೀಡಲಾಗಿದೆ. ಆದರೆ ಸಿದ್ದರಾಮಯ್ಯ ನಾಯಕತ್ವದಲ್ಲಿ ಆ ಓಟ್ ದುರುಪಯೋಗವಾಗುತ್ತಿದೆ. ಇದು ಸರಿಯಲ್ಲ ಎಂದು ಎಚ್.ವಿಶ್ವನಾಥ್ ಟೀಕಿಸಿದರು.

# ರೈತರ ಮದುವೆಯಾಗುವ ಹೆಣ್ಣು ಮಕ್ಕಳಿಗೆ ಬಜೆಟ್‌ನಲ್ಲಿ ಸರ್ಕಾರಿ ಕೆಲಸದಲ್ಲಿ ಶೇ.20 ಮೀಸಲಾತಿ ಘೋಷಣೆಗೆ ಆಗ್ರಹ

ಮೈಸೂರು, ಫೆ.17(ಎಸ್‌ಪಿಎನ್)- ಈ ಬಾರಿ ರಾಜ್ಯ ಬಜೆಟ್‌ನಲ್ಲಿ ಯುವ ರೈತರನ್ನು ಮದುವೆಯಾಗುವ ಹೆಣ್ಣು ಮಕ್ಕಳಿಗೆ ಸರ್ಕಾರಿ ಕೆಲಸದಲ್ಲಿ ಶೇ.20ರಷ್ಟು ಮೀಸಲಾತಿ ಘೋಷಣೆ ಮಾಡಬೇಕು ಎಂದು ರೈತ ಮುಖಂಡ ಕುರುಬೂರು ಶಾಂತಕುಮಾರ್ ಒತ್ತಾಯಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಬದಲಾದ ಕಾಲಘಟ್ಟದಲ್ಲಿ ರೈತ ಕುಟುಂಬದ ಯುವಕರನ್ನು ಹೆಣ್ಣು ಮಕ್ಕಳು ಮದುವೆಯಾಗುತ್ತಿಲ್ಲ. ಹಳ್ಳಿಗಳಲ್ಲಿ ಮದುವೆಯಾಗದೇ ಯುವಕರ ಸಂಖ್ಯೆ ದಿನೇ ದಿನೆ ಹೆಚ್ಚಾಗುತ್ತಿದೆ. ಹಾಗಾಗಿ ಸರ್ಕಾರದಿಂದ ಕೃಷಿಯಲ್ಲಿ ತೊಡಗುವ ಯುವಕರನ್ನು ಮದುವೆ ಯಾಗುವ ಹೆಣ್ಣು ಮಕ್ಕಳಿಗೆ ಮೀಸಲಾತಿ ಘೋಷಣೆ ಮಾಡುವಂತೆ ಒತ್ತಾಯಿಸಿದ್ದಾರೆ.

ರಾಜ್ಯದ ಎಲ್ಲಾ ಕೆರೆಗಳ ಹೂಳು ತೆಗೆಸಿ, ಅಲ್ಲಿನ ಮಣ್ಣನ್ನು ರೈತರ ಜಮೀನಿಗೆ ಸಾಗಿಸಲು ಅವಕಾಶ ನೀಡಬೇಕು. ಕಿಸಾನ್ ಸಮ್ಮಾನ್ ಯೋಜನೆ ಮರು ಜಾರಿಗೊಳಿಸಿ, ರೈತರಿಗೆ ಹತ್ತು ಸಾವಿರ ಸಹಾಯಧನ ಒದಗಿಸಬೇಕು. ಭೂ ಸುಧಾರಣಾ ತಿದ್ದುಪಡಿ ಕಾಯ್ದೆ, ಎಪಿಎಂಸಿ ತಿದ್ದುಪಡಿ ಕಾಯ್ದೆ ರದ್ದು ಮಾಡಬೇಕು ಎಂದು ಒತ್ತಾಯಿಸಿದ್ದಾರೆ.



ಕುರುಬೂರು ಶಾಂತಕುಮಾರ್

ಎಪಿಎಂಸಿಗಳಲ್ಲಿ ರೈತರ ಉತ್ಪನ್ನಗಳ ಅಡಮಾನ ಸಾಲ ನೀಡುವ ಯೋಜನೆಗೆ ರಾಜ್ಯ ಸರ್ಕಾರ ಅನುದಾನ ನೀಡಬೇಕು. ಕಳಪೆ ಕೀಟನಾಶಕ, ನಕಲಿ ಬೀಜ ಮಾರಾಟ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ರೈತರ ಎಲ್ಲಾ ಬೆಳೆಗಳಿಗೂ ಬೆಳೆವಿಮೆ ಜಾರಿಗೊಳಿಸಬೇಕು. ಅತಿವೃಷ್ಟಿ, ಅನಾವೃಷ್ಟಿ, ಪ್ರಕೃತಿ ವಿಕೋಪ ಬೆಳೆ ನಷ್ಟಕ್ಕೆ ವಿಮಾ ಪರಿಹಾರ ಸಿಗುವಂತಾಗಬೇಕು ಎಂದು ಒತ್ತಾಯಿಸಿದ್ದಾರೆ.

ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ರೈತರಿಗೆ ನೀಡುವ ಕೃಷಿ ಸಾಲ ನೀತಿ ಬದಲಾಗಬೇಕು. ಕೃಷಿ ಜಮೀನಿನ ಮೌಲ್ಯಕ್ಕೆ 75 ರಷ್ಟು ಸಾಲ ನೀಡುವ ಯೋಜನೆ ಜಾರಿಗೆ ತರಬೇಕು. ಅಲ್ಲದೆ, ಕಬ್ಬಿನ ಅಲ್ಪಾವಧಿ ಬೆಳೆ ಸಾಲ 18 ತಿಂಗಳಿಗೆ ವಿಸ್ತರಣೆ ಮಾಡಬೇಕು. ಕಬ್ಬಿನಿಂದ ಬರುವ ಸಕ್ಕರೆ ಇಳುವರಿ ಪರೀಕ್ಷೆ ಮಾಡಲು ಪರಿಣಿತ ಅಧಿಕಾರಿಗಳ ಪ್ರತ್ಯೇಕ ತಂಡ ರಚಿಸಬೇಕು. ಕಬ್ಬಿಗೆ ವೈಜ್ಞಾನಿಕ ಬೆಲೆ ನಿಗದಿಯಾಗಬೇಕು. ಕೂಡಲೇ, ಸಾಗಾಣಿಕೆ ಕಾರ್ಖಾನೆಗಳು ಭರಿಸುವಂತಾಗಬೇಕು. ಕಬ್ಬಿಗೆ ಹೆಚ್ಚುವರಿ ದರ ನೂರು ರೂ ನಿಗದಿ ಮಾಡಿರುವ ಸರ್ಕಾರದ ಬಾಪ್ತು 50 ರೂ., ಕೂಡಲೇ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

## ನಕ್ಕರೆ ಅದೇ ಸ್ವರ್ಗ

ಯುವಕ : ಸಾರ್, ನಾನು THIN ಆಗಬೇಕು ಅಂದ್ರೆ ಏನು ಮಾಡಬೇಕು?
ಡಾಕ್ಟರ್ : 'ಜಾಸ್ತಿ' THIN ಬಾರ್ದು'

ಮೈಸೂರು ಮಿತ್ರ

ಬುಧವಾರ, ಫೆಬ್ರವರಿ 18, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

### ಅಮೃತ ವಾಹಿನಿ..........

ನಿಮ್ಮ ಸುತ್ತಲು ಇರುವ ಎಲ್ಲವೂ ಬರೀ ಕತ್ತಲೆಯಂತೆಯೇ ಕಾಣಿಸುತ್ತಿದ್ದರೆ ಮತ್ತೊಮ್ಮೆ ನೋಡಿ, ಅಲ್ಲಿ ನೀವೇ ಬೆಳಕಾಗಿರಬಹುದು.–ರೂಮಿ

ವೇದ ಸುಳ್ಳಾದರೂ { ಮಾಡಿದ ಪಾಪ
ಗಾದೆ ಸುಳ್ಳಾಗದು { ದಾನದಿಂದ ಹೋದೀತೆ

## ನಿಮ್ಮ ಪತ್ರಗಳು

### ಮೈಸೂರಿನಲ್ಲಿ ಫ್ಲೆಕ್ಸ್ ಹಾವಳಿಗೆ ಕಡಿವಾಣ ಅಗತ್ಯ

ಮಾನ್ಯರೆ,

ಸಾಂಸ್ಕೃತಿಕ ನಗರ ಮೈಸೂರಿನಲ್ಲಿ ಎಲ್ಲೆಲ್ಲೂ ಫ್ಲೆಕ್ಸ್‌ಗಳು ರಾರಾಜಿಸುತ್ತಿರುವುದರಿಂದ ಮೈಸೂರನ್ನು ಫ್ಲೆಕ್ಸ್‌ಗಳ ನಗರ ಎಂದು ನಾಮಕರಣ ಮಾಡಬೇಕಾದ ಪರಿಸ್ಥಿತಿ ಅನಿವಾರ್ಯವಾಗಿದೆ. ಇತ್ತೀಚೆಗೆ ಮೈಸೂರಿನಲ್ಲಿ ಅಲ್ಲಿ ನೋಡು ಫ್ಲೆಕ್ಸ್, ಇಲ್ಲಿ ನೋಡು ಫ್ಲೆಕ್ಸ್, ಎತ್ತತ್ತಾ ನೋಡಿದರೂ ಫ್ಲೆಕ್ಸ್, ಗಲ್ಲಿ ಗಲ್ಲಿಗಳಲ್ಲಿ ಫ್ಲೆಕ್ಸ್, ಕ್ರಾಸ್ ರಸ್ತೆಗಳಲ್ಲಿ ಫ್ಲೆಕ್ಸ್, ಮುಖ್ಯ ರಸ್ತೆಗಳಲ್ಲೂ ಫ್ಲೆಕ್ಸ್ ಗಳು ಕಾಣಸಿಗುತ್ತವೆ. ಇವುಗಳಿಂದ ನಿತ್ಯ ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರು ವಾಹನಗಳನ್ನು ಓಡಿಸುವುದೇ ಒಂದು ಸವಾಲಾಗಿದೆ. ಕೆಲವು ಸಂದರ್ಭಗಳಲ್ಲಿ ಫ್ಲೆಕ್ಸ್‌ಗಳು ರಸ್ತೆಗೆ ಬಿದ್ದು ಅಪಘಾತಗಳು ಸಂಭವಿಸಿವೆ. ಇನ್ನಾದರೂ ಮೈಸೂರು ಮಹಾನಗರ ಪಾಲಿಕೆಯ ಅಧಿಕಾರಿಗಳು ಫ್ಲೆಕ್ಸ್ ಹಾವಳಿಗೆ ಕಡಿವಾಣ ಹಾಕಿ ನಮ್ಮ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕಟ್ಟಿದ ಸ್ವಚ್ಛ, ಸಾಂಸ್ಕೃತಿಕ ನಗರವಾದ ನಮ್ಮ ಮೈಸೂರಿನ ಘನತೆಯನ್ನು ಹೆಚ್ಚಿಸುವತ್ತಾ ಕಾರ್ಯಪ್ರವೃತ್ತರಾಗುವುದು ಒಳ್ಳೆಯ ಬೆಳವಣಿಗೆ.

– ಬೆಸಗರಹಳ್ಳಿ ರವಿ ಪ್ರಸಾದ್, ಅವರ ಮೈಸೂರು.

### ಗುಂಡ್ಲುಪೇಟೆಗೆ ಆಂಬ್ಯುಲೆನ್ಸ್ ಒದಗಿಸಲು ಮನವಿ



ಮಾನ್ಯರೆ,

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ಪಟ್ಟಣದ ವ್ಯಾಪ್ತಿಯಲ್ಲಿ ಕಳೆದೆರಡು ದಿನಗಳಿಂದ ಬೇಗೂರಿನ ಬಳಿ ಕಾರು ಮತ್ತು ಬೈಕುಗಳ ನಡುವೆ ಅಪಘಾತವಾಗಿ ಸಾವು ಬದುಕಿನ ನಡುವೆ ಹೋರಾಡುತ್ತಿದ್ದವರನ್ನು ರಕ್ಷಿಸಲು ಸಾರ್ವಜನಿಕರೊಬ್ಬರು ಗುಂಡ್ಲುಪೇಟೆ ಸರ್ಕಾರಿ ಆಸ್ಪತ್ರೆಯ ಆಂಬ್ಯುಲೆನ್ಸ್‌ಗೆ ದೂರವಾಣಿ ಕರೆ ಮಾಡಿ ಅಪಘಾತವಾಗಿರುವ ಸ್ಥಳಕ್ಕೆ ಆಂಬ್ಯುಲೆನ್ಸ್ ಸೌಲಭ್ಯ ನೀಡಿ ಎಂದು ಮನವಿ ಮಾಡಿದ್ದಾರೆ. ಕರ್ತವ್ಯ ನಿರ್ವಹಿಸುವ ಸಿಬ್ಬಂದಿ ಸರಿಯಾಗಿ ಮಾಹಿತಿ ನೀಡದೆ ಆಂಬ್ಯುಲೆನ್ಸ್ ಬಿಜಿ (busy) ಯಾಗಿದೆ ಎಂಬ ಬೇಜವಾಬ್ದಾರಿತನ ಹೇಳಿಕೆ ನೀಡಿದ್ದಾರೆ. ಇದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಆಡಿಯೋ (ವಾಯ್ಸ್ ರೆಕಾರ್ಡ್) ಅನ್ನು ಗಮನಿಸಿದರೆ, ಆಂಬ್ಯುಲೆನ್ಸ್ ಬಿಜಿ (busy) ಎಂದು ಬೇಜವಾಬ್ದಾರಿತನದ ಹೇಳಿಕೆ ನೀಡಿರುವ ಸಿಬ್ಬಂದಿಗೆ ಕಠಿಣ ಕಾನೂನು ಕ್ರಮ ಕೈಗೊಳ್ಳುವುದರ ಜೊತೆಗೆ ಗುಂಡ್ಲುಪೇಟೆಯಲ್ಲಿರುವ ಆಂಬ್ಯುಲೆನ್ಸ್‌ಗಳು ಸಾರ್ವಜನಿಕರ ಸೇವೆಗೆ ಇಲ್ಲದ ಮೇಲೆ ಮತ್ತೆ ಯಾವ ಸೇವೆಗೆ ಬಳಸಲಾಗುತ್ತಿದೆ ಎಂದು ಸಂಬಂಧಪಟ್ಟವರು ತಿಳಿಸಿ. ಬೇಗೂರಿನ ಬಳಿ ಅಪಘಾತವಾಗಿರುವ ವಿಚಾರವನ್ನು ತಿಳಿಸಿದರೂ ಸಹ ಸುಮಾರು ಒಂದು ಗಂಟೆಗಳ ಕಾಲ ಹೆಚ್ಚು ಸಮಯವಾದರೂ ಸಹ ಆಂಬ್ಯುಲೆನ್ಸ್ ಬರದೆ ಇರುವುದು ನಿಜಕ್ಕೂ ಬೇಸರದ ಸಂಗತಿ.

ಆದ್ದರಿಂದ ಸಂಬಂಧಪಟ್ಟ ಆರೋಗ್ಯ ಇಲಾಖೆ ಅಧಿಕಾರಿಗಳು ಕೂಡಲೇ ಸಾರ್ವಜನಿಕರ ಉಪಯೋಗಕ್ಕೆ ಸಮಯಕ್ಕನುಗುಣವಾಗಿ ಆಂಬ್ಯುಲೆನ್ಸ್ ಸೇವೆಯನ್ನು ಒದಗಿಸುವಂತೆ ಮತ್ತು ಸಾರ್ವಜನಿಕರಿಗೆ ಸರಿಯಾದ ಸೇವೆಗೆ ನೀಡದೆ ಹೋದರೆ ಕಠಿಣ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

### ಕುಡಿಯುವ ನೀರು ಒದಗಿಸಿ

ಮಾನ್ಯರೆ,

ಮೈಸೂರು ತಾಲೂಕು ಜಯಪುರ ಹೋಬಳಿಯ ಕೆಹೆಚ್‌ಬಿ ಬಡಾವಣೆಯು ಪ್ರಾರಂಭವಾಗಿ ಸುಮಾರು ಎಂಟು ವರ್ಷಗಳಾಗಿದ್ದು ತೀರಾ ಅಗತ್ಯವಿರುವವರು ನಾನು ಸೇರಿದಂತೆ ಮನೆ ನಿರ್ಮಿಸಿಕೊಂಡು ವಾಸವಿರುತ್ತೇವೆ. ಆದರೆ ಇಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿಂದ ಪರಿತಪಿಸುವಂತಾಗಿದೆ.

ಕುಡಿಯುವ ನೀರಿನ ಕೊರತೆ, ರಸ್ತೆಯ ಬದಿಗಳಲ್ಲಿ ಆಳೆತ್ತರ ಬೆಳೆದು ನಿಂತಿರುವ ಗಿಡಗಂಟಿಗಳಿಂದ ಕಾಡುಮೃಗಗಳು ಮತ್ತು ವಿಷ ಜಂತುಗಳ ಕಾಟವಿರುತ್ತದೆ. ಕಾಲಕಾಲಕ್ಕೆ ಚರಂಡಿಗಳ ಸ್ವಚ್ಛತೆಯ ಕೊರತೆಯಿಂದ ನಿವಾಸಿಗಳು ಬಳಲುವಂತಾಗಿದೆ. ಕೆಹೆಚ್‌ಬಿಯವರು ಬಡಾವಣೆಯನ್ನು ಧನಗಳ್ಳಿ ಪಂಚಾಯಿತಿಗೆ ಸೇರಿಸಿರುತ್ತಾರೆ. ಪಂಚಾಯಿತಿಯವರಲ್ಲಿ ಕುಡಿಯುವ ನೀರು ಒದಗಿಸಲು ಹಲವು ಬಾರಿ ವಿನಂತಿಸಿದರೂ ಪ್ರಯೋಜನವಾಗಿಲ್ಲ. ಕುಡಿಯುವ ನೀರಿಲ್ಲದೆ ಹೊಸದಾಗಿ ಮನೆ ನಿರ್ಮಿಸಲು ಮುಂದೆ ಬರುತ್ತಿಲ್ಲ. ಇಪ್ಪತ್ತೊಂದನೆ ಶತಮಾನದಲ್ಲೂ ಕುಡಿಯುವ ನೀರನ್ನು ಒದಗಿಸದಿರುವುದಕ್ಕೆ ಏನೆಂದು ಹೇಳಬೇಕೋ ತಿಳಿಯುತ್ತಿಲ್ಲ. ಸಂಬಂಧಪಟ್ಟವರು ಈಗಲಾದರೂ ಅನುಕೂಲ ಕಲ್ಪಿಸಲು ಕೋರಲಾಗಿದೆ.

– ಕೆ.ಪಿ. ನಂಜುಂಡ ಸ್ವಾಮಿ, ಕೆಹೆಚ್‌ಬಿ ಬಡಾವಣೆ ನಿವಾಸಿ.

### ಸರ್ಕಾರದ ಮೌನ; ಲೂಟಿಗೆ ರಹದಾರಿ

ಮಾನ್ಯರೆ,

ಕರ್ನಾಟಕದಲ್ಲಿ ಇತರ ರಾಜ್ಯಗಳ ಹೆಸರಿನಲ್ಲಿ ನಡೆಯುತ್ತಿರುವ ಈ ನಕಲಿ ಬಸ್‌ಗಳ ದಂಧೆ ನಿಜಕ್ಕೂ ಆತಂಕಕಾರಿ. ಕೇವಲ 300 ಬಸ್‌ಗಳಿಗೆ ಅನುಮತಿ ಇದ್ದರೂ, ಅಕ್ರಮವಾಗಿ 3,000ಕ್ಕೂ ಹೆಚ್ಚು ಬಸ್‌ಗಳು ಓಡುತ್ತಿರುವುದು ನಮ್ಮ ವ್ಯವಸ್ಥೆಯ ಲೋಪವನ್ನು ಎತ್ತಿ ತೋರಿಸುತ್ತದೆ. ಅರುಣಾಚಲ ಪ್ರದೇಶ ಮತ್ತು ನಾಗಾಲ್ಯಾಂಡ್‌ನಂತಹ ದೂರದ ರಾಜ್ಯಗಳ ದಾಖಲೆಗಳನ್ನು ಬಳಸಿ, ಬೈಕ್–ಕಾರುಗಳ ನಂಬರ್‌ಗಳನ್ನು ಬಸ್‌ಗಳಿಗೆ ಅಳವಡಿಸಿ ಸರ್ಕಾರಕ್ಕೆ ಕೋಟ್ಯಂತರ ರೂಪಾಯಿ ತೆರಿಗೆ ವಂಚಿಸಲಾಗುತ್ತಿದೆ. ಮಧ್ಯವರ್ತಿಗಳು ಒಂದು ಬಸ್ಸಿಗೆ 25 ರಿಂದ 45 ಲಕ್ಷ ರೂಪಾಯಿ ಲಾಭ ಮಾಡುತ್ತಿದ್ದರೆ, ಇದರಿಂದ ರಾಜ್ಯದ ಬೊಕ್ಕಸಕ್ಕೆ ಭಾರೀ ನಷ್ಟವಾಗುತ್ತಿದೆ. ಸಾರಿಗೆ ಇಲಾಖೆಯ ಅಧಿಕಾರಿಗಳ ಶಾಮೀಲಾಗುವಿಕೆ ಇಲ್ಲದೆ ಇಂತಹ ಬೃಹತ್ ಜಾಲ ಬೆಳೆಯಲು ಸಾಧ್ಯವಿಲ್ಲ.

ಸರ್ಕಾರವು ತಕ್ಷಣವೇ ಕಠಿಣ ಕ್ರಮ ಕೈಗೊಂಡು, ಡಿಜಿಟಲ್ ತಪಾಸಣೆಯನ್ನು ಚುರುಕುಗೊಳಿಸಬೇಕು. ಸಾರ್ವಜನಿಕರ ಸುರಕ್ಷತೆ ಮತ್ತು ರಾಜ್ಯದ ಆದಾಯದ ದೃಷ್ಟಿಯಿಂದ ಈ 'ಕಪ್ಪು ದಂಧೆ'ಗೆ ಅಂತ್ಯ ಹಾಡುವುದು ಅನಿವಾರ್ಯವಾಗಿದೆ.

–ಡಾ.ಎಚ್.ಕೆ. ವಿಜಯಕುಮಾರ, ಮೈಸೂರು.

# ಪ್ರಾಮಾಣಿಕರಿಗಿದು ಕಾಲವಲ್ಲ....!

ಭ್ರಷ್ಟ ಅಧಿಕಾರಿಗಳೇ ಹುಷಾರ್ ಅನ್ನೋ ಕಾಲ ಮುಗಿದಿದೆ. ಇನ್ನೇನಿದ್ದರೂ ಪ್ರಾಮಾಣಿಕ ಅಧಿಕಾರಿಗಳೇ ಎಚ್ಚರವಾಗಿರಿ ಅನ್ನೋ ಕಾಲಘಟ್ಟ. ವ್ಯವಸ್ಥೆ ಹದಗೆಟ್ಟು ಹೋಗಿದೆ. ಭ್ರಷ್ಟಾಚಾರದ ಕೊಚ್ಚೆ ಗುಂಡಿಯಲ್ಲಿ, ಪ್ರಾಮಾಣಿಕರನ್ನ ಹುಡುಕುವುದು ಅಸಾಧ್ಯ ಅನ್ನೋ ಪರಿಸ್ಥಿತಿ ನಿರ್ಮಾಣವಾಗಿದೆ. ಈಗ ಭ್ರಷ್ಟರು, ಮೂರುಬಿಟ್ಟವರು ಊರಿಗೆ ದೊಡ್ಡವರೆಂಬ ನಾಣ್ಣುಡಿಯಂತೆ ವರ್ತಿಸುತ್ತಿದ್ದಾರೆ. ಆದರೆ ಪ್ರಾಮಾಣಿಕ ಅಧಿಕಾರಿಗಳ ಸ್ಥಿತಿ ಅಧೋಗತಿ. ಇದಕ್ಕೆ ಸಾಕ್ಷಿ 14 ವರ್ಷದ ಹಿಂದಿನ ಮಾಲಿನಿ ಎಂಬ ಮೈಸೂರಿನ ಪ್ರಾಮಾಣಿಕ ಮಹಿಳಾ ಅಧಿಕಾರಿ ವ್ಯಥೆಯ ಕಥೆ. ಬರೋಬ್ಬರಿ 14 ವರ್ಷದ ನಂತರ ಆರೋಪ ಮುಕ್ತರಾದರು. ಕೊನೆಗೆ ಸರ್ಕಾರ ಅವರ ಪ್ರಾಮಾಣಿಕ ದುಡಿಮೆಯ ಬಾಕಿ ಹಣ ನೀಡಿದೆ. ಆದರೆ, ಅದನ್ನು ಅನುಭವಿಸಲು ಅವರೇ ಇಲ್ಲ. ಇದು ನಮ್ಮ ವ್ಯವಸ್ಥೆ ವೈಖರಿಗೆ ಹಿಡಿದ ಕನ್ನಡಿ.

**200 ರೂಪಾಯಿ ಲಂಚ ಆರೋಪ–ಮಾನಸಿಕ ಹಿಂಸೆ**



ಮೃತ ಮಾಲಿನಿ

ಮೈಸೂರಿನ ತಾಲೂಕು ಕಚೇರಿಯ ಪ್ರಥಮ ದರ್ಜೆ ಸಹಾಯಕಿಯಾಗಿ ಸೇವೆ ಸಲ್ಲಿಸುತ್ತಿದ್ದ ಮಾಲಿನಿ ಅವರು ಪ್ರಾಮಾಣಿಕರು. ಆದರೆ, 200 ರೂಪಾಯಿ ಲಂಚ ಪಡೆದ ಆರೋಪ ಅವರ ಬದುಕನ್ನೇ ಅಣು ಅಣುವಾಗಿ ಕೊಂದು ಹಾಕಿತು. ಲಂಚ... ಲಂಚ... ಲಂಚ... ಈ ಮಾತು ಅವರ ಕಚೇರಿಯ ಗೋಡೆಗಳನ್ನು ಸೀಳಿ ಎಲ್ಲೆಡೆ ವ್ಯಾಪಿಸಿತ್ತು. ಆದರೆ ಇವರ ಮೇಲೆ ಬಂದ ಸುಳ್ಳು ಆರೋಪದಿಂದ ಅವರ ಬದುಕಿನಲ್ಲಿ ನಗುವಿನ ಬೆಳಕು ಅಸ್ತಂಗತವಾಯಿತು. ಲೋಕಾಯುಕ್ತ ಪೊಲೀಸರ ಆ ಒಂದು ಎಡವಟ್ಟು ಮಾಲಿನಿ ಅವರ ಬಾಳನ್ನೇ ನರಕ ಸದೃಶ ಮಾಡಿತು. ನಾನು ನಿರಪರಾಧಿ, ಏನೂ ತಪ್ಪು ಮಾಡಿಲ್ಲ ಎಂಬ ಮಾಲಿನಿ ಅವರ ಆರ್ತನಾದ ಲೋಕಾಯುಕ್ತ ಪೊಲೀಸರ ಕಿವಿ ಮುಟ್ಟಲೇ ಇಲ್ಲ.

**ತನ್ನದಲ್ಲದ ತಪ್ಪಿಗೆ ಬಲಿ......!!!!**

ಅಸಹಾಯಕರಾಗಿದ್ದ ಮಾಲಿನಿ ಅವರ ಮೂಕ ರೋಧನೆಯ ಕಥೆಯನ್ನು ಅವರ ಪತಿ ದೇವಪ್ರಕಾಶ್, ಟಿವಿ9 ಡಿಜಿಟಲ್ ಮಾಧ್ಯಮದೊಂದಿಗೆ ಎಳೆ ಎಳೆಯಾಗಿ ಬಿಚ್ಚಿಟ್ಟಿದ್ದಾರೆ.

ಅದು 1997ನೇ ಇಸವಿ. ಸರ್ಕಾರಿ ನೌಕರಿಯಲ್ಲಿದ್ದ ಮುಸ್ಲಿಂ ಮಹಿಳೆಯೊಬ್ಬರು ಅಲ್ಪಸಂಖ್ಯಾತರ ಪ್ರಮಾಣ ಪತ್ರ ಕೇಳಿಕೊಂಡು ಮಾಲಿನಿ ಅವರ ಬಳಿ ಬಂದಿದ್ದರು. ಆಕೆ ಸರ್ಕಾರಿ ನೌಕರಿಯಲ್ಲಿದ್ದ ಕಾರಣ ಪ್ರಮಾಣ ಪತ್ರ ನೀಡಲು ಸಾಧ್ಯವಿಲ್ಲವೆಂದು ಕಡ್ಡಿ ತುಂಡಾದಂತೆ ಹೇಳಿ, ವಾಪಸ್ಸು ಕಳುಹಿಸಿದರಲ್ಲದೆ ಅವರ ಅರ್ಜಿಯನ್ನು ಅಧಿಕೃತವಾಗಿ ವಜಾ ಮಾಡಿದರು. ಬಳಿಕ ಆ ವಿಚಾರವನ್ನು ಮರೆತೇ ಬಿಟ್ಟಿದ್ದ ಮಾಲಿನಿಗೆ, ಒಂದು ದಿನ ಅದೇ ವಿಚಾರ ತನ್ನ ಬದುಕಿನಲ್ಲಿ ಬಿರುಗಾಳಿ ಎಬ್ಬಿಸುತ್ತದೆ ಎಂದು ಯೋಚಿಸಿರಲಿಲ್ಲ. ಮಾಲಿನಿ, ಸರ್ಕಾರಿ ಉದ್ಯೋಗಿ ಮಹಿಳೆಯ ಅರ್ಜಿ ತಿರಸ್ಕರಿಸಿ, ಹೊರಗೆ ಕಳುಹಿಸುತ್ತಿದ್ದಂತೆ ಆ ಮಹಿಳೆಯನ್ನು ಮಾಲಿನಿಯವರ ಕಚೇರಿ ಸಹಾಯಕ ಭೇಟಿಯಾಗಿದ್ದ. 200 ರೂಪಾಯಿ ಕೊಡಿ ನಾನು ನಿಮ್ಮ ಕೆಲಸ ಮಾಡಿಸಿಕೊಡುತ್ತೇನೆ ಎಂದು ಹೇಳಿದ್ದ.

ಈ ವಿಚಾರವೇ ಮಾಲಿನಿ ಅವರಿಗೆ ತಿಳಿದಿರಲಿಲ್ಲ. ಕಚೇರಿ ಸಹಾಯಕ 200 ರೂ. ಲಂಚ ಕೇಳಿದ್ದರ ಬಗ್ಗೆ ಆ ಮಹಿಳೆ ಲೋಕಾಯುಕ್ತರಿಗೆ ದೂರು ನೀಡಿದ್ದರು. ಬಳಿಕ ಲೋಕಾಯುಕ್ತರು ಕಾರ್ಯಾಚರಣೆ ನಡೆಸಿ, ಆತನನ್ನು ರೆಡ್ ಹ್ಯಾಂಡ್ ಆಗಿ ಹಿಡಿದರು. ಅಲ್ಲಿಯವರೆಗೆ ಎಲ್ಲವೂ ಸರಿಯಾಗಿತ್ತು.

ಆದರೆ ಲೋಕಾಯುಕ್ತರ ಇಗೋ(ಅಹಂ) ಓರ್ವ ಪ್ರಾಮಾಣಿಕ ಮಹಿಳಾ ಅಧಿಕಾರಿಯ ವೃತ್ತಿ ಜೀವನ ಮಾತ್ರವಲ್ಲದೆ ವೈಯಕ್ತಿಕ ಜೀವನದಲ್ಲೂ ಅಲ್ಲೋಲ ಕಲ್ಲೋಲ ಸೃಷ್ಟಿಸಿಬಿಟ್ಟಿತು. ಅಸಲಿಗೆ ಯಾರು ಲಂಚ ಪಡೆದಿದ್ದಾನೋ ಅವನು ಲೋಕಾಯುಕ್ತ ವ್ಯಾಪ್ತಿಗೆ ಬರುವುದಿಲ್ಲ ಎಂದು ತಿಳಿಯುತ್ತಿದ್ದಂತೆ ಲೋಕಾಯುಕ್ತರ ವರಸೆ ಬದಲಾಯಿತು. ಅವರಿಗೆ ಒಂದು ರೀತಿಯ ಮುಖಭಂಗ ಹಾಗೂ ಅವಮಾನ. ಎಲ್ಲರೂ ಛೀ... ಥೂ... ಅನ್ನೋ ಭಯ ಅವರನ್ನು ಕಾಡತೊಡಗಿತು. ಆದರೆ ಇದರಿಂದ ಪಾರಾಗಲು ಅವರು ಆಯ್ದುಕೊಂಡ ಮಾರ್ಗ ಮಾತ್ರ ಅಕ್ಷಮ್ಯ ಹಾಗೂ ಘೋರ.

**ತಮ್ಮ ತಪ್ಪು ಮುಚ್ಚಿಕೊಳ್ಳಲು ಪ್ರಾಮಾಣಿಕ ಅಧಿಕಾರಿಗೆ ಖೆಡ್ಡಾ ತೋಡಿದರು...**

ಹೌದು, ಯಾವಾಗ ಲೋಕಾಯುಕ್ತ ಪೊಲೀಸರಿಗೆ ತಾವು ಮಾಡಿದ ಎಡವಟ್ಟು ಗೊತ್ತಾಯಿತೋ ಆಗಲೇ ಅವರಿಗೆ 'ಕೋತಿ ಮೇಕೆಯ ಕಥೆ' ನೆನಪಾಗಿದೆ. ಅಕ್ಷರಶಃ ಕೋತಿ ತಾನು ತಿಂದು, ಸಿಕ್ಕಿ ಹಾಕಿಕೊಂಡಾಗ ಮೇಕೆ ಬಾಯಿಗೆ ಒರೆಸಿದಂತೆ ಕಚೇರಿ ಸಹಾಯಕನ ತಪ್ಪನ್ನು ಮಾಲಿನಿ ಅವರ ತಲೆಗೆ ಕಟ್ಟಲು ಪ್ಲಾನ್ ಮಾಡಿದರು. ವಿನಾಕಾರಣ ಆ ಪ್ರಕರಣದಲ್ಲಿ ಪ್ರಾಮಾಣಿಕ ಅಧಿಕಾರಿ ಮಾಲಿನಿ ಅವರನ್ನು ಎಳೆದು ತಂದರು. ದೂರು ನೀಡಿದ ಮಹಿಳೆ ಸ್ಪಷ್ಟವಾಗಿ ಲಂಚ ಪಡೆದ ವ್ಯಕ್ತಿಯ ಬಗ್ಗೆ ದೂರು ನೀಡಿದ್ದರು. ಅವರ ದೂರಿನಲ್ಲಿ ಮಾಲಿನಿಯವರ ಬಗ್ಗೆ ಒಂದೇ ಒಂದು ಶಬ್ದವನ್ನೂ ಉಲ್ಲೇಖಿಸಿರಲಿಲ್ಲ. ಅಷ್ಟೇ ಏಕೆ ಎಫ್ಐಆರ್‌ನಲ್ಲೂ ಮಾಲಿನಿ ಅವರ ಹೆಸರಿರಲಿಲ್ಲ. ಆದರೂ ಲೋಕಾಯುಕ್ತ ಪೊಲೀಸರು ಶತಾಯ–ಗತಾಯ ತಾವು ಪಾರಾಗಬೇಕೆಂದು ಮಾಲಿನಿ ಅವರನ್ನು ಹರಕೆ ಕುರಿಮಾಡಲು ನಿರ್ಧರಿಸಿದ್ದರು. ಕೊನೆಗೆ ಮಾಲಿನಿ ಅವರನ್ನು 200 ರೂ. ಲಂಚ ಪ್ರಕರಣದ ಎರಡನೇ ಆರೋಪಿ (ಎ–2) ಮಾಡಿಯೇ ಬಿಟ್ಟರು. ಆ 200 ರೂಪಾಯಿ ಮಾಲಿನಿಯವರೇ ಕೇಳಿದ್ದೆಂದು ಕಾಗಕ್ಕ–ಗೂಬಕ್ಕನ ಕಥೆಯನ್ನು ಪೋಣಿಸಿಬಿಟ್ಟರು.

> ❝ ನೀವು ಪ್ರಾಮಾಣಿಕರಾಗಿದ್ದರೆ ಸಾಲದು, ಸುತ್ತಮುತ್ತ ಇರುವ ಭ್ರಷ್ಟರ ಬಗ್ಗೆಯೂ ಎಚ್ಚರದಿಂದಿರಬೇಕು. ಷಡ್ಯಂತ್ರಗಳ ವಿರುದ್ಧ ಸೆಟೆದು ನಿಲ್ಲುವ ಛಾತಿ, ಅವಮಾನವನ್ನು ಮೆಟ್ಟಿ ನಿಲ್ಲುವ ಶಕ್ತಿ, ದೃಢ ಸಂಕಲ್ಪ ಇದ್ದರೆ ಮಾತ್ರ ಇಂತಹ ಸಂಕಷ್ಟಗಳಿಂದ ಪಾರಾಗಬಹುದು. ಜವಾಬ್ದಾರಿಯುತ ಸ್ಥಾನದಲ್ಲಿದ್ದವರು ತಮ್ಮ ಸ್ವಪ್ರತಿಷ್ಠೆ, ಅಹಂ ಅನ್ನು ಬದಿಗೊತ್ತಿ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಿದರೆ ಅಮಾಯಕರು ಬಲಿಪಶುವಾಗುವುದನ್ನು ತಪ್ಪಿಸಬಹುದು.



ಪತಿ ದೇವಪ್ರಕಾಶ್‌ರೊಂದಿಗೆ ಮಾಲಿನಿ

**ಕುಗ್ಗಿದ ಮಾಲಿನಿ–ಛಲ ಬಿಡದ ಕುಟುಂಬ**

ಲೋಕಾಯುಕ್ತರ ಎಡವಟ್ಟಿನ ಪರಿಣಾಮ ಮಾಲಿನಿ ಅಮಾನತ್ತಾದರು. ಅವರಿಗೆ ಸಿಗಬೇಕಿದ್ದ ಬಡ್ತಿ ಕೈ ತಪ್ಪಿತು. ಇಂಕ್ರಿಮೆಂಟ್‌ಗಳು ಸ್ಥಗಿತಗೊಂಡವು. ಕೊನೆಗೆ 2007ರಲ್ಲಿ ಸರ್ಕಾರಿ ಸೇವೆಯಿಂದಲೇ ಬಿಡುಗಡೆಗೊಳಿಸಲಾಯಿತು. ಈ ಘಟನೆ ಮಾಲಿನಿಯವರ ವೃತ್ತಿಗೆ ಮಾತ್ರವಲ್ಲ ಅವರ ಕೌಟುಂಬಿಕ ಜೀವನಕ್ಕೂ ಕೊಳ್ಳಿ ಇಟ್ಟಿತ್ತು. ಮಾಲಿನಿಯವರ ಮನೆಯಲ್ಲಿ ನೀರವ ಮೌನ, ಮಾಲಿನಿ ಕಣ್ಣುಗಳಲ್ಲಿ ಕಣ್ಣೀರು, ಮಕ್ಕಳಲ್ಲಿ ಆತಂಕ, ಪತಿಯ ಮನದಲ್ಲಿ ನೋವು ಮಡುಗಟ್ಟಿತು. ಏನೂ ತಪ್ಪು ಮಾಡದಿದ್ದರೂ ನನ್ನ ಇಡೀ ಕುಟುಂಬ ನೋವು–ಅವಮಾನಕ್ಕೆ ಗುರಿಯಾಯಿತೆಂಬ ನೋವಿನಲ್ಲೇ ಮಾಲಿನಿಯವರ ಹೃದಯ ಚೂರಾಗಿ ಹೋಗಿತ್ತು. ಆದರೆ ಪತಿ ದೇವಪ್ರಕಾಶ್ ಮಾತ್ರ ತನ್ನ ಪತ್ನಿಯ ಜೊತೆ ಅಚಲವಾಗಿ ನಿಂತರು. ಪತ್ನಿಯ ಪ್ರಾಮಾಣಿಕತೆ ತಿಳಿದಿದ್ದ ಅವರು, ಮೊದಲು ಲೋಕಾಯುಕ್ತ ಪೊಲೀಸರಿಗೆ ವಾಸ್ತವ ಸಂಗತಿ ಮನದಟ್ಟು ಮಾಡಲು ಪ್ರಯತ್ನಿಸಿದರು. ನಿದ್ರೆಯಲ್ಲಿದ್ದವರನ್ನು ಎಬ್ಬಿಸಬಹುದು, ಆದರೆ ನಿದ್ದೆ ಮಾಡುವಂತೆ ನಟಿಸುವವರನ್ನು ಹೇಗೆ ತಾನೇ ಎಚ್ಚರಿಸಲು ಸಾಧ್ಯ? ಹಾಗೆಯೇ ವರ್ತಿಸುತ್ತಿದ್ದ ಲೋಕಾಯುಕ್ತ ಪೊಲೀಸರಿಗೆ ದೇವ ಪ್ರಕಾಶ್ ಅವರ ಮನವಿ ಕೇಳಿಸಲೇ ಇಲ್ಲ. ಈ ಕಟುಸತ್ಯ ಪ್ರಕಾಶ್‌ಗೆ ತಿಳಿಯಲು ಹೆಚ್ಚು ಕಾಲ ಹಿಡಿಯಲಿಲ್ಲ. ನಾನು ಏನು ಮಾಡಿಲ್ಲ, ನನಗೆ ಏನು ಆಗಲ್ಲ, ಸತ್ಯ ಮೇವ ಜಯತೇ ಎಂದು ನಂಬಿದ್ದವರಿಗೆ ಆಘಾತ ಕಾದಿತ್ತು. ಲೋಕಾಯುಕ್ತರ ಮಾಸ್ಟರ್ ಪ್ಲ್ಯಾನ್ ಅವರು ಅಂದುಕೊಂಡಂತೇ ಕೆಲಸ ಮಾಡಿತ್ತು ಪ್ರಕರಣದ ವಿಚಾರಣೆ ನಡೆಸಿದ ಸ್ಥಳೀಯ ನ್ಯಾಯಾಲಯ, ಲೋಕಾಯುಕ್ತರು ನೀಡಿದ್ದ ಸಾಕ್ಷ್ಯಾಧಾರಗಳನ್ನಾಧರಿಸಿ ಮಾಲಿನಿ ಅವರು ಅಪರಾಧಿ ಎಂದೇ ತೀರ್ಪು ನೀಡಿತ್ತು.

**ಕಾನೂನು ಹೋರಾಟಕ್ಕಿಳಿದ ದಂಪತಿ**

ಸ್ಥಳೀಯ ನ್ಯಾಯಾಲಯ, ಅಪರಾಧಿ ಎಂದು ತೀರ್ಪು ನೀಡುತ್ತಿದ್ದಂತೆ ಮಾಲಿನಿಯವರಿಗೆ ನಿಂತ ಭೂಮಿಯೇ ಕುಸಿದ ಅನುಭವವಾಯಿತು. ಕೊನೆಯ ವಿಶ್ವಾಸವೂ ಸತ್ತು ಹೋಗಿತ್ತು. ನ್ಯಾಯಾಲಯದಲ್ಲೇ ಕುಸಿದುಬಿಟ್ಟರು. ಒದ್ದಾಡಿ, ಹೊರಳಾಡಿ ನಾನು ನಿರಪರಾಧಿ ಎಂದು ಪರಿಪರಿಯಾಗಿ ಬೇಡಿಕೊಂಡರು. ಅವರ ಪರಿಸ್ಥಿತಿ ಕಂಡು ಮರುಗಿದ ನ್ಯಾಯಾಧೀಶರೇ, ಮಾಲಿನಿಯವರನ್ನು ಸಮಾಧಾನಪಡಿಸಿದರು. ಮೇಲ್ಮನವಿ ಸಲ್ಲಿಸಲು ಹೆಚ್ಚಿನ ಕಾಲಾವಕಾಶ ನೀಡಿದರು. ಲೋಕಾಯುಕ್ತ ಪೊಲೀಸರು ಮುಜುಗರದಿಂದ ಪಾರಾಗಲು ಯಾವ ಹಂತಕ್ಕೆ ಬೇಕಾದರೂ ಹೋಗುತ್ತಾರೆಂದು ತಿಳಿದಿದ್ದ ದೇವಪ್ರಕಾಶ್, ಏನೇ ಆದರೂ ಸತ್ಯ ಗೆಲ್ಲಬೇಕು ಎಂದು ದೃಢ ಸಂಕಲ್ಪ ಮಾಡಿದರು. ರಾಷ್ಟ್ರಪತಿ ಅವರ ಬಳಿ ಹೋಗಿಯಾದರೂ ತನ್ನ ಪತ್ನಿಯ ಪ್ರಾಮಾಣಿಕತೆಯನ್ನು ಸಮಾಜಕ್ಕೆ ಸಾರಿ ಹೇಳಲೇಬೇಕೆಂದು ನಿರ್ಧರಿಸಿದರು.

**ಭಗವಾನ್ ಕೇ ಘರ್ ಮೇ ದೇರ್ ಹೈ ಅಂದೇರ್ ನಹೀ......!!!!!**

ಹೌದು, ಸತ್ಯ ಮನೆಯಲ್ಲಿ ಬಟ್ಟೆ ಧರಿಸುವಷ್ಟರಲ್ಲಿ, ಸುಳ್ಳು ಇಡೀ ಊರನ್ನೇ ಸುತ್ತಿ ಬರುತ್ತದೆಯಂತೆ. ಮಾಲಿನಿ ಅವರ ವಿಚಾರದಲ್ಲಿ ಆಗಿದ್ದೂ ಇದೆ. ಆದರೆ ಸತ್ಯಕ್ಕೆ ಸಾವಿಲ್ಲ. ಏನೇ ಆದರೂ ಒಂದಲ್ಲ ಒಂದು ದಿನ ಸತ್ಯ ಬೆಳಕಿಗೆ ಬಂದೇ ಬರುತ್ತದೆ. ಮಾಲಿನಿ ಅವರ ಪ್ರಕರಣದಲ್ಲೂ ಇದೇ ಆಯಿತು.

10 ನ್ಯಾಯಾಧೀಶರು, 300ಕ್ಕೂ ಹೆಚ್ಚು ವಿಚಾರಣೆಗಳು, 17 ವರ್ಷಗಳ ಯಾತನೆ. 200 ರೂಪಾಯಿ ಲಂಚ ಪಡೆದ ಆರೋಪದ ವಿರುದ್ಧದ ಹೋರಾಟಕ್ಕೆ ಖರ್ಚಾಗಿದ್ದು ಬರೋಬ್ಬರಿ 8 ಲಕ್ಷ ಹಣ. ನ್ಯಾಯಕ್ಕಾಗಿ ಹೋರಾಟ ನಡೆಸುವುದೇ ಮಾಲಿನಿ ಹಾಗೂ ಪ್ರಕಾಶ್ ದಂಪತಿಯ ಬದುಕಾಯಿತು. ವರ್ಷಗಳು ಸರಿದವು, ವಯೋ ಸಹಜವಾಗಿ ಮುಖದಲ್ಲಿ ಗೆರೆಗಳು ಮೂಡಿದವು. ಆದರೂ ಮನಸ್ಸಿನಲ್ಲಿ ಮಾತ್ರ ನಾವು ಮಾಡಿದ ತಪ್ಪೇನು ಎಂಬ ಪ್ರಶ್ನೆ ಹಸಿಯಾಗಿತ್ತು. ಅವಿರತ ಹೋರಾಟದ ಫಲವಾಗಿ 17 ವರ್ಷಗಳ ನಂತರ ಕೊನೆಗೂ ಹೈಕೋರ್ಟ್‌ನಲ್ಲಿ ಮಾಲಿನಿ ಅವರಿಗೆ ನ್ಯಾಯ ಸಿಕ್ಕಿತು.

ನ್ಯಾಯಮೂರ್ತಿ ಜಗನ್ನಾಥನ್ ಅವರ ಮಹತ್ವದ ತೀರ್ಪು, ಮಾಲಿನಿ ಅವರಿಗೆ ಮಾತ್ರವಲ್ಲದೆ ಅದೆಷ್ಟೋ ಪ್ರಾಮಾಣಿಕ ಅಧಿಕಾರಿಗಳನ್ನು ಇಂತಹ ಷಡ್ಯಂತ್ರದಿಂದ ಪಾರು ಮಾಡಿತು. ಅಸಲಿಗೆ ಮಾಲಿನಿ ಅವರು ಲಂಚ ಕೇಳಿದ ಅಥವಾ ಪಡೆದಿದ್ದಕ್ಕೆ ಯಾವುದೇ ಪುರಾವೆ ಇರಲಿಲ್ಲ. ದೂರುದಾರರಾಗಲೀ, ಹಣ ಪಡೆದ ಕಚೇರಿ ಸಹಾಯಕನಾಗಲೀ ಮಾಲಿನಿ ಅವರ ಹೆಸರೇಳಿರಲಿಲ್ಲ. ಮಾಲಿನಿ ಅವರು ಅಪ್ರಾಮಾಣಿಕರಲ್ಲ ಎಂಬುದನ್ನು ಸಾರಿ ಹೇಳುವ ಇಂತಹ ಹಲವು ಅಂಶಗಳನ್ನು ನ್ಯಾಯಾಧೀಶರು ಗುರುತಿಸಿದ್ದರು.

ಇದೊಂದು ಇಲಾಖಾ ಮಟ್ಟದಲ್ಲೇ ತನಿಖೆ ನಡೆಸಬಹುದಾಗಿದ್ದ ಪ್ರಕರಣ. ಲೋಕಾಯುಕ್ತ ಪೊಲೀಸರು ತಾವು ಮಾಡಿದ ತಪ್ಪಿಗೆ ಇಲಿಯನ್ನು ಹುಲಿ ಎಂಬಂತೆ ಬಿಂಬಿಸಲು ಮುಂದಾಗಿ ಮುಖಭಂಗಕ್ಕೀಡಾದರು. ಅವರ ಮೇಲ್ಮನವಿಯೂ ನ್ಯಾಯಾಲಯದಲ್ಲಿ ಊರ್ಜಿತವಾಗಲಿಲ್ಲ. ನ್ಯಾಯಾಲಯದಿಂದ ತೀರ್ಪು ಹೊರಬೀಳುತ್ತಿದ್ದಂತೆ ಪ್ರಕಾಶ್ ಅವರಿಗೆ ಅಂದುಕೊಂಡಿದ್ದನ್ನು ಸಾಧಿಸಿದ ಸಂತೃಪ್ತಿ. ಆ ಕ್ಷಣದಲ್ಲಿ ಮಾಲಿನಿ ಅವರ ಮಕ್ಕಳು, ಸಂಬಂಧಿಗಳು, ಹಿತೈಷಿಗಳು, ಸ್ನೇಹಿತರ ಸಂಭ್ರಮ ಮುಗಿಲುಮುಟ್ಟಿತ್ತು. ಆದರೆ ಮಾಡದ ತಪ್ಪಿಗೆ ಜೀವನದುದ್ದಕ್ಕೂ ಹೋರಾಟ ನಡೆಸಿ, ಬಸವಳಿದಿದ್ದ ಮಾಲಿನಿ ಅವರ ಕಣ್ಣಲ್ಲಿ ಒಂದೆರಡು ಹನಿ ಆನಂದ ಬಾಷ್ಪ ಹಾಗೂ ಒಂದು ದೀರ್ಘ ನಿಟ್ಟುಸಿರು ಮಾತ್ರವಿತ್ತು.

ತಮಗಂಟಿದ್ದ ಅಪ್ರಾಮಾಣಿಕ ಹಣೆಪಟ್ಟಿ ಕಳಚಿದ್ದನ್ನು ಸಂಭ್ರಮಿಸುವಷ್ಟು ಮಾನಸಿಕ ಹಾಗೂ ದೈಹಿಕ ಶಕ್ತಿ ಅವರಲ್ಲಿರಲಿಲ್ಲ. ಇದೇ ವಿಚಾರದಿಂದ ಊಟ, ತಿಂಡಿ ಬಿಟ್ಟಿದ್ದರು. ನಿದ್ದೆ ಮಾಯವಾಗಿತ್ತು. ನಿರಂತರ ಒತ್ತಡದಿಂದ ಹೃದಯ ಹಿಗ್ಗಿತು. ಕೊನೆಗೆ ಕಿಡ್ನಿ ಸಮಸ್ಯೆಯೂ ವಕ್ಕರಿಸಿತು. ಒಂದಲ್ಲ ಎರಡಲ್ಲ ಬದಲಿಗೆ ಬರೋಬ್ಬರಿ 800 ಬಾರಿ ಡಯಾಲಿಸಿಸ್ ಮಾಡಿಸಿದ್ದರು. ಇದೇ ಸಮಸ್ಯೆ ಅವರನ್ನು ಸಾವಿನ ದವಡೆಗೂ ಕರೆದೊಯ್ಯಿತು. 2012ರಲ್ಲಿ ನ್ಯಾಯಾಲಯ, ಮಾಲಿನಿ ಅವರನ್ನು ನಿರಪರಾಧಿ ಎಂದು ಘೋಷಿಸಿತು. ಆಗ ಅವರು ಅಳುತ್ತಲೇ ಮಾಧ್ಯಮದೊಂದಿಗೆ ಮಾತನಾಡಿದ್ದರು. ನನ್ನ ತಪ್ಪಿಲ್ಲದಿದ್ದರು ನನ್ನ ಬದುಕನ್ನೇ ಕಿತ್ತುಕೊಂಡರು. ನನ್ನ ಕುಟುಂಬ ಅನುಭವಿಸಿದ ಅವಮಾನವನ್ನು ಯಾರು ಭರಿಸುತ್ತಾರೆ. ಕಳೆದುಕೊಂಡ ಉದ್ಯೋಗ, ಗೌರವ, ಅಮೂಲ್ಯವಾದ 15 ವರ್ಷಗಳನ್ನು ಲೋಕಾಯುಕ್ತ ಪೊಲೀಸರು ನನಗೆ ಮರಳಿ ಕೊಡಬಲ್ಲರೇ? ಎಂದು ಅತ್ಯಂತ ನೋವಿನಿಂದ ಪ್ರಶ್ನಿಸಿದ್ದರು.

200 ರೂಪಾಯಿ ಲಂಚ ಪಡೆದ ಆರೋಪ ಒಬ್ಬ ನಿರಪರಾಧಿ ಮಹಿಳೆಯ ಬದುಕನ್ನು 17 ವರ್ಷಗಳ ಕಾಲ ಅಗೋಚರ ಕಾರಾಗೃಹದಲ್ಲಿ ಬಂಧಿಸಿತ್ತು. ಹೈ ಕೋರ್ಟ್ ತೀರ್ಪಿನ ನಂತರ ಮಾಲಿನಿ ಅವರಿಗೆ ಉದ್ಯೋಗ, ಬಡ್ತಿ, ಸಂಬಳ, ಗೌರವ ಎಲ್ಲವೂ ಸಿಕ್ಕಿತು. ಆದರೆ ತಾವು ಮಾಡದ ತಪ್ಪಿಗೆ ಇಡೀ ಕುಟುಂಬ ಅನುಭವಿಸಿದ ನೋವು ಯಾತನೆ ಮಾತ್ರ ಆಕೆಯ ಮನಸಿನಲ್ಲಿ ಆರದ ಗಾಯ ಮಾಡಿತ್ತು. ಎಲ್ಲರ ಮುಂದೆ ನಗುತ್ತಿದ್ದರು ಮನಸ್ಸಿನಾಳದಲ್ಲಿ ಪ್ರತಿಕ್ಷಣ ನೋವು ಚುಚ್ಚಿ ಕೊಲ್ಲುತ್ತಿತ್ತು. ಇದೇ ಕೊರಗಿನಲ್ಲಿ ಅನಾರೋಗ್ಯಕ್ಕೆ ತುತ್ತಾಗಿ ಅಕಾಲಿಕವಾಗಿ ಬದುಕು ಮುಗಿಸಿದ ಮಾಲಿನಿ, ವ್ಯವಸ್ಥೆಯ ಕೆಟ್ಟ ಜಾಲಕ್ಕೆ ಬಲಿಪಶುವಾದರು.

ದುರಂತವೆಂದರೆ ಮಾಲಿನಿ ಅವರು ಮೃತಪಟ್ಟ ನಂತರ ತಡೆಹಿಡಿಯಲಾಗಿದ್ದ ಅವರ ಸಂಬಳ ಹಾಗೂ ಭತ್ಯೆ ನೀಡಲಾಗಿದೆ. ಅಂತ್ಯ ಸಂಸ್ಕಾರಕ್ಕೆ ಸರ್ಕಾರದಿಂದ ನೀಡುವ ಹಣವೂ ಮೂರು ವರ್ಷದ ನಂತರ ತಲುಪಿದೆ. ಇನ್ನೂ ರಜೆ ಭತ್ಯೆ ಸೇರಿ ಹಲವು ಭತ್ಯೆಗಳನ್ನು ನೀಡಿಲ್ಲ. ಈಗಲಾದರೂ ಸರ್ಕಾರ ಕಣ್ತೆರೆದು ನೋಡುವುದೋ ಅಥವಾ ಈ ಭತ್ಯೆ ನೀಡುವುದಕ್ಕೂ ದಶಕಗಳಿಗೂ ಅಧಿಕ ಕಾಲ ಸತಾಯಿಸುವುದೋ ಕಾದು ನೋಡಬೇಕಿದೆ.

**ಕೊನೆ ಮಾತು...**

ಸಣ್ಣ ಆರೋಪದ ಬಗ್ಗೆ ತಪ್ಪು ತನಿಖೆಯಾದರೆ, ಒಂದು ಕುಟುಂಬವೇ ನಾಶವಾಗುತ್ತದೆ ಎಂಬುದಕ್ಕೆ ಈ ಪ್ರಕರಣ ಜ್ವಲಂತ ಸಾಕ್ಷಿ. ಇದು ಪ್ರಾಮಾಣಿಕ ಅಧಿಕಾರಿಗಳಿಗೆ ಎಚ್ಚರಿಕೆಯ ಗಂಟೆ. ನೀವು ಪ್ರಾಮಾಣಿಕರಾಗಿದ್ದರೆ ಸಾಲದು, ಸುತ್ತಮುತ್ತ ಇರುವ ಭ್ರಷ್ಟರ ಬಗ್ಗೆಯೂ ಎಚ್ಚರದಿಂದಿರಬೇಕು. ಷಡ್ಯಂತ್ರಗಳ ವಿರುದ್ಧ ಸೆಟೆದು ನಿಲ್ಲುವ ಛಾತಿ, ಅವಮಾನವನ್ನು ಮೆಟ್ಟಿ ನಿಲ್ಲುವ ಶಕ್ತಿ, ದೃಢ ಸಂಕಲ್ಪ ಇದ್ದರೆ ಮಾತ್ರ ಇಂತಹ ಸಂಕಷ್ಟಗಳಿಂದ ಪಾರಾಗಬಹುದು. ಜವಾಬ್ದಾರಿಯುತ ಸ್ಥಾನದಲ್ಲಿದ್ದವರು ತಮ್ಮ ಸ್ವಪ್ರತಿಷ್ಠೆ, ಅಹಂ ಅನ್ನು ಬದಿಗೊತ್ತಿ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಿದರೆ ಅಮಾಯಕರು ಬಲಿಪಶುವಾಗುವುದನ್ನು ತಪ್ಪಿಸಬಹುದು. ಒಂದು ಮಾತು, ನಿಮಗೆ ಯಾರಿಗಾದರೂ ಒಳ್ಳೆಯದು ಮಾಡಲು ಸಾಧ್ಯವಾಗದಿದ್ದರು ಪರ್ವಾಗಿಲ್ಲ, ಆದರೆ ಕೆಟ್ಟದ್ದನ್ನಂತೂ ಮಾಡಲೇಬಾರದು. ಅದು ಎಂದೆಂದಿಗೂ ಯಾರಿಗೂ ಒಳ್ಳೆಯದಲ್ಲ.



ಬದಲಾವಣೆ ಮಹದಾಶಯದೊಂದಿಗೆ
ರಾಮ್, ಟಿವಿ9, ಮೈಸೂರು.

# ನಿಗಮ–ಮಂಡಳಿ ನೇಮಕಾತಿಯಲ್ಲಿ ಗ್ರಾಮಾಂತರ ಅಲ್ಪಸಂಖ್ಯಾತ ಮುಖಂಡರಿಗೆ ಅವಕಾಶಕ್ಕೆ ಆಗ್ರಹ



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಅಲ್ಪಸಂಖ್ಯಾತ ವಿಭಾಗದ ಕಾರ್ಯಕಾರಿಣಿ ಸಭೆ ನಡೆಯಿತು.

ಮೈಸೂರು,ಫೆ.17(ಎಂಕೆ)–ಸರ್ಕಾರದ ನಿಗಮ–ಮಂಡಳಿಗಳ ನೇಮಕಾತಿಯಲ್ಲಿ ಗ್ರಾಮಾಂತರ ಪ್ರದೇಶದ ಅಲ್ಪಸಂಖ್ಯಾತ ಕಾಂಗ್ರೆಸ್ ಮುಖಂಡರಿಗೂ ಅವಕಾಶ ಮಾಡಿಕೊಡುವಂತೆ ಆಗ್ರಹಿಸಲಾಯಿತು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಅಲ್ಪಸಂಖ್ಯಾತ ವಿಭಾಗದ ಕಾರ್ಯಕಾರಿಣಿ ಸಭೆ ಹಾಗೂ ನೇಮಕಾತಿ ಆದೇಶ ಪತ್ರ ವಿತರಣಾ ಕಾರ್ಯಕ್ರಮದಲ್ಲಿ ಸರ್ಕಾರದ ನಿಗಮ–ಮಂಡಳಿಗಳ ನೇಮಕಾತಿಯಲ್ಲಿ ನಗರ ಪ್ರದೇಶದ ಮುಖಂಡರಿಗೆ ಆದ್ಯತೆ ನೀಡಲಾಗುತ್ತಿದ್ದು, ಗ್ರಾಮಾಂತರ ಭಾಗದ ಅಲ್ಪಸಂಖ್ಯಾತ ಮುಖಂಡರನ್ನು ಕಡೆಗಣಿಸಲಾಗಿದೆ ಎಂದು ಆಕ್ಷೇಪ ವ್ಯಕ್ತವಾಯಿತು.

ಮೈಸೂರು ಗ್ರಾಮಾಂತರ ಭಾಗದ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ 18–20 ಸಾವಿರದಷ್ಟು ಅಲ್ಪಸಂಖ್ಯಾತರಿದ್ದು, ಪಕ್ಷ ಸಂಘಟನೆಗೆ ಹಲವು ವರ್ಷಗಳಿಂದ ದುಡಿಯುತ್ತಿರುವ ನಿಷ್ಠಾವಂತ ಕಾರ್ಯಕರ್ತರಿಗೆ ನಿಗಮ–ಮಂಡಳಿಗಳಲ್ಲಿ ಹಾಗೂ ಜಿಪಂ, ತಾಪಂ ಚುನಾವಣೆಗಳಲ್ಲಿ ಅವಕಾಶ ಮಾಡಿಕೊಡಬೇಕು ಎಂದು ಕೋರಲಾಯಿತು.

ಸಭೆಯನ್ನುದ್ದೇಶಿಸಿ ಮಾತ ನಾಡಿದ ಮೈಸೂರು ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ಸರ್ಕಾರದ ನಿಗಮ–ಮಂಡಳಿಗಳು ಹಾಗೂ ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಗ್ರಾಮಾಂತರ ಭಾಗದ ಅಲ್ಪಸಂಖ್ಯಾತ ಮುಖಂಡರಿಗೂ ಅವಕಾಶ ನೀಡಬೇಕು ಎಂಬುದನ್ನು ಮುಖ್ಯಮಂತ್ರಿಗಳು, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಶಾಸಕರ ಗಮನಕ್ಕೆ ತರಲಾಗುವುದು ಎಂದು ಭರವಸೆ ನೀಡಿದರು.

ಬಳಿಕ ವಿವಿಧ ಬ್ಲಾಕ್‌ಗಳ ಅಧ್ಯಕ್ಷ ಮತ್ತು ಪದಾಧಿಕಾರಿಗಳಿಗೆ ನೇಮಕಾತಿ ಆದೇಶ ಪತ್ರವನ್ನು ವಿತರಣೆ ಮಾಡಲಾಯಿತು. ಅಲ್ಪಸಂಖ್ಯಾತ ವಿಭಾಗದ ಜಿಲ್ಲಾಧ್ಯಕ್ಷ ಮೋಸಿನ್ ಖಾನ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಅಲ್ಪಸಂಖ್ಯಾತ ವಿಭಾಗ ರಾಜ್ಯ ಪ್ರಧಾನ ಕಾರ್ಯದರ್ಶಿ ಅನ್ಸರ್ ಅಹ್ಮದ್, ಕಾರ್ಯದರ್ಶಿ ಸುಭಾನ್, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷರಾದ ಹೆಡ್ತಲೆ ಮಂಜುನಾಥ್, ಕಾರ್ಯದರ್ಶಿ ಸಂತೋಷ್, ಜಿಲ್ಲಾ ಅಲ್ಪಸಂಖ್ಯಾತ ವಿಭಾಗ ಉಪಾಧ್ಯಕ್ಷರಾದ ಶೇಕ್ ಅಸ್ಲಾಂ, ನಗರ್ಲೆ ಅಲ್ತಾಫ್ ಪಾಷಾ, ಪ್ರಧಾನ ಕಾರ್ಯದರ್ಶಿ ಕಡಕೊಳ ರಫೀಕ್ ಪಾಷಾ, ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷ ಆರೀಫ್ ಪಾಷ, ಮುಂಜಾಹಿದ್ ಕೋಟೆ, ಶಫೀ ಕೋಟೆ, ಅಮೀರ್ ಸುಹೇಲ್, ಮೊಹಮ್ಮದ್ ಷರೀಫ್, ಸೈಯದ್ ಆಜ್ಮತ್ ಉಲ್ಲಾ ಮತ್ತಿತರರಿದ್ದರು.

## ಸರ್ವೋತ್ತಮ ಸೇವಾ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮೈಸೂರು,ಫೆ17–2026ನೇ ಸಾಲಿನ ಜಿಲ್ಲೆ ಮತ್ತು ರಾಜ್ಯ ಮಟ್ಟದ 2 ಹಂತದ ಅರ್ಹ ಅಧಿಕಾರಿ/ನೌಕರರಿಂದ ಸರ್ವೋತ್ತಮ ಸೇವಾ ಪ್ರಶಸ್ತಿಗೆ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ಫೆ.26 ರವರೆಗೆ ಸಮಯಾವಕಾಶ ಕಲ್ಪಿಸಲಾಗಿದೆ. ಪ್ರತೀ ವರ್ಷ ಏಪ್ರಿಲ್ 21 ಅನ್ನು ರಾಜ್ಯ ಸರ್ಕಾರಿ ನೌಕರರ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದ್ದು, ಸದರಿ ದಿನಾಚರಣೆಯಂದೇ ಅತ್ಯುತ್ತಮ ಸೇವೆ ಮಾಡಿದ ಅಧಿಕಾರಿ, ನೌಕರರಿಗೆ ಸರ್ವೋತ್ತಮ ಸೇವಾ ಪ್ರಶಸ್ತಿ ನೀಡಿ, ಗೌರವಿಸಲಾಗುತ್ತಿದೆ. ಎರಡು ಪ್ರಶಸ್ತಿಗಳಿಗೂ ಪ್ರತ್ಯೇಕವಾಗಿ https://sarvothamaawards.karnataka.gov.in, https://dparar. karnataka.gov.in/ ಮೂಲಕ ಅರ್ಜಿ ಸಲ್ಲಿಸಬಹುದು. ಫೆ.26 ಕೊನೆಯ ದಿನಾಂಕ ಎಂದು ಜಿಲ್ಲಾಧ್ಯಕ್ಷ ಡಾ.ಅರುಣ ಕುಮಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ



# ಸಚಿವ ಮಹದೇವಪ್ಪರ 'ಬೀದಿ ನಾಯಿಗಳ' ವಿರುದ್ಧ ಡಿಕೆ ಸಹೋದರರ ಕಿಡಿ

## ಹೈಕಮಾಂಡ್‌ನ ಭಾಗವಾಗಿರುವ ಮಹದೇವಪ್ಪರ ಬಗ್ಗೆ ಮಾತನಾಡೋಲ್ಲ: ಡಿಕೆಶಿ

## ಕಟ್ಟಾ ಕಾಂಗ್ರೆಸ್ಸಿಗರೆಲ್ಲರೂ ನಿಯತ್ತಿನ ನಾಯಿಗಳೇ: ಡಿಕೆಸು

**ಬೆಂಗಳೂರು:** ಅಧಿಕಾರ ಹಸ್ತಾಂತರ ವಿಚಾರವಾಗಿ ಪ್ರತಿಕ್ರಿಯಿಸುವಾಗ ಬೀದಿನಾಯಿ ಕತೆ ಹೇಳಿದ್ದ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರ ವಿರುದ್ಧ ಡಿಕೆ ಸಹೋದರರು ಕಿಡಿಕಾರಿದ್ದಾರೆ.

ಬಳ್ಳಾರಿ ರಸ್ತೆಯಲ್ಲಿರುವ ರಾಜ್ಯ ಚುನಾವಣಾ ಆಯೋಗದ ಕಚೇರಿ ಬಳಿ ಮಾಧ್ಯಮಗಳೊಂದಿಗೆ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಬಹಳ ದೊಡ್ಡವರು. ಈಗ ಅವರೂ ನಮ್ಮ ಹೈಕಮಾಂಡ್ ಭಾಗವಾಗಿದ್ದಾರೆ. ಅವರ ಬಗ್ಗೆ ನಾನು ಏನನ್ನೂ ಮಾತನಾಡುವುದಿಲ್ಲ. ಈ ಬಗ್ಗೆ ಪಕ್ಷವೇ ತೀರ್ಮಾನ ಮಾಡಲಿ ಎಂದರು.

ನಾಯಕರ ಹೇಳಿಗೆ ಬಗ್ಗೆ ಸಿಎಂ ಹಾಗೂ ಹೈಕಮಾಂಡ್‌ನವರು ಕ್ರಮ ಕೈಗೊಳ್ಳುತ್ತಾರೆ. ನಾನು ಮಹದೇವಪ್ಪನಿಗೆ ಹಾಗೂ ಬೇರೆಯವರಿಗೆ ಉತ್ತರ ನೀಡಲು ತಯಾರಿಲ್ಲ. ನಾಯಕತ್ವ ವಿಚಾರವಾಗಿ ಈ ಹಿಂದೆ ಹೇಳಿರುವಂತೆ ನಾನು, ಸಿದ್ದರಾಮಯ್ಯನವರು ಹಾಗೂ ಹೈಕಮಾಂಡ್ ಎಲ್ಲರೂ ಸೇರಿ ತೆಗೆದುಕೊಂಡಿರುವ ತೀರ್ಮಾನ. ಈ ತೀರ್ಮಾನ ಏನು ಎಂಬುದು ಸಮಯ ಬಂದಾಗ ತಿಳಿಯುತ್ತದೆ. ಇದು ಕದ್ದುಮುಚ್ಚಿ ಮಾಡಿಕೊಂಡಿರುವ ಗುಟ್ಟು ವ್ಯವಹಾರವಲ್ಲ. ಸಿದ್ದರಾಮಯ್ಯ ಅವರೇ ಸಮಯ ಬಂದಾಗ ರಾಜ್ಯದ ಜನಕ್ಕೆ ಸಂದೇಶ ನೀಡುತ್ತಾರೆ ಎಂದು ತಿಳಿಸಿದರು.

**ನಿಯತ್ತಿನ ನಾಯಿಗಳು:** ಈ ವಿಚಾರವಾಗಿ ಡಿ.ಕೆ.ಶಿವಕುಮಾರ್ ಸೋದರ ಡಿ.ಕೆ.ಸುರೇಶ್ ಪ್ರತಿಕ್ರಿಯಿಸಿ, ಕಟ್ಟಾ ಕಾಂಗ್ರೆಸ್ಸಿಗರೆಲ್ಲರೂ ನಿಯತ್ತಿನ ನಾಯಿಗಳೇ ಹೊರತು ಬೀದಿ ನಾಯಿಗಳಲ್ಲ. ಬೀದಿ ನಾಯಿಗಳನ್ನು ಯಾರಿಗೆ ಹೋಲಿಸಿದ್ದಾರೋ ಗೊತ್ತಿಲ್ಲ, ಬೀದಿ ನಾಯಿಯೇ ಆಗಲಿ, ಸಾಕು ನಾಯಿಯೇ ಆಗಲಿ ನಿಯತ್ತಾಗಿರುತ್ತದೆ. ಅದು ಮಾಲೀಕನ ಋಣ ತೀರಿಸುತ್ತದೆ. ನಿಯತ್ತಿಗೆ



ನಾಯಿಯೇ ಪ್ರಸಿದ್ಧಿ. ಅದೇ ನಮ್ಮನ್ನ ಕಾಪಾಡುತ್ತೆ ಎಂಬ ವಿಶ್ವಾಸದಲ್ಲಿ ಮಾಲೀಕ ನಾಯಿಗೆ ಊಟ ಹಾಕುತ್ತಾರೆ ಅಲ್ಲವೇ ಎಂದು ಟಾಂಗ್ ನೀಡಿದ್ದಾರೆ.

**ಪ್ರವಾಸದ ಬಗ್ಗೆ ತಿಳಿದಿಲ್ಲ:** ಶಾಸಕರ ವಿದೇಶ ಪ್ರವಾಸದ ಬಗ್ಗೆ ಪ್ರತಿಕ್ರಿಯಿಸಿದ ಡಿ.ಕೆ.ಶಿವಕುಮಾರ್, ನನಗೆ ಯಾವ ಪ್ರವಾಸದ ಬಗ್ಗೆ ಮಾಹಿತಿ ಇಲ್ಲ. ಈ ಬಗ್ಗೆ ನನಗೆ ಮಾಧ್ಯಮಗಳಿಂದಷ್ಟೇ ತಿಳಿದಿದೆ. ಇದು ಅವರ ವೈಯಕ್ತಿಕ ಪ್ರವಾಸವೋ, ಬೇರೆಯವರು ಅವರನ್ನು ಪ್ರವಾಸಕ್ಕೆ ಕಳುಹಿಸುತ್ತಿದ್ದಾರೋ ಗೊತ್ತಿಲ್ಲ. ಇದು ಪ್ರವಾಸ ಕಳುಹಿಸುತ್ತಿರುವವರು ಹಾಗೂ ಪ್ರವಾಸಕ್ಕೆ ಹೋಗುತ್ತಿರುವವರಿಗೆ ಬಿಟ್ಟ ವಿಚಾರ. ಪಕ್ಷದ ಅಧ್ಯಕ್ಷನಾಗಿ ನಾನು ಇದರಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ ಎಂದರು.

**ಬಿಜೆಪಿ ವಿರುದ್ಧ ವಾಗ್ದಾಳಿ:** ಕಾಂಗ್ರೆಸ್ ಭವನಗಳಿಗೆ ಸರ್ಕಾರಿ ಜಮೀನು ಬಳಸಿಕೊಳ್ಳಲಾಗುತ್ತಿದೆ ಎಂಬ ಬಿಜೆಪಿ ನಾಯಕರ ಆರೋಪದ ಬಗ್ಗೆ ಪ್ರತಿಕ್ರಿಯಿಸಿ, ಖಂಡಿತವಾಗಿ ನಾವು ಕಾಂಗ್ರೆಸ್ ಭವನಗಳಿಗೆ ಸರ್ಕಾರಿ ಜಾಗ ಬಳಸಿಕೊಳ್ಳುತ್ತಿದ್ದೇವೆ. ನಾವು ಮಹಾತ್ಮಾ ಗಾಂಧಿಜಿ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷತೆ ವಹಿಸಿದ್ದರ ಶತಮಾನೋತ್ಸವ ಹಿನ್ನೆಲೆಯಲ್ಲಿ 100 ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಮುಂದಾಗಿದ್ದೇವೆ. ನಾವು 5-10 ಸಾವಿರ ಚದರ ಅಡಿಗಳಷ್ಟು ಜಾಗವನ್ನು ಮಂಜೂರು ಮಾಡುತ್ತಿದ್ದೇವೆ. ಬಿಜೆಪಿ ಆಡಳಿತ ಅವಧಿಯಲ್ಲಿ ಬೆಂಗಳೂರಿನ 100ಕ್ಕೂ ಹೆಚ್ಚು ಕಡೆ ವಿವಿಧ ಟ್ರಸ್ಟ್‌ಗಳ ಹೆಸರಿನಲ್ಲಿ ಜಾಗ ಪಡೆದಿದ್ದಾರೆ. ಪ್ರತಿ ಎಕರೆಗೆ 10 ಕೋಟಿ ರೂ. ಬೆಲೆಬಾಳುವ ಜಾಗವನ್ನು ಪ್ರತಿ ಎಕರೆಗೆ 50 ಲಕ್ಷದ ದರದಲ್ಲಿ 100 ಎಕರೆ ಜಾಗವನ್ನು ಚಾಣಾಕ್ಯ ವಿವಿಗೆ ಮಂಜೂರು ಮಾಡಿದ್ದಾರೆ. ಬಿಜೆಪಿ ಜಾಗ ಮಂಜೂರು ಮಾಡದೇ ಆರ್‌ಎಸ್‌ಎಸ್ ಕಚೇರಿ ಹೇಗೆ ನಿರ್ಮಾಣವಾಯಿತು. ಅವರು ನಮಗೆ ಬೋಧನೆ ಮಾಡುವ ಅಗತ್ಯವಿಲ್ಲ. ನಾವು ನಮ್ಮ ಪಕ್ಷದ ದೇವಾಲಯವನ್ನು ಕಟ್ಟಲು ಈ ತೀರ್ಮಾನಕ್ಕೆ ಬಂದಿದ್ದೇವೆ. ಇದು ನಮ್ಮ ಕರ್ತವ್ಯ. ನಾನು ಇದನ್ನು ಮಾಡಿಯೇ ಮಾಡುತ್ತೇನೆ. ಎಲ್ಲಾ ಮಾನದಂಡಗಳು, ಅರ್ಹತೆ ಆಧಾರದ ಮೇಲೆ ನಾವು ಈ ಜಾಗವನ್ನು ಮಂಜೂರು ಮಾಡುತ್ತಿದ್ದೇವೆ. ಈ ಬಗ್ಗೆ ಯಾರಾದರೂ ನ್ಯಾಯಾಲಯದ ಮೆಟ್ಟಿಲೇರಿದರೆ ಅದನ್ನು ನಾವು ಎದುರಿಸುತ್ತೇವೆ ಎಂದು ತಿಳಿಸಿದರು.

### ಹೈಕಮಾಂಡ್ ತೀರ್ಮಾನಕ್ಕೆ ಬದ್ಧ

**ಬೆಳಗಾವಿ:** ಮುಖ್ಯಮಂತ್ರಿ ಬದಲಾವಣೆ ಕುರಿತಂತೆ ಹೈಕಮಾಂಡ್ ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಸ್ಪಷ್ಟಪಡಿಸಿದ್ದಾರೆ.

ಬೆಳಗಾವಿ ನಗರದ ಕಿತ್ತೂರು ಚೆನ್ನಮ್ಮ ಸರ್ಕಲ್‌ನಲ್ಲಿ ಅಕ್ಕಪಡೆಗೆ ಚಾಲನೆ ನೀಡಿದ ವೇಳೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಮುಖ್ಯಮಂತ್ರಿ ಬದಲಾವಣೆ ವಿಚಾರವಾಗಿ ಪಕ್ಷದ ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳುತ್ತದೆ. ಆ ತೀರ್ಮಾನಕ್ಕೆ ನಾವು ಬದ್ಧವಾಗಿರುತ್ತೇವೆ. ಹೀಗಿರುವಾಗ ಈ ವಿಚಾರದ ಬಗ್ಗೆ ಚರ್ಚಿಸಿದರೆ ಅಕ್ಷಮ್ಯ ಅಪರಾಧ ಆಗುತ್ತದೆ ಎಂದರು.

## ಅಧಿಕಾರ ಹಂಚಿಕೆ ಬಗ್ಗೆ ಸಿಎಂ ಇಲ್ಲ ಹೈಕಮಾಂಡ್ ಸ್ಪಷ್ಟಪಡಿಸಿದರೆ ಗೊಂದಲವೇ ಇರಲ್ಲ!

**ದಾವಣಗೆರೆ:** ಎರಡೂವರೆ ವರ್ಷ ಅಧಿಕಾರ ಹಂಚಿಕೆ ಬಗ್ಗೆ ಮಾತು ಕೊಟ್ಟಿಲ್ಲ ಎಂದು ತಿಳಿಸಿಬಿಟ್ಟರೆ ಯಾವುದೇ ಗೊಂದಲ ಇರುವುದಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆಪ್ತ, ಚನ್ನಗಿರಿ ಶಾಸಕ ಬಸವರಾಜ್ ಶಿವಗಂಗಾ ಆಗ್ರಹಿಸಿದ್ದಾರೆ.



ತಮ್ಮ ನಿವಾಸದಲ್ಲಿಂದು ಮಾತನಾಡಿದ ಅವರು, ಸಿದ್ದರಾಮಯ್ಯನವರು ಯಾರ ಮೇಲೆ ಪ್ರಮಾಣ ಮಾಡಿದ್ದಾರೋ ನನಗೆ ಗೊತ್ತಿಲ್ಲ. ಎರಡೂವರೆ ವರ್ಷ ಅಧಿಕಾರ ಹಂಚಿಕೆ ಬಗ್ಗೆ ಹೈಕಮಾಂಡ್ ಇಲ್ಲವೇ, ಸಿದ್ದರಾಮಯ್ಯನವರು ಸ್ಪಷ್ಟಪಡಿಸಬೇಕು. ಅಧಿಕಾರ ಹಂಚಿಕೆ ಬಗ್ಗೆ ಮಾತು ಕೊಟ್ಟಿಲ್ಲ ಎಂದು ತಿಳಿಸಲಿ. ಆಗ ನಾವು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡೋದು ತಪ್ಪುತ್ತದೆ. ಯಾವ ಗೊಂದಲವೂ ಇರುವುದಿಲ್ಲ ಡಿಕೆ ಅವರು ಸಿಎಂ ಇವತ್ತೇ ಆಗಲಿ ಎನ್ನುವುದರಲ್ಲಿ ನಾನು ಮೊದಲಿಗ. ಆದರೆ ಅದನ್ನೆಲ್ಲಾ ತೀರ್ಮಾನ ಮಾಡೋದು ಹೈಕಮಾಂಡ್ ಎಂದರು.

ಸಚಿವ ಹೆಚ್.ಸಿ.ಮಹದೇವಪ್ಪ ನಾಯಿ ಬಾಲದ ಬಗ್ಗೆ ಮಾತನಾಡಬಾರದು. ನಾಯಿಗೆ ಬಾಲ ಇದ್ದರೇನೇ ಶೋಭೆ. ಆದರೆ ನಾಯಿ ಎಂದು ಹೆಚ್.ಸಿ.ಮಹದೇವಪ್ಪ ಹೇಳಿಕೆ ನೀಡಬಾರದಿತ್ತು. ಈ ರೀತಿ ಹೇಳಿಕೆ ನೀಡಿದ ಮಹದೇವಪ್ಪನವರು ಗಾಜಿನ ಮನೆಯಲ್ಲಿ ಕೂತಿದ್ದಾರೆ. ಅಲ್ಲಿ ಕೂತು ಕಲ್ಲು ಹೊಡೆಯೋದು ಸರಿಯಲ್ಲ. ಮಹದೇವಪ್ಪನವರು ಶಾಸಕರನ್ನು ಬೀದಿ ನಾಯಿಗೆ ಹೋಲಿಸಿದ್ದರೆ, ಅವರೂ ಶಾಸಕರಲ್ಲವೇ, ಹಿರಿಯರಾದ ಅವರ ಬಾಯಲ್ಲಿ ಇಂತಹ ಪದಗಳು ಬರಬಾರದು ಎಂದು ವಾಗ್ದಾಳಿ ನಡೆಸಿದರು.

ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಹೇಳಿಕೆ ಬಗ್ಗೆ ನನಗೆ ಗೊತ್ತಿಲ್ಲ. ರಾಜ್ಯದಲ್ಲಿ ವಿರೋಧ ಪಕ್ಷ ಸತ್ತು ಹೋಗಿದೆ. ಅವರೇ ಮುಂದಿನ ಸಿಎಂ ಬಗ್ಗೆ ಕಿತ್ತಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಅಧಿಕಾರರೂಢ ಪಕ್ಷ ಹೆಚ್ಚು ಕೆಲಸ ಮಾಡಿ ಜನ ಮನ್ನಣೆ ಗಳಿಸಿದೆ. ಮೊನ್ನೆ ಡಿಕೆಶಿಯವರು ಮುಂದಿನ ವಿಧಾನಸಭಾ ಚುನಾವಣೆಯಲ್ಲಿ 141ಕ್ಕಿಂತ ಹೆಚ್ಚು ಸೀಟ್ ಬರುತ್ತವೆ ಎಂದಿದ್ದರು. ಆದರೆ ಮುಖ್ಯಮಂತ್ರಿ ಹೇಳಿಕೆ ಗೊಂದಲದಿಂದ ನಾವೇ ಆಡಳಿತ ಪಕ್ಷ, ನಾವೇ ವಿರೋಧ ಪಕ್ಷವಾಗಿದ್ದೇವೆ. ಕೂಡಲೇ ಹೈಕಮಾಂಡ್ ಇದಕ್ಕೆ ಎಂಟ್ರಿಯಾಗಿ ಇತ್ಯರ್ಥ ಮಾಡಬೇಕಿದೆ. ಹೈಕಮಾಂಡ್ ಎಲ್ಲವನ್ನೂ ಗಮನಿಸುತ್ತಿದ್ದು, ಸೂಕ್ತ ಸಮಯದಲ್ಲಿ ತೀರ್ಮಾನ ತೆಗೆದುಕೊಳ್ಳುತ್ತದೆ. ಮೊದಲ ಬಾರಿ ಶಾಸಕರಾಗಿರುವ ನಾವು, ಹೈಕಮಾಂಡ್ ಬಳಿ ಹೋಗಿ ಈ ವಿಚಾರದ ಬಗ್ಗೆ ಮಾತನಾಡುವಷ್ಟು ದೊಡ್ಡವರಲ್ಲ. ಆದ್ದರಿಂದ ಮಾಧ್ಯಮಗಳ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇವೆ ಎಂದು ತಿಳಿಸಿದರು.

## ಇನ್ನು ನನ್ನನ್ನ ಏನು ಕೇಳಬೇಡಿ...

ಮೈಸೂರು, ಫೆ.17- ಅಧಿಕಾರ ಹಂಚಿಕೆ ವಿಚಾರವನ್ನು ಪ್ರಶ್ನಿಸಿದಾಗಲೆಲ್ಲಾ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ಮುಂದುವರೆಯುತ್ತಾರೆಂದು ದಿಟ್ಟವಾಗಿ ಹೇಳುತ್ತಿದ್ದ ಅವರ ಪುತ್ರ ಎಂಎಲ್‌ಸಿ ಡಾ.ಯತೀಂದ್ರ ಸಿದ್ದರಾಮಯ್ಯ, ಇನ್ನು ಈ ಬಗ್ಗೆ ನನ್ನನ್ನು ಕೇಳಬೇಡಿ ಎಂದಿದ್ದಾರೆ.



ಮೈಸೂರಿನಲ್ಲಿ ಮಂಗಳವಾರ ಅಧಿಕಾರ ಹಂಚಿಕೆ ವಿಚಾರವಾಗಿ ಮಾಧ್ಯಮದವರು ಪ್ರಶ್ನಿಸಿದಾಗ, ನಾನು ಈ ವಿಚಾರದಲ್ಲಿ ಏನನ್ನೂ ಮಾತನಾಡುವುದಿಲ್ಲ, ನವೆಂಬರ್‌ನಿಂದಲೂ ಇದೆ ಪ್ರಶ್ನೆಗೆ ಉತ್ತರ ನೀಡುತ್ತಾ ಬಂದಿದ್ದೇನೆ ಇನ್ನು ನಾನು ಈ ಬಗ್ಗೆ ಏನೂ ಮಾತನಾಡುವುದಿಲ್ಲ. ಯಾರ್ಯಾರ ಹೇಳಿಕೆಗಳಿಗೋ ನಾನು ಉತ್ತರಿಸುವುದಿಲ್ಲ. ಇನ್ನು ನನ್ನನ್ನು ಆ ಬಗ್ಗೆ ಕೇಳಬೇಡಿ ಎಂದರು.

ಶಾಸಕರ ವಿದೇಶಿ ಪ್ರವಾಸದ ಬಗ್ಗೆ ಪ್ರತಿಕ್ರಿಯಿಸಿ, ಸಚಿವರು ಮತ್ತು ಶಾಸಕರು ಸ್ವಂತ ಖರ್ಚಿನಲ್ಲಿ ವಿದೇಶ ಪ್ರವಾಸಕ್ಕೆ ಹೋಗುತ್ತಿದ್ದಾರೆ. ವೈಯಕ್ತಿಕ ಪ್ರವಾಸ ಎಂದ ಮೇಲೆ ಅವರನ್ನು ಹೋಗಬೇಡಿ ಎನ್ನಲು ಹೇಗೆ ಸಾಧ್ಯ. ಈ ವಿದೇಶಿ ಪ್ರವಾಸಕ್ಕೂ ರಾಜಕಾರಣಕ್ಕೂ ಯಾವುದೇ ಸಂಬಂಧ ಇಲ್ಲ. ಯಾವ ರಾಜಕೀಯ ಬೆಳವಣಿಗೆಗಳು ಇಲ್ಲ. ನನ್ನನಂತೂ ವಿದೇಶಿ ಪ್ರವಾಸಕ್ಕೆ ಕರೆದಿಲ್ಲ, ನಾನು ಹೋಗುತ್ತಿಲ್ಲ ಎಂದು ಸ್ಪಷ್ಟಪಡಿಸಿದರು.

ಯತೀಂದ್ರ ಟ್ರಾನ್ಸ್‌ಫರ್ ಮಿನಿಸ್ಟರ್ ಎಂಬ ಬಿಜೆಪಿ ಮಾಜಿ ಸಂಸದ ಪ್ರತಾಪ್‌ಸಿಂಹ ಆರೋಪದ ಬಗ್ಗೆ ಮಾತನಾಡಿ, ಹಾದಿ ಬೀದಿಯಲ್ಲಿ ಹೋಗುವವರೆಲ್ಲಾ ಮಾತನಾಡಿದರೆ ಅದಕ್ಕೆ ಉತ್ತರ ಕೊಡಲು ಆಗುವುದಿಲ್ಲ. ಅವರ ಆರೋಪಕ್ಕೆ ಒಂದಾದರೂ ಉತ್ತರ ಇದ್ಯಾ? ಪ್ರತಾಪ ಸಿಂಹ, ಯತ್ನಾಳ್‌ಗೆ ಮಾಡಲು ಕೆಲಸ ಇಲ್ಲ. ಬಿಜೆಪಿ ಐಟಿ ಸೆಲ್‌ನವರೂ ಏನೇನೋ ತಿರುಚುತ್ತಾರೆ. ಇದಕ್ಕೆಲ್ಲ ಉತ್ತರ ಕೊಡುತ್ತಾ ಕುಳಿತುಕೊಳ್ಳಲು ಸಾಧ್ಯವಿಲ್ಲ ಎಂದು ಕಿಡಿಕಾರಿದರು.

ಅಧಿಕಾರ ಹಂಚಿಕೆ ಸಂಬಂಧ ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರ ಹೇಳಿಕೆ ವಿವಾದ ಸೃಷ್ಟಿಸಿರುವ ಬಗ್ಗೆ ಡಾ.ಯತೀಂದ್ರ ಪ್ರತಿಕ್ರಿಯೆ ನೀಡಲಿಲ್ಲ.

# ಬಲಗೈ ಜನಪ್ರತಿನಿಧಿಗಳಿಗೆ ಸಮುದಾಯ ಹಿತಕ್ಕಿಂತ ಅಧಿಕಾರವೇ ಮುಖ್ಯವೇ!?

- ಸ್ವ ಸಮುದಾಯದ ಜನಪ್ರತಿನಿಧಿಗಳ ಬಗ್ಗೆ ಎನ್.ಭಾಸ್ಕರ್ ಅಸಮಾಧಾನ
- ಕೆ.ಹೆಚ್.ಮುನಿಯಪ್ಪ ನೇತೃತ್ವದಲ್ಲಿ ಒಳಮೀಸಲಾತಿ ವಿಧೇಯಕ ಅಂಗೀಕರಿಸಲು ರಾಜ್ಯಪಾಲರಿಗೆ ಮನವಿ ಸಲ್ಲಿಕೆ

ಮೈಸೂರು,ಫೆ.17(ಪಿಎಂ)- ಕರ್ನಾಟಕ ಅನುಸೂಚಿತ ಜಾತಿಗಳ (ಉಪ ವರ್ಗೀಕರಣ) ವಿಧೇಯಕ 2025 ಅನ್ನು ಅನುಮೋದಿಸುವಂತೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರಿಗೆ ಸಚಿವ ಕೆ.ಹೆಚ್.ಮುನಿಯಪ್ಪ ನೇತೃತ್ವದಲ್ಲಿ ಸಚಿವ ತಿಮ್ಮಾಪುರ, ಶಾಸಕರು, ಎಂಎಲ್‌ಸಿಗಳು ಮತ್ತು ಸಮುದಾಯದ ಮುಖಂಡರ ನಿಯೋಗದಿಂದ ಮನವಿ ಸಲ್ಲಿಸಲಾಯಿತು.



ಎನ್.ಭಾಸ್ಕರ್

ಲೋಕಭವನದಲ್ಲಿ ರಾಜ್ಯಪಾಲರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಯಿತು. ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟ ಒಳಮೀಸಲಾತಿ ಮಸೂದೆಗೆ ಶೀಘ್ರ ಅನುಮೋದನೆ ನೀಡಬೇಕೆಂದು ನಿಯೋಗದಿಂದ ವಿನಂತಿಸಲಾಯಿತು.

**ಅಸಮಾಧಾನ:** ಒಳಮೀಸಲಾತಿ ಸಂಬಂಧ ವಿಧೇಯಕಕ್ಕೆ ಅನುಮೋದನೆ ನೀಡುವಂತೆ ರಾಜ್ಯಪಾಲರಿಗೆ ಸಚಿವ ಕೆ.ಹೆಚ್.ಮುನಿಯಪ್ಪ ನೇತೃತ್ವದಲ್ಲಿ ಮನವಿ ಸಲ್ಲಿಸಿದ್ದರೆ, ನಮ್ಮ ಬಲಗೈ ಸಮುದಾಯದ ಸಚಿವರು, ಶಾಸಕರು ಸಮುದಾಯದ ಹಿತಕ್ಕಿಂತ ಅಧಿಕಾರವೇ ಮುಖ್ಯವೆಂಬಂತೆ ನಿರ್ಲಕ್ಷ್ಯ ತಾಳಿದಂತಿದೆ ಎಂದು ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.




ಸಚಿವ ಕೆ.ಹೆಚ್.ಮುನಿಯಪ್ಪ ನೇತೃತ್ವದಲ್ಲಿ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.

ಎಡಗೈ ಸಮುದಾಯದವರನ್ನು ಒಲೈಸಿಕೊಂಡರೆ ಸಾಕು, ನಮ್ಮ ಸಮುದಾಯದವರು ನಮಗೆ ಓಟು ಕೊಟ್ಟೇ ಕೊಡುತ್ತಾರೆಂದು ಬಲಗೈ ಜನಪ್ರತಿನಿಧಿಗಳು ಭಾವಿಸಿದಂತೆ ಕಾಣುತ್ತಿದೆ. ಒಂದು ವೇಳೆ ಆಗೆಂದು ಭಾವಿಸಿದ್ದರೆ, ಅದು ಅವರ ಭ್ರಮೆ. ಈ ಕಷ್ಟ ಕಾಲದಲ್ಲಿ ಸಮುದಾಯದ ಹಿತ ಕಾಯುವವರನ್ನು ಬಲಗೈ ಸಮುದಾಯವು ಪಕ್ಷಾತೀತವಾಗಿ ಬೆಂಬಲಿಸಲಿದೆ ಎಂದು ಅವರು ಪ್ರಕಟಣೆಯಲ್ಲಿ ಎಚ್ಚರಿಸಿದ್ದಾರೆ.

## ರಾಹುಲ್ ಗಾಂಧಿ ವಿರುದ್ಧ ಬಿಜೆಪಿ ದಾಖಲಿಸಿದ್ದ ಮಾನನಷ್ಟ ಮೊಕದ್ದಮೆ ರದ್ದು

**ಬೆಂಗಳೂರು:** 2023ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಪ್ರಮುಖ ದಿನಪತ್ರಿಕೆಗಳಲ್ಲಿ 'ಭ್ರಷ್ಟಾಚಾರ ರೇಟ್ ಕಾರ್ಡ್' ಜಾಹೀರಾತು ಪ್ರಕಟಿಸಿದ್ದಕ್ಕಾಗಿ ರಾಜ್ಯ ಬಿಜೆಪಿ ಘಟಕ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ವಿರುದ್ಧ ದಾಖಲಿಸಿದ್ದ ಮಾನನಷ್ಟ ಮೊಕದ್ದಮೆಯನ್ನು, ಕರ್ನಾಟಕ ಹೈಕೋರ್ಟ್ ಮಂಗಳವಾರ ರದ್ದುಗೊಳಿಸಿದೆ.



ಈ ಹಿಂದಿನ ಬಿಜೆಪಿ ಸರ್ಕಾರದ ವಿರುದ್ಧ ಕಾಂಗ್ರೆಸ್ ಬಿಡುಗಡೆ ಮಾಡಿದ್ದ 'ಕರಪ್ಷನ್ ರೇಟ್ ಕಾರ್ಡ್' ಜಾಹೀರಾತನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದ ರಾಹುಲ್ ಗಾಂಧಿ ವಿರುದ್ಧ ಬಿಜೆಪಿ ಪರವಾಗಿ ಕೇಶವಪ್ರಸಾದ್ ಎಂಬುವವರು ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು.

ಇದನ್ನು ಪ್ರಶ್ನಿಸಿ ರಾಹುಲ್ ಗಾಂಧಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸುನೀಲ್ ದತ್ ಯಾದವ್ ಅವರಿದ್ದ ಹೈಕೋರ್ಟ್ ಪೀಠ, ಪ್ರಕರಣದ ಸ್ವರೂಪ ಮತ್ತು ದಾಖಲೆಗಳನ್ನು ಪರಿಗಣಿಸಿ ಮಾನನಷ್ಟ ಮೊಕದ್ದಮೆಯನ್ನು ರದ್ದುಗೊಳಿಸಿ ಆದೇಶ ಹೊರಡಿಸಿದ್ದಾರೆ.

## ಟಿ-20 ಮಹಾಸಮರ

# ಸೂಪರ್-8ಕ್ಕೆ ಎಂಟ್ರಿಕೊಟ್ಟ ಜಿಂಬಾಬ್ವೆ...

ಶ್ರೀಲಂಕಾ, ಫೆ.17(ವಿವಿಹೆಚ್)- ಜಿಂಬಾಬ್ವೆ ಮತ್ತು ಐರ್ಲೆಂಡ್ ನಡುವೆ ನಡೆಯಬೇಕಿದ್ದ ಪಂದ್ಯ ಮಳೆಯಿಂದ ರದ್ದಾದ ಕಾರಣ ಜಿಂಬಾಬ್ವೆ ಸೂಪರ್-8ಗೆ ಅಚ್ಚರಿಯ ಎಂಟ್ರಿ ಕೊಟ್ಟಿದೆ.

ಇಲ್ಲಿನ ಕ್ಯಾಂಡಿಯ ಪಲ್ಲೆಕೆಲೆ ಕ್ರೀಡಾಂಗಣದಲ್ಲಿ ಇತ್ತಂಡಗಳ ನಡುವೆ ಮಂಗಳವಾರ ನಡೆಯಬೇಕಿದ್ದ ಐಸಿಸಿ ಪುರುಷರ ಟಿ20 ವಿಶ್ವಕಪ್ 2026ರ ಗ್ರೂಪ್ ಹಂತದ 32ನೇ ಪಂದ್ಯ ಮಳೆಯಿಂದ ರದ್ದಾಯಿತು. ಬಿ ಗುಂಪಿನಿಂದ ಬಲಿಷ್ಠ ಆಸ್ಟ್ರೇಲಿಯಾ ತಂಡವನ್ನು ಮಣಿಸಿದ ಶ್ರೀಲಂಕಾ ಸೂಪರ್-8 ಸುತ್ತಿಗೆ ಮೊದಲ ತಂಡವಾಗಿ ಲಗ್ಗೆ ಇಟ್ಟಿತು. ಇತ್ತ ತಾನಾಡಿದ ಮೊದಲೆರಡು ಪಂದ್ಯದಲ್ಲಿ ಗೆಲುವು ದಾಖಲಿಸಿದ್ದ ಜಿಂಬಾಬ್ವೆಗೆ ಸೂಪರ್-8ಕ್ಕೆ ಎಂಟ್ರಿ ಸಿಗುವುದು ಬಹುತೇಕ ಖಚಿತವಾಗಿತ್ತು. ಹಾಗಿದ್ದರೂ ಆಸ್ಟ್ರೇಲಿಯಾ ಹಾಗೂ ಜಿಂಬಾಬ್ವೆ ಎರಡು ತಂಡಗಳು ಎರಡನೇ ಸ್ಥಾನಕ್ಕೆ ಪೈಪೋಟಿ ಒಡ್ಡಿದ್ದವು.



ಸೂಪರ್-8 ಹಂತಕ್ಕೆ ಲಗ್ಗೆಯಿಟ್ಟ ಜಿಂಬಾಬ್ವೆ ಆಟಗಾರರ ಸಂಭ್ರಮ

**ಸೂಪರ್-8 ಹಂತಕ್ಕೆ ಅರ್ಹತೆ ಪಡೆದಿರುವ ಜಿಂಬಾಬ್ವೆ ಗ್ರೂಪ್-1ರಲ್ಲಿ ಸ್ಥಾನ ಪಡೆದಿದ್ದು, ಬಲಿಷ್ಠ ಭಾರತ, ವೆಸ್ಟ್ ಇಂಡೀಸ್ ಹಾಗೂ ದಕ್ಷಿಣ ಆಫ್ರಿಕಾ ತಂಡಗಳೊಂದಿಗೆ ಕಾಣಿಸಿಕೊಂಡಿದೆ. ಈ ಎಲ್ಲಾ ತಂಡಗಳೊಂದಿಗೆ ಒಂದೊಂದು ಪಂದ್ಯ ನಡೆಯಲಿದ್ದು, ಕನಿಷ್ಠ 2 ಪಂದ್ಯ ಗೆದ್ದು, ಉತ್ತಮ ರನ್‌ರೇಟ್ ಪಡೆದಿದ್ದೇ ಆದಲ್ಲಿ ಜಿಂಬಾಬ್ವೆ ಸೆಮಿ ಫೈನಲ್ಸ್‌ಗೆ ಲಗ್ಗೆಯಿಡಲಿದೆ.**

ಆಸ್ಟ್ರೇಲಿಯಾ ಟೂರ್ನಿಯಲ್ಲಿ ಆಡಿ ರುವ ಮೂರು ಪಂದ್ಯಗಳ ಪೈಕಿ ಒಂದರಲ್ಲಿ ಮಾತ್ರ ಗೆದ್ದು ಉಳಿದೆರಡು ಪಂದ್ಯಗಳಲ್ಲಿ ಸೋಲನ್ನು ಕಂಡಿದ್ದು, ಕೇವಲ 2 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿತ್ತು. ಜಿಂಬಾಬ್ವೆ ಆಡಿರುವ ಎರಡು ಪಂದ್ಯ ಗಳನ್ನು ಗೆದ್ದು ನಾಲ್ಕು ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿತ್ತು.

ಹೀಗಾಗಿ ಜಿಂಬಾಬ್ವೆ ಹಾಗೂ ಐರ್ಲೆಂಡ್ ತಂಡಗಳ ನಡುವಿನ ಈ ಪಂದ್ಯದಲ್ಲಿ ಐರ್ಲೆಂಡ್ ಗೆದ್ದರೆ ಮಾತ್ರ ಆಸ್ಟ್ರೇಲಿಯಾ ಸೂಪರ್ 8 ಕನಸು ಜೀವಂತವಾಗಿ ಉಳಿದುಕೊಳ್ಳುತ್ತಿತ್ತು. ಒಂದು ವೇಳೆ ಜಿಂಬಾಬ್ವೆ ಗೆದ್ದರೆ ಆಸ್ಟ್ರೇಲಿಯಾ ಟೂರ್ನಿಯಿಂದ ಹೊರಬೀಳಲಿದ್ದು, ಜಿಂಬಾಬ್ವೆ ನೇರವಾಗಿ ಸೂಪರ್ 8 ತಲುಪುವುದರಲ್ಲಿತ್ತು.

ಹೀಗೆ ಭಾರೀ ಮಹತ್ವ ಪಡೆದುಕೊಂಡಿದ್ದ ಈ ಪಂದ್ಯದ ಟಾಸ್ ನಡೆಯುವ ಮುನ್ನವೇ ಮಳೆ ಆಗಮನವಾಗಿ ಪಂದ್ಯ ರದ್ದಾಯಿತು. ಈ ಮೂಲಕ ಐರ್ಲೆಂಡ್ ಹಾಗೂ ಜಿಂಬಾಬ್ವೆ ಎರಡೂ ತಂಡಗಳಿಗೂ ತಲಾ ಒಂದೊಂದು ಅಂಕ ಲಭಿಸಿತು.

5 ಅಂಕಗಳನ್ನು ಪಡೆದ ಜಿಂಬಾಬ್ವೆ ನೇರವಾಗಿ ಸೂಪರ್ 8 ಸುತ್ತಿಗೆ ಅರ್ಹತೆ ಪಡೆದುಕೊಂಡಿತು. ಸದ್ಯ ಎರಡು ಅಂಕಗಳನ್ನು ಹೊಂದಿರುವ ಆಸ್ಟ್ರೇಲಿಯಾ ಉಳಿದ ಪಂದ್ಯ ಗೆದ್ದರೆ 4 ಅಂಕಗಳನ್ನು ಪಡೆಯಲಿದೆ. ಆದರೆ ಆಸೀಸ್‌ಗಿಂತ 1 ಅಂಕ ಮುಂದೆ ಇರುವ ಜಿಂಬಾಬ್ವೆ ಸೂಪರ್-8 ಸುತ್ತಿಗೆ ಪ್ರವೇಶಿಸಿದ್ದು, ಆಸ್ಟ್ರೇಲಿಯಾ ಟೂರ್ನಿಯಿಂದ ಹೊರಬೀಳುವ ಮೂಲಕ ಭಾರೀ ಮುಖಭಂಗ ಅನುಭವಿಸಿತು.

# ಕೆನಡಾ ವಿರುದ್ಧ ನ್ಯೂಜಿಲೆಂಡ್‌ಗೆ ಜಯ

ಚೆನ್ನೈ, ಫೆ.17(ವಿವಿಹೆಚ್)- ಗ್ಲೇನ್ ಫಿಲಿಪ್ಸ್ ಹಾಗೂ ರಚಿನ್ ರವೀಂದ್ರ ಅವರ ಅಜೇಯ ಅರ್ಧಶತಕದಾಟದ ಬಲದಿಂದ ನ್ಯೂಜಿಲೆಂಡ್, ಕೆನಡಾ ತಂಡವನ್ನು 8 ವಿಕೆಟ್‌ಗಳಿಂದ ಮಣಿಸಿದೆ.

ಇಲ್ಲಿನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಐಸಿಸಿ ಪುರುಷರ ಟಿ20 ವಿಶ್ವಕಪ್ 2026ರ ಗ್ರೂಪ್ ಹಂತದ 31ನೇ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಕೆನಡಾ ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 173 ರನ್ ಗಳಿಸಿತು. ಈ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ನ್ಯೂಜಿಲೆಂಡ್ 15.1 ಓವರ್‌ಗಳಲ್ಲಿ ಕೇವಲ 2 ವಿಕೆಟ್ ಕಳೆದುಕೊಂಡು 176 ರನ್ ಗಳಿಸಿ ಗೆಲುವಿನ ನಗೆ ಬೀರಿತು.

ಮೊದಲು ಬ್ಯಾಟ್ ಮಾಡಿದ ಕೆನಡಾ ತಂಡಕ್ಕೆ ಆರಂಭಿಕ ಬ್ಯಾಟರ್ ಯುವರಾಜ್ ಸಾಮ್ರಾ ಭರ್ಜರಿ ಆರಂಭ ಒದಗಿಸಿಕೊಟ್ಟರು. ತಾವಾಡಿ 65 ಎಸೆತಗಳಲ್ಲಿ 11 ಬೌಂಡರಿ, 6 ಸಿಕ್ಸರ್ ಸಹಿತ 110 ರನ್ ಬಾರಿಸಿ ತಂಡ ಉತ್ತಮ ಮೊತ್ತ ಕಲೆಹಾಕುವಲ್ಲಿ ಸಹಕರಿಸಿದರು.

ಕೆನಡಾದ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ನ್ಯೂಜಿಲೆಂಡ್‌ಗೆ ಆರಂಭಿಕ ಆಘಾತ ಎದುರಾಯಿತು. ಟಿಮ್ ಸೀಫರ್ಟ್ 6 ರನ್, ಫೀನ್ ಆಲೆನ್ 21 ರನ್ ಗಳಿಸಿ ನಿರ್ಗಮಿಸಿದರು. ಕೇವಲ 31 ರನ್‌ಗೆ ಪ್ರಮುಖ 2 ವಿಕೆಟ್ ಕಳೆದುಕೊಂಡು ಕಿವೀಸ್ ಸಂಕಷ್ಟಕ್ಕೆ ಸಿಲುಕಿತ್ತು ಈ ವೇಳೆ ಒಂದಾದ ರಚಿನ್ ರವೀಂದ್ರ ಹಾಗೂ ಗ್ಲೇನ್ ಫಿಲಿಪ್ಸ್ ಸಮಯೋಚಿತ ಆಟದ ಮೂಲಕ ನ್ಯೂಜಿಲೆಂಡ್‌ಗೆ ಗೆಲುವು ತಂದುಕೊಟ್ಟರು. ಕೆನಡಾ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದ ಈ ಇಬ್ಬರು ಬ್ಯಾಟರ್‌ಗಳು ಅಜೇಯರಾಗಿ ಉಳಿದರು. ರಚಿನ್ ರವೀಂದ್ರ 39 ಎಸೆತಗಳಲ್ಲಿ 4ಬೌಂಡರಿ, 3 ಸಿಕ್ಸರ್‌ನೊಂದಿಗೆ 59 ರನ್ ಗಳಿಸಿದರೆ, ಗ್ಲೇನ್ ಫಿಲಿಪ್ಸ್ 36 ಎಸೆತಗಳಲ್ಲಿ 4ಬೌಂಡರಿ, 6 ಸಿಕ್ಸರ್ ಸಹಿತ 76ರನ್ ಚಚ್ಚಿದರು.

ಕೆನಡಾ ಪರ ಡಿಲನ್ ಹೆಯ್ಲಿಗರ್ ಹಾಗೂ ಸಾದ್ ಬಿನ್ ಜಾಫರ್ ಒಂದೊಂದು ವಿಕೆಟ್ ಪಡೆದರು. ಭರ್ಜರಿ ಬ್ಯಾಟಿಂಗ್ ಪ್ರದರ್ಶನದ ಮೂಲಕ ಕಿವೀಸ್ ಪಡೆಗೆ ಗೆಲುವು ತಂದುಕೊಟ್ಟ ಗ್ಲೇನ್ ಫಿಲಿಪ್ಸ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದುಕೊಂಡರು.

# ಗೆಲುವಿನೊಂದಿಗೆ ಪಂದ್ಯಾವಳಿಗೆ ವಿದಾಯ ಹೇಳಿದ ನೇಪಾಳ

ಮುಂಬೈ, ಫೆ.17(ವಿವಿಹೆಚ್)- ಇಲ್ಲಿನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಐಸಿಸಿ ಪುರುಷರ ಟಿ20 ವಿಶ್ವಕಪ್ 2026ರ ಗ್ರೂಪ್ ಹಂತದ 33ನೇ ಪಂದ್ಯದಲ್ಲಿ ಸ್ಕಾಟ್ಲೆಂಡ್ ವಿರುದ್ಧ ನೇಪಾಳ 7 ವಿಕೆಟ್‌ಗಳ ಗೆಲುವು ದಾಖಲಿಸಿದೆ.

ಸತತ 3 ಪಂದ್ಯಗಳನ್ನು ಸೋತು ಟೂರ್ನಿಯಿಂದ ಹೊರಬಿದ್ದಿದ್ದ ನೇಪಾಳ ಕೊನೆಯ ಪಂದ್ಯದಲ್ಲಿ ಗೆಲುವಿನ ವಿದಾಯ ಹೇಳಿದೆ.

ಈ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಸ್ಕಾಟ್ಲೆಂಡ್‌ಗೆ ಉತ್ತಮ ಆರಂಭ ದೊರೆಯಿತು. ಜಾರ್ಜ್ ಮುನ್ಸಿ 27 ರನ್ ಗಳಿಸಿ ಔಟಾದರೆ, ಬ್ರೆಂಡನ್ ಮೆಕುಲೆನ್ 25 ರನ್ ಕಲೆಹಾಕಿದರು. ನಾಯಕ ರಿಚ್ಚಿ ಬೇರಿಂಗ್ಟನ್ 10 ರನ್‌ಗಳಿಗೆ ಸುಸ್ತಾದರು.

ಒಂದೆಡೆ ವಿಕೆಟ್ ಬೀಳುತ್ತಿದ್ದರು ಮತ್ತೊಂದೆಡೆ ಉತ್ತಮ ಇನ್ನಿಂಗ್ಸ್ ಕಟ್ಟಿದ ಮೈಕಲ್ ಜೋನ್ಸ್ 45ಎಸೆತಗಳಲ್ಲಿ 8 ಬೌಂಡರಿ, 3 ಸಿಕ್ಸರ್ ಸಹಿತ 71 ರನ್ ಕಲೆಹಾಕಿದರು. ಉಳಿದಂತೆ ಟಾಮ್ ಬ್ರೂಸ್ 5, ಮ್ಯಾಥ್ಯೂ ಕ್ರಾಸ್ 4, ಮೈಕಲ್ ಲೀಸ್ಕ್ 4, ಮಾರ್ಕ್ ವ್ಯಾಟ್ ಹಾಗೂ ಆಲಿವರ್ ಡೇವಿಡ್ಸನ್ ಅಜೇಯ 10 ಹಾಗೂ 1 ರನ್ ಗಳಿಸಿದರು. ಆ ಮೂಲಕ ಸ್ಕಾಟ್ಲೆಂಡ್ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 170 ರನ್ ಗಳಿಸಿತು.

ನೇಪಾಳ ಪರ ಸೊಂಪಾಲ್ ಕಮಿ 3, ನಂದನ್ ಯಾದವ್ 2, ರೋಹಿತ್ ಪೌಡೆಲ್ ಹಾಗೂ ಕುಶಾಲ್ ಭುರ್ತೆಲ್ ತಲಾ ಒಂದೊಂದು ವಿಕೆಟ್ ಪಡೆದರು.

ಈ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ನೇಪಾಳಕ್ಕೆ ಆರಂಭಿಕ ಬ್ಯಾಟರ್ ಕುಶಾಲ್ ಭುರ್ತೆಲ್ ಹಾಗೂ ದೀಪೇಂದ್ರ ಸಿಂಗ್ ಐರಿ ಬ್ಯಾಟಿಂಗ್ ಬಲದಿಂದ 19.2 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 171 ರನ್ ಗಳಿಸಿತು.

ಕುಶಾಲ್ 35 ಎಸೆತಗಳಲ್ಲಿ 43 ರನ್ ಬಾರಿಸಿದರೆ, ಐರಿ ಅಜೇಯರಾಗಿ ಉಳಿದು 23 ಎಸೆತಗಳಲ್ಲಿ 4 ಬೌಂಡರಿ, 3 ಸಿಕ್ಸರ್ ಸಹಿತ 50 ರನ್ ಕಲೆಹಾಕಿ ತಂಡಕ್ಕೆ ಗೆಲುವು ತಂದುಕೊಟ್ಟರು. ಸ್ಕಾಟ್ಲೆಂಡ್ ಪರ ಮೈಕಲ್ ಲೀಸ್ಕ್ 3 ವಿಕೆಟ್ ಕಬಳಿಸಿ ಗಮನ ಸೆಳೆದರು.

# ಬಸವಮಾರ್ಗ ವ್ಯಸನಮುಕ್ತ ಕೇಂದ್ರದಲ್ಲಿ ಶಿವರಾತ್ರಿ ಆಚರಣೆ

- ವಿವಿಧ ಧಾರ್ಮಿಕ ಕೈಂಕರ್ಯದ ಜತೆಗೆ ಭಕ್ತಿ ಗೀತೆಯ ಸುನಾದ
- ಶಾಸಕ ಕೆ.ಹರೀಶ್‌ಗೌಡ ಸೇರಿ ಇತರ ಗಣ್ಯರು ಭಾಗಿ

ಮೈಸೂರು,ಫೆ.17(ಪಿಎಂ)- ಮಹಾ ಶಿವರಾತ್ರಿ ಪ್ರಯುಕ್ತ ನಗರದ ಹೆಬ್ಬಾಳಿನಲ್ಲಿರುವ ಬಸವಮಾರ್ಗ ವ್ಯಸನಮುಕ್ತ ಮತ್ತು ಪುನರ್ವಸತಿ ಕೇಂದ್ರದಲ್ಲಿ ಭಾನುವಾರ ಹೋಮ, ಹವನ, ಪೂಜೆ, ಜಾಗರಣೆ ಸೇರಿದಂತೆ ವಿವಿಧ ಧಾರ್ಮಿಕ ಕೈಂಕರ್ಯ ಶ್ರದ್ಧಾ, ಭಕ್ತಿಯಿಂದ ನೆರವೇರಿತು.

ಅನ್ನದಾಸೋಹ ಸಹ ಏರ್ಪಡಿಸಲಾಗಿತ್ತು. ಜೊತೆಗೆ ಸಂಗೀತ ಕಛೇರಿ ನಡೆಯಿತು. ಕೇಂದ್ರದ ಎದುರು ಶಿವಲಿಂಗ, ಹುಲಿ ವಾಹನ ಏರಿದ ಮಹದೇಶ್ವರರು ಹಾಗೂ ನಂದಿಯ ಮೂರ್ತಿ ಪ್ರತಿಷ್ಠಾಪಿಸಿ ಲೋಕ ಕಲ್ಯಾಣಾರ್ಥವಾಗಿ ವಿವಿಧ ಪೂಜಾ ಕೈಂಕರ್ಯ ಸಾಂಗವಾಗಿ ನಡೆಯಿತು.

ಶಾಸಕ ಕೆ.ಹರೀಶ್‌ಗೌಡ ಪೂಜೆ ಸಲ್ಲಿಸಿ, ಅನ್ನ ಸಂತರ್ಪಣೆಗೆ ಚಾಲನೆ ನೀಡಿ ಶುಭ ಕೋರಿದರು. ಲೋಕ ಕಲ್ಯಾಣಾರ್ಥವಾಗಿ ಕೇಂದ್ರದ ಮುಂಭಾಗ ಗಣಪತಿ ಪೂಜೆ, ನವಗ್ರಹ ಪೂಜೆ, ಧನ್ವಂತರಿ ಪೂಜೆ, ಮಹಾ ಮೃತ್ಯುಂಜಯ ಯಾಗ ನೆರವೇರಿಸಲಾಯಿತು. ಪುರೋಹಿತರಾದ ಸಾಗರ್ ಶರ್ಮ ಮತ್ತು ತಂಡದಿಂದ ಪೂಜಾ ಕೈಂಕರ್ಯಗಳು ನೆರವೇರಿದವು.



ಮೈಸೂರಿನ ಹೆಬ್ಬಾಳಿನಲ್ಲಿರುವ ಬಸವಮಾರ್ಗ ವ್ಯಸನಮುಕ್ತ ಕೇಂದ್ರದಲ್ಲಿ ಆಯೋಜಿಸಿದ್ದ ಶಿವರಾತ್ರಿ ಧಾರ್ಮಿಕ ಕಾರ್ಯಕ್ರಮದಲ್ಲಿ ಶಾಸಕ ಕೆ.ಹರೀಶ್‌ಗೌಡ ಪಾಲ್ಗೊಂಡಿದ್ದರು. ಈ ವೇಳೆ ಎಸ್.ಬಸವರಾಜು ಇತರರಿದ್ದರು.

**ಸಂಗೀತ ಕಛೇರಿ:** ಶಿವರಾತ್ರಿ ಜಾಗರಣೆ ಹಿನ್ನೆಲೆಯಲ್ಲಿ ಗಾಯಕರಾದ ದೇವಾನಂದ್ ವರಪ್ರಸಾದ್, ನಾರಾಯಣ್ ಅವರ ತಂಡದಿಂದ ಸಂಸ್ಥೆಯ ಹೊರಾಂಗಣದಲ್ಲಿ ಸಂಗೀತ ಕಛೇರಿಯನ್ನು ಆಯೋಜಿಸಲಾಗಿತ್ತು. ಶಿವನ ಕುರಿತ ನಾನಾ ಭಕ್ತಿಗೀತೆಗಳನ್ನು ಸುಮಧುರ ಸಂಗೀತದೊಂದಿಗೆ ಸತತ 6 ಗಂಟೆಗಳ ಸಾದರಪಡಿಸಿದ ತಂಡ, ನೆರೆದಿದ್ದವರನ್ನು ಭಕ್ತಿ ಪರವಶದಲ್ಲಿ ತೇಲಿಸಿತು. ಹಬ್ಬದ ಹಿನ್ನೆಲೆಯಲ್ಲಿ ಸಾವಿರಾರು ಜನರಿಗೆ ಅನ್ನ ಸಂತರ್ಪಣೆ ಮಾಡಲಾಯಿತು. ಭಾನುವಾರ ಬೆಳಗ್ಗೆ ಆರಂಭಗೊಂಡ ಅನ್ನ ಸಂತರ್ಪಣೆ ಕಾರ್ಯ, ಸೋಮವಾರ ಮಧ್ಯಾಹ್ನದವರೆಗೂ ನಡೆಯಿತು.

**ಶುಭ ಕೋರಿದ ಕೆ.ಹರೀಶ್‌ಗೌಡ:** ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಶಾಸಕ ಕೆ.ಹರೀಶ್‌ಗೌಡ, ಬಸವಮಾರ್ಗ ಫೌಂಡೇಶನ್ ಸೇವಾ ಕಾರ್ಯವನ್ನು ಶ್ಲಾಘಿಸಿದರು. ಬಸವಮಾರ್ಗ ವ್ಯಸನಮುಕ್ತ ಕೇಂದ್ರವು ಸಮಾಜ ಸೇವೆಗೆ ಅರ್ಪಿಸಿಕೊಂಡು ವ್ಯಸನಮುಕ್ತ ಸಮಾಜ ನಿರ್ಮಿಸಲು ಶ್ರಮಿಸುತ್ತಿದೆ. ಈವರೆಗೆ 56 ಕುಡಿತ ಬಿಡಿಸುವ ಶಿಬಿರವನ್ನು ಉಚಿತವಾಗಿ ಆಯೋಜಿಸಿ ಯಶಸ್ವಿಯಾಗಿದೆ. 15 ಸಾವಿರಕ್ಕೂ ಹೆಚ್ಚು ಮಂದಿ ಸಂಸ್ಥೆಯ ಸೇವೆ ಪಡೆದು, ಮನಃಪರಿವರ್ತನೆ ಹೊಂದಿ ನೆಮ್ಮದಿ ಜೀವನ ಸಾಗಿಸುತ್ತಿದ್ದಾರೆ. ಸಂಸ್ಥಾಪಕ ಎಸ್.ಬಸವರಾಜು ಅವರ ಈ ಸೇವೆ ನಿರಂತರವಾಗಿ ಸಾಗಲಿ ಎಂದು ಆಶಿಸಿದರು.

> **ಬಸವಮಾರ್ಗ ಫೌಂಡೇಶನ್‌ಗೆ ಭಗವಂತನೇ ಫೌಂಡರ್, 'ಅಮಲು ರೋಗಿ ದೇವೋಭವ' ಎನ್ನುವ ಘೋಷವಾಕ್ಯದೊಂದಿಗೆ ಸಮಾಜ ಸೇವೆ ಮಾಡಲಾಗುತ್ತಿದೆ. ಆ ಮೂಲಕ ವ್ಯಸನಿಗಳಲ್ಲಿ ದೇವರನ್ನ ಕಾಣಲಾಗುತ್ತಿದೆ. ಬಸವಮಾರ್ಗ ಫೌಂಡೇಶನ್ ಪಾರದರ್ಶಕ ಸೇವೆ ಮೂಲಕ ವ್ಯಸನಿಯ ಬದುಕಲ್ಲಿ ಹೊಸ ಬೆಳಕು ತರಲು ಅವಿರತವಾಗಿ ಶ್ರಮಿಸುತ್ತಿದೆ. ಕಟ್ಟಕಡೆಯ ವ್ಯಸನಿಗೂ ಸೂಕ್ತ ಸಮಯದಲ್ಲಿ, ಸೂಕ್ತ ಚಿಕಿತ್ಸೆ ಸಿಗಬೇಕೆನ್ನುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ.**
>
> -ಎಸ್.ಬಸವರಾಜು, ಸಂಸ್ಥಾಪಕರು, ಬಸವಮಾರ್ಗ ಫೌಂಡೇಷನ್.

ಮಹಾನಗರ ಪಾಲಿಕೆ ಮಾಜಿ ಸದಸ್ಯೆ ಪ್ರೇಮ ಶಂಕರೇಗೌಡ ಮಾತನಾಡಿ, ವ್ಯಸನಮುಕ್ತ ಸಮಾಜ ನಿರ್ಮಿಸಬೇಕೆಂಬ ಬಸವಣ್ಣ ಅವರ ಕನಸು ನನಸಾಗಲಿ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಇವರ ಸೇವಾ ಕಾರ್ಯ ಗುರುತಿಸಿ ಪ್ರೋತ್ಸಾಹಿಸಬೇಕು. ಸಂಸ್ಥೆಯಿಂದ ಮಹಿಳೆಯರಿಗೆ ಪ್ರತ್ಯೇಕವಾಗಿ ಪುನರ್ವಸತಿ ಕೇಂದ್ರ ತೆರೆಯಲಾಗಿದೆ. ವ್ಯಸನಕ್ಕೆ ದಾಸರಾಗಿರುವ ಮಹಿಳೆಯರು ಸೂಕ್ತ ಚಿಕಿತ್ಸೆ ಪಡೆದುಕೊಳ್ಳಬೇಕು ಎಂದರು.

ಬಿಜೆಪಿ ಮುಖಂಡ ಕಿರಣ್‌ಗೌಡ ಮಾತನಾಡಿ, ಬಸವಮಾರ್ಗ ಫೌಂಡೇಶನ್ ವ್ಯಸನಮುಕ್ತ ಸಮಾಜ ನಿರ್ಮಿಸುವ ಕೆಲಸದೊಂದಿಗೆ ಸರ್ಕಾರಿ ಶಾಲೆಯನ್ನು ದತ್ತು ಪಡೆದಿದ್ದು, ಬಡ ವಿದ್ಯಾರ್ಥಿಗಳಿಗೆ ಉಚಿತ ವಸತಿ ನಿಲಯ ಸ್ಥಾಪಿಸಿದೆ. ಹೀಗೆ ನಾನಾ ಸೇವಾಕಾರ್ಯ ಮಾಡುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಬಸವಮಾರ್ಗ ಫೌಂಡೇಷನ್ ಸಂಸ್ಥಾಪಕ ಎಸ್.ಬಸವಣ್ಣ, ಕಾಂಗ್ರೆಸ್ ಮುಖಂಡ ಡೆಲ್ಲಿ ರವಿ, ಬಸವ ಮಾರ್ಗ ಸಂಸ್ಥೆಯ ವ್ಯವಸ್ಥಾಪಕ ಮಹೇಶ್, ಸಿಬ್ಬಂದಿ ರಾಕೇಶ್, ಎಚ್.ಪಿ.ನವೀನ್ ಕುಮಾರ್, ಮಂಜುನಾಥ್, ಉಷಾರಾಣಿ, ಮೋನಿಷಾ, ವಸಂತ್, ರಾಘವೇಂದ್ರ, ಸಂಜು, ಅಭಿಷೇಕ್, ಬಸವರಾಜು, ಗೋವಿಂದ, ಮೋಹನ್, ರವೀಂದ್ರ, ಅಭಿಲಾಷ್, ನೇತ್ರಾ, ಮಧು, ಹೇಮಂತ್, ಮಲ್ಲಿಕಾರ್ಜುನ್, ಆಕಾಶ್, ಮುರುಗ, ಲೋಹಿತ್, ಗೌತಮ್ ಸೇರಿದಂತೆ ಮತ್ತಿತರರು ಹಾಜರಿದ್ದರು.

# ಸರ್ಕಾರದ ಸಾವಿರ ದಿನಗಳ ಸಾಧನೆ ಬರೀ ಸುಳ್ಳೇ ...ಸುಳ್ಳು

## ಮಾಜಿ ಸಂಸದ ಪ್ರತಾಪ್‌ಸಿಂಹ ವ್ಯಂಗ್ಯ



ಸುದ್ದಿಗೋಷ್ಠಿಯಲ್ಲಿ ಮಾಜಿ ಸಂಸದ ಪ್ರತಾಪ್‌ಸಿಂಹ ಮಾತನಾಡಿದರು.

ಮಂಡ್ಯ, ಫೆ.17–ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ್ದು 1000 ದಿನಗಳ ಸಾಧನೆಯಲ್ಲ. ಸುಳ್ಳು ಹೇಳುವ ದಿನಗಳಾಗಿವೆ ಎಂದು ಮಾಜಿ ಸಂಸದ ಪ್ರತಾಪ್‌ಸಿಂಹ ವ್ಯಂಗ್ಯವಾಡಿದ್ದಾರೆ.

ಸಿಎಂ ಸಿದ್ದರಾಮಯ್ಯ ಸರ್ಕಾರ ಬಂದಾಗ ತಂದ ಗ್ಯಾರಂಟಿ ಯೋಜನೆಗಳಿಗೆ ರಾಜ್ಯ ತಲೆ ಬಾಗಿತ್ತು. ಗ್ಯಾರಂಟಿಗೆ ಜನರು ಮತ ಹಾಕಿದ್ದರಿಂದ ಕಾಂಗ್ರೆಸ್ ಸರ್ಕಾರ ಬಂದಿತು. ಆದರೆ ಇವರ ಗ್ಯಾರಂಟಿ ಬಂಡವಾಳ 11 ತಿಂಗಳಲ್ಲೇ ಗೊತ್ತಾಯಿತು ಎಂದು ಸುದ್ದಿಗೋಷ್ಠಿಯಲ್ಲಿ ಮೂದಲಿಸಿದರು.

ಗ್ಯಾರಂಟಿ ಯೋಜನೆ ಸರಿಯಾಗಿ ತಲುಪುತ್ತಿಲ್ಲ. ಚುನಾವಣೆ ವೇಳೆ ಅಷ್ಟೇ ಮಹಿಳೆಯರ ಅಕೌಂಟ್‌ಗೆ ಹಣ ಬಂದಿತ್ತು. ಮಧ್ಯದಲ್ಲಿ ನಾಮ ಹಾಕಿದ್ದಾರೆ ಅಷ್ಟೇ. ವಿದ್ಯುತ್ ಬಿಲ್‌ನಲ್ಲಿ ಜನರಿಗೆ ಬರೆ ಎಳೆಯುತ್ತಿದ್ದಾರೆ. ಶಕ್ತಿ ಯೋಜನೆಯಲ್ಲೂ ಬಸ್‌ಗಳೇ ಸರಿಯಾಗಿಲ್ಲ. ಹೊಸ ಬಸ್‌ಗಳನ್ನು ಸರ್ಕಾರ ಖರೀದಿ ಮಾಡುವುದಕ್ಕೆ ಆಗುತ್ತಿಲ್ಲ. ಕೆಟ್ಟಿರುವ ಬಸ್ ದುರಸ್ತಿ ಮಾಡಿಸಲೂ ಹಣ ಇಲ್ಲ. ಕೆಎಸ್‌ಆರ್‌ಟಿಸಿ ನಿಗಮ ಸ್ವಲ್ಪ ದಿನಗಳಲ್ಲಿ ಮುಳುಗಿ ಹೋಗುತ್ತೆ. ಯುವನಿಧಿಯಂತೂ ಇದುವರೆಗೆ ಪ್ರಾರಂಭವಾಗಿಲ್ಲ ಎಂದು ಗ್ಯಾರಂಟಿ ಯೋಜನೆಯ ಬಗ್ಗೆ ಕಿಡಿಕಾರಿದರು.

**ಕಾಗೆಗಳಂತೆ ಪ್ರಿಯಾಂಕ್ ಖರ್ಗೆ ಸ್ಥಿತಿ:** ಆರ್‌ಎಸ್‌ಎಸ್ ರಿಜಿಸ್ಟರ್ ಮಾಡಿಸುತ್ತೇವೆ ಎನ್ನುವ ಪ್ರಿಯಾಂಕ ಖರ್ಗೆ ಅವರು, ಮರ ಗಿಡದಲ್ಲಿ ಕಾಗೆಗಳು ಕಾಕಾ ಎನ್ನುವ ಹಾಗೆ ಆಗಾಗ್ಗೆ ಮಾತನಾಡುತ್ತಿರುತ್ತಾರೆ ಎಂದು ಮಾಜಿ ಸಂಸದ ಪ್ರತಾಪ್‌ಸಿಂಹ ವ್ಯಂಗ್ಯವಾಡಿದರು.

ಆರ್‌ಎಸ್‌ಎಸ್ ದೆವ್ವ ಇದ್ದಂತೆ, ಬಿಜೆಪಿ ನೆರಳು ಇದ್ದಂತೆ ಎನ್ನುವ ಪ್ರಿಯಾಂಕ್ ಖರ್ಗೆ ಅವರಿಗೆ ನಾವು ಅಪ್ಪ, ಮಗ ಇದ್ದಂತೆ ಎಂದು ಹೇಳಬೇಕಾಗುತ್ತದೆ ಎಂದು ತಿರುಗೇಟು ನೀಡಿದ ಅವರು, ಕಲಬುರಗಿ ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಕೊನೆಯಿಂದ ಫಸ್ಟ್ ಇರುತ್ತಾರೆ. ನೀವೂ ಓದಿಲ್ಲ. ನಿಮ್ಮ ಕ್ಷೇತ್ರದ ಮಕ್ಕಳನ್ನು ಓದಿಸುತ್ತಿಲ್ಲ. ಈ ಕಾಂಗ್ರೆಸ್ ಸರ್ಕಾರದಲ್ಲಿ ಕೂಗು ಮಾರಿಗಳ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಕಿಡಿಕಾರಿದರು. ಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್, ಮುಖಂಡರಾದ ಇಂಡುವಾಳು ಎಸ್.ಸಚ್ಚಿದಾನಂದ, ಅಶೋಕ್‌ಜಯರಾಂ, ಡಾ.ಸಿದ್ದರಾಮಯ್ಯ, ವಿವೇಕ್, ನಾಗಾನಂದ, ಪ್ರದೀಪ್ ಇದ್ದರು.

### ಡಿಕೆಶಿಗೂ ಸುಳ್ಳು ಹೇಳುತ್ತಿರುವ ಸಿದ್ದರಾಮಯ್ಯ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಅಧಿಕಾರ ಬಿಟ್ಟು ಕೊಡದೆ ಸಿದ್ದರಾಮಯ್ಯ ಸುಳ್ಳು ಹೇಳಿಕೊಂಡು ಬರುತ್ತಿದ್ದಾರೆ. ಡಿ.ಕೆ.ಶಿವಕುಮಾರ್ ಅವರಿಗೆ ಎರಡೂವರೆ ವರ್ಷದ ನಂತರ ಅಧಿಕಾರ ಬಿಟ್ಟು ಕೊಡುತ್ತೇನೆ ಎಂದಿದ್ದರು. ಆದರೆ ಈಗ ದೇವರಾಜು ಅರಸು ಅವರ ರೆಕಾರ್ಡ್ ಮುರಿಯಬೇಕು ಎಂದು ಹೇಳುತ್ತಿದ್ದಾರೆ. ಮಗನ ಬಾಯಲ್ಲಿ ನಮ್ಮ ತಂದೆ ಐದು ವರ್ಷ ಮುಖ್ಯಮಂತ್ರಿಯಾಗಿ ಮುಂದುವರೆಯುತ್ತಾರೆ ಎಂದು ಮಾತನಾಡಿಸುತ್ತಿದ್ದಾರೆ ಎಂದು ಹೇಳಿದರು. ಡಿ.ಕೆ.ಶಿವಕುಮಾರ್ ಅವರು ಹಗಲಿಗೆ ಹೆಗಲು ಕೊಟ್ಟು ಸರ್ಕಾರ ತಂದಿದ್ದು. ಆದರೆ ಡಿ.ಕೆ.ಶಿವಕುಮಾರ್ ಅವರಿಗೆ ಸುಳ್ಳು ಹೇಳುವ ಸಿದ್ದರಾಮಯ್ಯ ಅವರು ಜನರಿಗೆ ಹೇಳದೆ ಇರುತ್ತಾರಾ? ಸಿದ್ದರಾಮಯ್ಯ ಅವರು ಸುಳ್ಳು ಹೇಳಿಕೊಂಡೆ ಅಧಿಕಾರ ಮಾಡುತ್ತಿದ್ದಾರೆ ಎಂದರು.

# ಆದಿಚುಂಚನಗಿರಿಯಲ್ಲಿ ನಾಳೆಯಿಂದ 2 ದಿನಗಳ ವಿಜ್ಞಾತಂ ಉತ್ಸವ

ನಾಗಮಂಗಲ, ಫೆ.17–ಶ್ರೀಕ್ಷೇತ್ರ ಆದಿಚುಂಚನಗಿರಿಯಲ್ಲಿ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರ 13ನೇ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವದ ಅಂಗವಾಗಿ ವಿಜ್ಞಾತ ಉತ್ಸವಂ ನಡೆಯಲಿದೆ ಎಂದು ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಸಿಇಓ ಎನ್.ಎಸ್.ರಾಮೇಗೌಡ ತಿಳಿಸಿದರು.

ಶ್ರೀಆದಿಚುಂಚನಗಿರಿ ಮಹಾ ಸಂಸ್ಥಾನ ಮಠ ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಮತ್ತು ಆದಿಚುಂಚನಗಿರಿ ವಿಶ್ವವಿದ್ಯಾನಿಲಯ ಇವರ ಸಹಯೋಗದಲ್ಲಿ ಜಗದ್ಗುರು ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರ 13ನೇ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವ ಅಂಗವಾಗಿ ವಿಜ್ಞಾತಂ ಉತ್ಸವ ಹಾಗೂ ವಿಜ್ಞಾತಂ ಪ್ರಶಸ್ತಿ ಪ್ರದಾನ ಸಮಾರಂಭ ಫೆ. 19, 20ರಂದು ಶ್ರೀಕ್ಷೇತ್ರದಲ್ಲಿ ನಡೆಯಲಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಡಾ.ಶ್ರೀನಿಶ್ಚಲಾನಂದನಾಥ ಮಹಾಸ್ವಾಮಿಜಿ, ಕೆಂಗೇರಿ ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಡಾ. ಶ್ರೀಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಮಲೆ ಮಹದೇಶ್ವರ ಬೆಟ್ಟ ಸಾಲೂರು ಬ್ರಹ್ಮಮಠದ ಡಾ.ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಬೇಬಿ ಮಠದ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಸಮಾರಂಭದ ಸಾನಿಧ್ಯ ವಹಿಲಿದ್ದು, ಸಮಾರಂಭವನ್ನು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಉದ್ಘಾಟಿಸಲಿದ್ದಾರೆ. ವಸ್ತು ಪ್ರದರ್ಶನವನ್ನು ಇಸ್ರೋ ಖ್ಯಾತ ವಿಜ್ಞಾನಿ ಡಾ. ಕೆ ಮುನಿಯಪ್ಪ ಉದ್ಘಾಟಿಸುವರು. ಶಾಸಕರಾದ ರವಿ ಗಣಿಗ, ಡಾ. ಹೆಚ್.ಡಿ.ರಂಗನಾಥ್, ಜಿಲ್ಲಾಧಿಕಾರಿ ಡಾ.ಕುಮಾರ್, ರಕ್ಷಣೆ ಹಾಗೂ ಏರೋ ಸ್ಪೇಸ್ ವಿಶ್ಲೇಷಕ ಗಿರೀಶ್ ಲಿಂಗಣ್ಣ, ಮಾಜಿ ಶಾಸಕ ಸುರೇಶ್ ಗೌಡ, ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಫೆ.20 ರಂದು ಪಟ್ಟಾಭಿಷೇಕ ಮಹೋತ್ಸವ ಹಾಗೂ ವಿಜ್ಞಾತಂ ಪ್ರಶಸ್ತಿ ಪ್ರದಾನ ಸಮಾರಂಭದ ದಿವ್ಯ ಸಾನಿಧ್ಯವನ್ನು ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ಚಿತ್ರದುರ್ಗದ ಶ್ರೀ ಬಸವಮೂರ್ತಿ ಮಾದರ ಚೆನ್ನಯ್ಯ ಸ್ವಾಮೀಜಿ, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ವಿಜ್ಞಾತಂ ಸಂಚಯ ಪುಸ್ತಕ ಬಿಡುಗಡೆ ಮಾಡಲಿದ್ದಾರೆ, ಸಚಿವರಾದ ಕೆ.ಎಚ್ ಮುನಿಯಪ್ಪ, ಮಾಜಿ ಶಾಸಕ ಸಿಎಸ್ ಪುಟ್ಟರಾಜು ಜಿ.ಪಂ. ಸಿಇಓ ಶ್ರೀಮತಿ ಕೆ ಆರ್. ನಂದಿನಿ ಭಾಗವಹಿಸಲಿದ್ದಾರೆ. ಪ್ರಾಂಶುಪಾಲ ಶ್ರೇಯಸ್ ಕೃಷ್ಣನ್, ಎಚ್.ಟಿ.ಕೃಷ್ಣೇಗೌಡ, ಚಂದ್ರೇಗೌಡ ಸುಚಿತ್ ಪತ್ರಿಕಾಗೋಷ್ಠಿಯಲ್ಲಿ ಇತರರು ಉಪಸ್ಥಿತರಿದ್ದರು.



## ಅಮಾವಾಸ್ಯೆ ಹಿನ್ನೆಲೆ: ವಿಶೇಷ ಪೂಜೆ

ಅಮಾವಾಸ್ಯೆ ಹಿನ್ನೆಲೆಯಲ್ಲಿ ಶ್ರೀರಂಗಪಟ್ಟಣ ತಾಲೂಕಿನ ಆರತಿ ಉಕ್ಕಡ ಮಾರಮ್ಮನ ದೇವಾಲಯದಲ್ಲಿ ವಿಶೇಷ ಪೂಜೆ ನಡೆಯಿತು. ಈ ವೇಳೆ ಸಾವಿರಾರು ಭಕ್ತರು ದೇವರ ದರ್ಶನ ಪಡೆದು ಪೂಜೆ ಸಲ್ಲಿಸಿದರು.

# ಮಂಡ್ಯ: ಪರೀಕ್ಷೆ ಮುಗಿದ ದಿನವೇ ಫಲಿತಾಂಶ ಪ್ರಕಟ

ಮಂಡ್ಯ, ಫೆ.17–ಪರೀಕ್ಷೆ ಮುಗಿದು ಫಲಿತಾಂಶಕ್ಕಾಗಿ ಚಾತಕಪಕ್ಷಿಯಂತೆ ವಿದ್ಯಾರ್ಥಿಗಳು ಕಾಯುವುದು ವಾಡಿಕೆ. ಆದರೆ ನಗರದ ಮಹಿಳಾ ಸರ್ಕಾರಿ ಕಾಲೇಜು (ಸ್ವಾಯುತ್ತ), ಪರೀಕ್ಷೆ ಮುಗಿದ ದಿನವೇ ಫಲಿತಾಂಶ ಪ್ರಕಟಿಸುವ ಮೂಲಕ ತನ್ನ ದಕ್ಷತೆಯನ್ನು ಪ್ರತಿಬಿಂಬಿಸಿದೆ.

2025–26ನೇ ಸಾಲಿನ ಕನ್ನಡ, ಸಮಾಜ ಶಾಸ್ತ್ರ ಇತಿಹಾಸ, ಅರ್ಥಶಾಸ್ತ್ರ, ಎಂಎಸ್ಸಿ ರಾಸಾಯನಶಾಸ್ತ್ರ, ಎಂಕಾಂ ವಾಣಿಜ್ಯ ಶಾಸ್ತ್ರ ಸ್ನಾತಕೋತ್ತರ ಪದವಿ ಪರೀಕ್ಷೆಗಳ ಮೌಲ್ಯಮಾಪನ ಕಾರ್ಯವನ್ನು ಮುಗಿಸಿ ಕೊನೆಯ ಪರೀಕ್ಷೆ ಮುಗಿದ ದಿನವೇ ಫಲಿತಾಂಶ ಪ್ರಕಟಿಸುವ ಮೂಲಕ ಕಳೆದ ತಿಂಗಳು ಪದವಿ ಫಲಿತಾಂಶದಂತೆ ಸ್ನಾತಕೋತ್ತರ ಪದವಿ ಫಲಿತಾಂಶವನ್ನು ನೀಡಿರುವುದು ಕಾಲೇಜಿನ ಆಡಳಿತ ದಕ್ಷತೆಗೆ ಹಿಡಿದ ಕೈಗನ್ನಡಿಯಾಗಿದೆ.


ಇಷ್ಟೊಂದು ವೇಗವಾಗಿ ಫಲಿತಾಂಶ ನೀಡಿರುವುದು ಕಾಲೇಜಿನ ಸಿಬ್ಬಂದಿಯ ಶ್ರಮದ ಪ್ರತಿಫಲವಾಗಿದೆ. ಫೆ.3 ರಿಂದ 16 ರವರೆಗೆ ಪರೀಕ್ಷೆಗಳು ನಡೆದಿದ್ದವು ಪರೀಕ್ಷೆಗಳು ನಿನ್ನೆ ತಾನೆ ಮುಕ್ತಾಯಗೊಂಡಿದ್ದು ಸಂಜೆ 4ಕ್ಕೆ ಮೌಲ್ಯಮಾಪನ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಿತು.

ಮೌಲ್ಯಮಾಪನ ಮುಗಿದ 30 ನಿಮಿಷದಲ್ಲೇ ಪ್ರಾಂಶುಪಾಲರಾದ ಪ್ರೊ. ಕೆ. ಗುರುರಾಜ ಪ್ರಭು ಫಲಿತಾಂಶವನ್ನು ಬಿಡುಗಡೆ ಮಾಡಿದರು. ಈ ವೇಳೆ ಮಾತನಾಡಿದ ಅವರು ಕಳೆದ ಜ.31ರಂದು ಸ್ನಾತಕ ಪದವಿ ಪರೀಕ್ಷೆ ಫಲಿತಾಂಶವನ್ನು ಪರೀಕ್ಷೆ ಮುಗಿದ ದಿನವೇ ಕಾಲೇಜು ಬಿಡುಗಡೆ ಮಾಡಿತ್ತು ಅದರಂತೆ ಇಂದು ಸ್ನಾತಕೋತ್ತರ ಪದವಿ ಫಲಿತಾಂಶವನ್ನು ಪರೀಕ್ಷೆ ಮುಗಿದ ಕೆಲವೇ ಗಂಟೆಗಳಲ್ಲಿ ಬಿಡುಗಡೆ ಮಾಡಿದೆ ಎಂದರು.

ಕಾಲೇಜಿನ ಸಿಬ್ಬಂದಿಯ ಶಿಸ್ತುಬದ್ಧ ಕೆಲಸ ಹಾಗೂ ತಂತ್ರಜ್ಞಾನದ ಸಮರ್ಪಕ ಬಳಕೆಯಿಂದಾಗಿ ಸಕಾಲದಲ್ಲಿ ಫಲಿತಾಂಶ ಪ್ರಕಟಿಸಲು ಸಾಧ್ಯವಾಗಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಮುಂದಿನ ದಿನಗಳಲ್ಲೂ ಇದೇ ರೀತಿಯ ಫಲಿತಾಂಶವನ್ನು ಸಕಾಲದಲ್ಲಿ ಪ್ರಕಟಿಸಲು ಎಲ್ಲಾ ಸಿದ್ಧತೆಗಳನ್ನು ಕಾಲೇಜಿನ ವತಿಯಿಂದ ಮಾಡಿಕೊಳ್ಳುತ್ತೇವೆ ಎಂದು ಭರವಸೆ ನೀಡಿದರು.

ಪರೀಕ್ಷಾ ನಿಯಂತ್ರಣಾಧಿಕಾರಿ ಡಾ. ರವಿಕಾಂತ್ ಲಮಾಣಿ, ಮೌಲ್ಯಮಾಪನ ಸಂಯೋಜಕ ಎಂ.ಮಾದೇಗೌಡ ಪರೀಕ್ಷಾ ಸಮಿತಿಯ ಸಂಚಾಲಕ ಡಾ. ಶಿವಕೀರ್ತಿ ವಿ, ಸಹ ಸಂಚಾಲಕ ಡಾ. ಶಿವರಾಮು, ಕಾಲೇಜಿನ ಪತ್ರಾಂಕಿತ ವ್ಯವಸ್ಥಾಪಕ ಕೆ.ಪಿ.ರವಿಕಿರಣ್ ಉಪಸ್ಥಿತರಿದ್ದರು.

## ಚೀಣ್ಯ ಸುತ್ತಮುತ್ತ ಇಂದು ವಿದ್ಯುತ್ ವ್ಯತ್ಯಯ



ನಾಗಮಂಗಲ, ಫೆ.17–ಚೀಣ್ಯ ಎನ್‌ಜೆವೈ, ಸಾಮಕಹಳ್ಳಿ ಎನ್‌ಜೆವೈ, ಕಾಂತಾಪುರ ಎನ್‌ಜೆವೈ, ಚೀಣ್ಯ, ಹೊಣಕೆರೆ, ಬ್ರಹ್ಮ ದೇವರಹಳ್ಳಿ, ಮಣ್ಣಹಳ್ಳಿ, ಕಾಂತಾಪುರ ಮತ್ತು ಬೋಗಾದಿ ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಫೆ.18 ರಂದು ಬೆಳಗ್ಗೆ 10ರಿಂದ ಸಂಜೆ 6 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕಾಂ ಪ್ರಕಟಣೆ ತಿಳಿಸಿದೆ.

# ಮಾನಸಿಕ ಒತ್ತಡ ನೀಗಿಸಿಕೊಳ್ಳಲು ಕ್ರೀಡೆಯಲ್ಲಿ ಪಾಲ್ಗೊಳ್ಳಿ



ತಾಲೂಕು ಮಟ್ಟದ ಕ್ರೀಡಾಕೂಟವನ್ನು ಶಾಸಕ ಹೆಚ್.ಟಿ.ಮಂಜು ಉದ್ಘಾಟಿಸಿದರು.

ಕೆ.ಆರ್.ಪೇಟೆ, ಫೆ.17– ಮಾನಸಿಕ ಒತ್ತಡ ನೀಗಿಸಲು, ದೈಹಿಕ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಕ್ರೀಡಾಕೂಟಗಳಲ್ಲಿ ಪಾಲ್ಗೊಳ್ಳುವಂತೆ ಶಾಸಕ ಹೆಚ್.ಟಿ.ಮಂಜು ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ತಾಲೂಕು ಮಟ್ಟದ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದ ಅವರು, ಕ್ರೀಡೆ ದೈಹಿಕ ಮತ್ತು ಮಾನಸಿಕ ಆರೋಗ್ಯ ಸುಧಾರಿಸುವ ಚಟುವಟಿಕೆ. ಇದು ಕೇವಲ ಮನರಂಜನೆಗಾಗಿ ಮಾತ್ರವಲ್ಲ, ಬದಲಾಗಿ ಶಿಸ್ತು, ತಂಡದ ಕೆಲಸ, ನಾಯಕತ್ವ ಮತ್ತು ಸಮಯ ನಿರ್ವಹಣೆಯಂತಹ ಮೌಲ್ಯಗಳನ್ನು ಕಲಿಸುತ್ತದೆ ಎಂದರು.

ಕ್ರೀಡೆ ಯುವಕರಲ್ಲಿ ಶಿಸ್ತು ಸಮಯ ನಿರ್ವಹಣೆ ಮತ್ತು ನಾಯಕತ್ವದ ಗುಣಗಳನ್ನು ಕಲಿಸುತ್ತವೆ. ಹಾಗಾಗಿ ಯುವಜನರು ಕ್ರೀಡೆಗಳಲ್ಲಿ ಆಸಕ್ತಿ ಬೆಳೆಸಿಕೊಳ್ಳಬೇಕು ಎಂದ ಅವರು ಪದವಿ ಶಿಕ್ಷಣ ತಮ್ಮ ಜೀವನದ ಗುರಿಯನ್ನು ಸಾಧಿಸಲು ಪ್ರಮುಖ ಘಟ್ಟವಾಗಿದೆ. ಇದನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡಿಕೊಂಡು ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣ ಹೊಂದಬೇಕು. ಕಾಲೇಜಿನಲ್ಲಿ ಉಪನ್ಯಾಸಕರಿಂದ ಪಾಠ–ಪ್ರವಚನಕ್ಕೆ ಯಾವುದಾದರೂ ರೀತಿ ತೊಂದರೆ ಉಂಟಾದರೆ ತಕ್ಷಣ ನನ್ನ ಗಮನಕ್ಕೆ ತನ್ನಿ, ತಕ್ಷಣ ಅಂತಹ ಉಪನ್ಯಾಸಕರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುತ್ತೇನೆ ಎಂದು ಶಾಸಕರು ಭರವಸೆ ನೀಡಿದರು.

**ಉಪನ್ಯಾಸಕರಿಗೆ ಸಲಹೆ:** ಕಾಲೇಜಿನ ಎಲ್ಲಾ ಖಾಯಂ ಉಪನ್ಯಾಸಕರು ಸಮಯಕ್ಕೆ ಸರಿಯಾಗಿ ಕಾಲೇಜಿಗೆ ಬರಬೇಕು. ಸಂಜೆಯವರೆವಿಗೂ ತರಗತಿಗಳನ್ನು ತೆಗೆದುಕೊಳ್ಳಬೇಕು. ಖಾಯಂ ಉಪನ್ಯಾಸಕರು ಹೆಚ್ಚಿನ ಜವಾಬ್ದಾರಿ ತೆಗೆದುಕೊಂಡು ಗುಣಮಟ್ಟದ ಶಿಕ್ಷಣ ನೀಡಬೇಕು. ಎಲ್ಲವನ್ನೂ ಅತಿಥಿ ಉಪನ್ಯಾಸಕರ ಮೇಲೆ ಜವಾಬ್ದಾರಿ ಹೊರಿಸಿ ಜಾರಿಕೊಳ್ಳಬಾರದು. ಇಂಥವನ್ನು ಸಹಿಸುವುದಿಲ್ಲ. ಆಗಾಗ್ಗೆ ಅನಿರೀಕ್ಷಿತ ಭೇಟಿ ನೀಡಿ ಕಾಲೇಜಿನಲ್ಲಿರುವ ಶೈಕ್ಷಣಿಕ ಗುಣಮಟ್ಟದ ಪರಿಶೀಲನೆ ನಡೆಸುವುದಾಗಿ ಹೇಳಿದರು.

ಪ್ರಾಂಶುಪಾಲ ಡಾ.ವಿ.ಜಗದೀಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಯುವ ಪ್ರಶಸ್ತಿ ವಿಜೇತರು ಹಾಗೂ ಮಂಡ್ಯ ಜಿಲ್ಲಾ ಯುವ ಪರಿಷತ್ ಅಧ್ಯಕ್ಷರಾದ ಪರಮೇಶ್ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಕಾರ್ಯಕ್ರಮದಲ್ಲಿ ಮೇರಾ ಯುವ ಭಾರತ್ ಜಿಲ್ಲಾ ಯುವಜನ ಕ್ರೀಡಾ ಇಲಾಖೆ ಅಧಿಕಾರಿ ಎಸ್.ಶೃತಿ, ತಾಪಂ ಮಾಜಿ ಸದಸ್ಯ ಹೆಳವೇಗೌಡ, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಹೊಸಹೊಳಲು ಹೆಚ್.ಕೆ.ಅಶೋಕ್, ಗಂಜಿಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕೆ.ಬಿ.ನಾಗೇಶ್, ಮಾದಾಪುರ ವಿಘ್ನೇಶ್ವರ ಯುವಕರ ಸೇವಾ ಸಂಘದ ಅಧ್ಯಕ್ಷ ಮಾದಾಪುರ ಸೋಮಶೇಖರ್, ಹೊಸಹೊಳಲು ಕುರುಹಿನಶೆಟ್ಟಿ ಮಹಿಳಾ ಸಮಾಜದ ಅಧ್ಯಕ್ಷೆ ಸುಕನ್ಯ ರಂಗನಾಥ್, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರಾದ ಲಕ್ಷ್ಮಣ್, ಕೆ.ಆರ್.ನೀಲಕಂಠ, ಕಾಲೇಜಿನ ಕ್ರೀಡಾ ಮತ್ತು ಸಾಂಸ್ಕೃತಿಕ ವಿಭಾಗದ ಸಂಚಾಲಕ ಕುಮಾರಸ್ವಾಮಿ, ಶಾಸಕರ ಆಪ್ತ ಸಹಾಯಕ ಅರಳಕುಪ್ಪೆ ಪ್ರತಾಪ್ ಮತ್ತಿತರರು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

# ಬಾಡಿಗೆದಾರರ ತೆರವಿಗೆ ಮೂರು ತಿಂಗಳ ಗಡುವು



ಸೂಚನೆ ನೀಡಿದೆ. ಈ ಮೂಲಕ ಡೋಪ್ಲಿನ್ ಕಾಂಪ್ಲೆಕ್ಸ್ ಸಂಬಂಧ ಹಲವು ವರ್ಷಗಳಿಂದ ನಡೆಯುತ್ತಿರುವ ಕಾನೂನು ಹೋರಾಟದಲ್ಲಿ ಎಂಡಿಎಗೆ ಜಯ ಸಿಕ್ಕಿದೆ. ಅಲ್ಲದೆ ಈ ಜಾಗದ ಸಂಬಂಧದ ಕಾನೂನು ಹೋರಾಟ ಕೂಡ ತಾರ್ಕಿಕ ಅಂತ್ಯ ಕಂಡಿದೆ. ಕರ್ನಾಟಕ ಪಬ್ಲಿಕ್ ಪ್ರಿಮಿಸಸ್ (ಅನಧಿಕೃತವಾಗಿ ಸ್ವಾಧೀನದಲ್ಲಿ ಇರುವ ವರನ್ನು ಹೊರ ಹಾಕುವುದು) ಕಾಯ್ದೆ 1974, ಕರ್ನಾಟಕ ನಗರ ಅಭಿವೃದ್ಧಿ ಪ್ರಾಧಿಕಾರಗಳು (ಕೆಯುಡಿಎ) ಕಾಯ್ದೆ 1987 ಅನ್ವಯ ಮೂರು ತಿಂಗಳ ಒಳಗೆ ವಿಚಾರಣೆ ಪೂರ್ಣಗೊಳಿಸಬೇಕು.

ಈ ಸಂಬಂಧ ಕರ್ನಾಟಕ ಪಬ್ಲಿಕ್ ಪ್ರಿಮಿಸಸ್ ಕಾಯ್ದೆ ಅನ್ವಯ ಪ್ರಕ್ರಿಯೆ ನಡೆಸುವಂತೆ ತಹಶೀಲ್ದಾರ್ ಎಸ್ಟೇಟ್ ಅಧಿಕಾರಿ ಅಥವಾ ಕಾರ್ಯದರ್ಶಿಗೆ ಹೈಕೋರ್ಟ್ ನವೆಂಬರ್ 17, 2025ರಂದು ಆದೇಶಿಸಿದೆ. ಈ ಸಂಬಂಧ ಆದೇಶದ ಪ್ರಮಾಣೀಕೃತ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಬೇಕು ಎಂದು ಹೈಕೋರ್ಟ್ ತಾಕೀತು ಮಾಡಿದೆ.

ಎಸ್ಟೇಟ್ ಅಧಿಕಾರಿಯು ಕರ್ನಾಟಕ ಪ್ರಿಮಿಸಸ್ ಕಾಯ್ದೆಯ ಸೆಕ್ಷನ್ 4ರ ಪ್ರಕಾರ ಸ್ವಾಧೀನದಲ್ಲಿ ಇರುವವರಿಗೆ ನೋಟಿಸ್ ನೀಡಬೇಕಾಗಿದೆ. ಈ ಮೂಲಕ ನ್ಯಾಯಾಂಗದ ಪ್ರಕ್ರಿಯೆಗಳಂತೆ ವಿಚಾರಣೆ ನಡೆಸಿ ಆದೇಶ ಹೊರಡಿಸಬೇಕು ಎಂದು ಹೈಕೋರ್ಟ್ ಸೂಚಿಸಿದೆ.

ಹೈಕೋರ್ಟ್ ನಿರ್ದೇಶನವನ್ನು ಆಧಾರವಾಗಿಟ್ಟುಕೊಂಡು ಮೈಸೂರು ಅಭಿವೃದ್ಧಿ ಪ್ರಾಧಿಕಾರವು ಈಗ ಡೋಪ್ಲಿನ್ ಕಾಂಪ್ಲೆಕ್ಸ್‌ನ ಸ್ವಾಧೀನದಲ್ಲಿ ಇರುವ ಅಂಗಡಿಯವರಿಗೆ ನೋಟಿಸ್ ಜಾರಿ ಮಾಡಿದೆ.

ಮೈಸೂರು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ 2025 ರ ನಿಬಂಧನೆಗಳನ್ನು ಕೆಯುಡಿಎ ಕಾಯ್ದೆ 1987ರ ಬದಲಿಗೆ ಪರಿಗಣಿಸಬಹುದು ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಅಂದರೆ ಹಿಂದಿನ ಮುಡಾವನ್ನು ಈಗಿನ ಎಂಡಿಎ ಎಂದು ಪರಿಗಣಿಸಬಹುದು ಎಂದು ನ್ಯಾಯಾಲಯ ಹೇಳಿದೆ.

ಈ ಸಂಬಂಧ ಡಿಸೆಂಬರ್ 16, 2025ರಂದು ಎಂಡಿಎ ಆಯುಕ್ತರಿಗೆ ರಿಟ್ ಅರ್ಜಿ ಸಂಖ್ಯೆ 28066/2018 (ಶ್ರೀ ಶೇಷಸಾಯಿ ಮತ್ತು ಇತರೆ ಒಂಭತ್ತು ಮಂದಿ ಅರ್ಜಿದಾರರು ಹಾಗೂ ಮುಡಾ (ಹಿಂದಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಇತರರು) ಅವರನ್ನು ಪಾರ್ಟಿಗಳಾಗಿ ಮಾಡಿ ಉಚ್ಚ ನ್ಯಾಯಾಲಯ ಈ ತೀರ್ಪು ನೀಡಿದೆ.

ಡೋಪ್ಲಿನ್ ಕಾಂಪ್ಲೆಕ್ಸ್‌ನಲ್ಲಿರುವ ಅಂಗಡಿಗಳ ನಿವಾಸಿಗಳೆಂದು ಹೇಳಿಕೊಳ್ಳುವ ಅರ್ಜಿದಾರರು ಜೂನ್ 11, 2018ರಂದು ಪ್ರಾಧಿಕಾರದ ಆದೇಶವನ್ನು ಪ್ರಶ್ನಿಸಿದ್ದರು. ಹಾಲಿ ಚಾಲ್ತಿಯಲ್ಲಿರುವ ಮಾರುಕಟ್ಟೆ ದರಗಳಲ್ಲಿ ಬಾಡಿಗೆಯನ್ನು ಪಾವತಿಸಿದರೆ ಬಾಡಿಗೆದಾರರಾಗಿ ಮುಂದುವರೆಯಲು ಅವಕಾಶ ನೀಡುವಂತೆ ಪ್ರಾಧಿಕಾರಕ್ಕೆ ನಿರ್ದೇಶನ ನೀಡುವ ಮ್ಯಾಂಡಮಸ್ ರಿಟ್ ಅನ್ನು ಸಲ್ಲಿಸಿದ್ದರು.

ಅರ್ಜಿದಾರರ ಹಕ್ಕುಗಳನ್ನು ಪ್ರತಿಪಾದಿಸಿ ಅಂದಿನ ಸೂಪರಿಂಟೆಂಡೆಂಟ್ ಇಂಜಿನಿಯರ್ ಅವರು ತಮಗೆ ಅಂಗಡಿಗಳನ್ನು ಹಂಚಿಕೆ ಮಾಡಿದ್ದರು. ಅಲ್ಲದೆ ನಿಯಮಿತವಾಗಿ ಬಾಡಿಗೆ ಪಾವತಿಸುವ ಬಾಡಿಗೆದಾರರೆಂದು ಪರಿಗಣಿಸಲಾಗಿತ್ತು ಎಂದು ಅರ್ಜಿದಾರರು ವಾದಿಸಿ ಸ್ವಾಧೀನವನ್ನು ಕೋರಿದರಲ್ಲದೆ, ಈ ಮೂಲಕ ಡೋಪ್ಲಿನ್ ಕಾಂಪ್ಲೆಕ್ಸ್‌ನಲ್ಲಿರುವ ತಮ್ಮ ಸ್ವಾಧೀನ ಪರಿಗಣಿಸುವಂತೆ ಮನವಿ ಮಾಡಿದರು.

ಈ ಸಂಬಂಧ ಪ್ರಾಧಿಕಾರ ಹೊರಡಿಸಿದ ತೆರವು ಆದೇಶ ಪ್ರಶ್ನಿಸಿ ರಿಟ್ ಅರ್ಜಿ (ಡಬ್ಲ್ಯೂಪಿ) ಸಂಖ್ಯೆ 4952–53/2001, ಡಬ್ಲ್ಯೂಪಿ ಸಂಖ್ಯೆ 7458/2001, )ಡಬ್ಲ್ಯೂಪಿ ಸಂಖ್ಯೆ 5407/2001 ಮತ್ತು ಡಬ್ಲ್ಯೂಪಿ ಸಂಖ್ಯೆ 5422– 2001 ಗಳನ್ನು ತಿರಸ್ಕರಿಸಬೇಕೆಂದು ಮನವಿ ಮಾಡಿದ್ದರು.

ಆದರೆ ಡೋಪ್ಲಿನ್ ಕಾಂಪ್ಲೆಕ್ಸ್ ಅನ್ನು ತನ್ನ ವಶಕ್ಕೆ ಪಡೆದುಕೊಳ್ಳಬೇಕೆಂದು ಎಂಡಿಎ ಗೆ ನ್ಯಾಯಾಲಯ ನಿರ್ದೇಶನ ನೀಡಿದೆ. ಕರ್ನಾಟಕ ಪಬ್ಲಿಕ್ ಪ್ರಿಮಿಸಸ್ ಕಾಯ್ದೆ ಪ್ರಕಾರವೇ ಪ್ರಕ್ರಿಯೆ ಕೈಗೊಳ್ಳುವಂತೆ ಸೂಚನೆ ಕೂಡ ನೀಡಿದೆ.

### ನಮಗೆ ಯಾವುದೇ ನೋಟಿಸ್ ಬಂದಿಲ್ಲ

ಡೋಪ್ಲಿನ್ ಕಾಂಪ್ಲೆಕ್ಸ್ ಸಂಬಂಧ ಹೈಕೋರ್ಟ್ ನೀಡಿರುವ ತೀರ್ಪು ನಮ್ಮ ಗಮನಕ್ಕೆ ಬಂದಿಲ್ಲ. ಅಲ್ಲದೆ ಮೈಸೂರು ಅಭಿವೃದ್ಧಿ ಪ್ರಾಧಿಕಾರದಿಂದ ನಮಗೆ ಯಾವುದೇ ನೋಟಿಸ್ ಕೂಡ ಬಂದಿಲ್ಲ.

ಈ ಕಾಂಪ್ಲೆಕ್ಸ್‌ನಲ್ಲಿ 51 ಅಂಗಡಿಗಳಿದ್ದು, ಕೆಲವರು ಮುಡಾದಿಂದ ಕ್ರಯಕ್ಕೆ ನೋಂದಣಿ ಮಾಡಿಸಿಕೊಂಡಿದ್ದಾರೆ. ಅಲ್ಲದೆ ಟೈಟಲ್ ಡೀಡ್ ಕೂಡ ಪಡೆದಿದ್ದಾರೆ. ಹೀಗಿರುವಾಗ ಎಂಡಿಎ ಅಧಿಕಾರಿಗಳು ಯಾವ ಆಧಾರದ ಮೇಲೆ ತೆರವು ಮಾಡುತ್ತಾರೆ ಎಂದು ಪ್ರಶ್ನಿಸಿದರು. ಇದರಿಂದ ಕಾಂಪ್ಲೆಕ್ಸ ತೆರವು ಮಾಡುವ ಎಂಡಿಎ ನಿರ್ಧಾರವೇ ಗೊಂದಲಕಾರಿಯಾಗಿದೆ. ಗಿರೀಶ್, ಅಧ್ಯಕ್ಷ, ಡೋಪ್ಲಿನ್ ಕಾಂಪ್ಲೆಕ್ಸ್ ಮರ್ಚೆಂಟ್ಸ್ ಅಸೋಸಿಯೇಷನ್ ಮುಡಾ ಕ್ರಯದ ನೋಂದಣಿ ಮಾಡಿ, ಟೈಟಲ್ ಡೀಡ್ ಕೂಡ ನೀಡಿದೆ ಗೋವಿಂದರಾಜು ಅವರು ಮುಡಾ ಅಧ್ಯಕ್ಷರಾಗಿದ್ದಾಗ ಇಲ್ಲಿರುವ ಅಂಗಡಿಗಳನ್ನು ಸ್ವಾಧೀನದಲ್ಲಿ ಇರುವರಿಗೆ ಮಾರಾಟ ಮಾಡುವ ಒಪ್ಪಂದವಾಗಿತ್ತು. ಈ ಸಂಬಂಧ 1.37 ಲಕ್ಷ ಪಾವತಿಸುವಂತೆ ಸೂಚನೆ ನೀಡಿದರು.

ಆ ವೇಳೆ ಸ್ವಾಧೀನದಲ್ಲಿ ಇರುವ ಅಂಗಡಿಯವರು 1.37 ಲಕ್ಷ ಪಾವತಿ ಮಾಡಿ ಕ್ರಯ ಮಾಡಿಕೊಡಬೇಕೆಂದು ಕೋರಿದ್ದೆವು. ಆದರೆ ಮತ್ತೆ 2.75 ಲಕ್ಷ ಪಾವತಿ ಮಾಡಬೇಕೆಂದು ಸೂಚನೆ ನೀಡಿದರು. ತರುವಾಯ ಮೊದಲ ಹಂತದಲ್ಲಿ 1.37 ಲಕ್ಷ ಹಾಗೂ ಎರಡನೇ ಹಂತದಲ್ಲಿ 2.75 ಲಕ್ಷ ಪಾವತಿ ಮಾಡಲಾಯಿತು. ಹೀಗೆ ಪಾವತಿ ಮಾಡಿದ ಶೇಕಡ 70ರಷ್ಟು ಅಂಗಡಿಯವರಿಗೆ ಮುಡಾ ಕ್ರಯದ ನೋಂದಣಿ ಮಾಡಿ, ಟೈಟಲ್ ಡೀಡ್ ಕೂಡ ನೀಡಿತು. ಆದರೆ ಶೇಕಡ 30ರಷ್ಟು ಅಂಗಡಿಯ ವರು ಅಂದು ಮುಡಾ ಸೂಚಿಸಿದಷ್ಟು ಹಣ ನೀಡಿಲ್ಲ. ಇದರಿಂದ ಅದರ ಮೇಲೆ ಬಡ್ಡಿ, ಚಕ್ರ ಬಡ್ಡಿಯಾಗಿರಬಹುದು. ಪ್ರಾಯಶಃ ಅಂತವರನ್ನು ತೆರವು ಮಾಡಿಸಲು ಎಂಡಿಎ ಮುಂದಾಗಿರಬಹುದು. ಇದರಿಂದ ಯಾವ ಆಧಾರದ ಮೇಲೆ ಎಂಡಿಎನವರು ಕಾಂಪ್ಲೆಕ್ಸ್ ನಲ್ಲಿ ಇರುವ ಎಲ್ಲರನ್ನು ತೆರವುಗೊಳಿಸುತ್ತಾರೆ ಎಂಬುದು ತಿಳಿಯದ ವಿಚಾರವಾಗಿದೆ.

– ಹರ್ಷ, ಖಜಾಂಚಿ, ಡೋಪ್ಲಿನ್ ಕಾಂಪ್ಲೆಕ್ಸ್ ಮರ್ಚೆಂಟ್ಸ್ ಅಸೋಸಿಯೇಷನ್

### ಡಫರಿನ್ ಕಾಂಪ್ಲೆಕ್ಸ್ ಡೋಪ್ಲಿನ್ ಕಾಂಪ್ಲೆಕ್ಸ್ ಆಗಿದ್ದೇಗೆ...



ಬ್ರಿಟಿಷ್ ವೈಸ್‌ರಾಯ್ ಲಾರ್ಡ್ ಡಫರಿನ್ ಅವರ ಹೆಸರು, ಜನರ ಡೋಪ್ಲಿನ್ ಎಂದಾಗಿದೆ. ಹಾಗಾಗಿ ದೇವರಾಜ ಮಾರುಕಟ್ಟೆ ಹಾಗೂ ಚಿಕ್ಕ ಗಡಿಯಾರದ ಎದುರಿನ ವಾಣಿಜ್ಯ ಸಂಕೀರ್ಣಕ್ಕೆ ದಿನ ಕಳೆದಂತೆ ಡೋಪ್ಲಿನ್ ಕಾಂಪ್ಲೆಕ್ಸ್ ಆಗಿದೆ.

ಲಾರ್ಡ್ ಡಫರಿನ್ 1884–1888 ಅವಧಿಯಲ್ಲಿ ವೈಸ್ ರಾಯ್ ಆಗಿದ್ದರು. ಮೈಸೂರು ಮಹಾರಾಜ ಚಾಮರಾಜ ಒಡೆಯರ್ X ಅವರ ಆಹ್ವಾನದ ಮೇರೆಗೆ ಮೈಸೂರಿಗೆ ಬಂದಿದ್ದರು. ಆ ಸಮಯದಲ್ಲಿ ಮೈಸೂರಿನ ಈಗಿನ ದೇವರಾಜ ಮಾರುಕಟ್ಟೆ ಚಿಕ್ಕದಾಗಿತ್ತು. ಹಾಗಾಗಿ ಇದರ ಎದುರು ವಾಣಿಜ್ಯ ಸಂಕೀರ್ಣ ನಿರ್ಮಿಸಿದ ಚಾಮರಾಜ ಒಡೆಯರ್ X ಅವರು ಅದಕ್ಕೆ ವೈಸ್‌ರಾಯ್ ಹೆಸರು 'ಡಫರಿನ್' ವಾಣಿಜ್ಯ ಸಂಕೀರ್ಣ ಎಂದು ನಾಮಕರಣ ಮಾಡಿದರು. ಆದರೆ, ದಿನ ಕಳೆದಂತೆ ಡಫರಿನ್ ವಾಣಿಜ್ಯ ಸಂಕೀರ್ಣ ಡೋಪ್ಲಿನ್ ಕಾಂಪ್ಲೆಕ್ಸ್ ಆಯಿತು. ಅಲ್ಲದೆ ದೇವರಾಜ ಮಾರುಕಟ್ಟೆ ಹಾಗೂ ಡಫರಿನ್ ವಾಣಿಜ್ಯ ಸಂಕೀರ್ಣದ ಮಧ್ಯೆ ಕ್ಲಾಕ್ ಟವರ್ ನಿರ್ಮಿಸಿ, ಅದಕ್ಕೂ ಕೂಡ ಡಫರಿನ್ ಕ್ಲಾಕ್ ಟವರ್ ಎಂದು ಮಹಾರಾಜರು ನಾಮಕರಣ ಮಾಡಿದರು. ಡಫರಿನ್ ಕಾಂಪ್ಲೆಕ್ಸ್ ಅಂದು ಪಾರಂಪರಿಕವಾಗಿತ್ತು. ಆದರೆ ಮಹಾರಾಜರ ಆಳ್ವಿಕೆ ನಂತರ ನವೀಕರಣಗೊಂಡು ಈ ಸ್ಥಿತಿಯಲ್ಲಿದೆ. ಸದ್ಯ ಇದು ಈಗ ಎಂಡಿಎ ಸ್ವಾಧೀನದಲ್ಲಿದೆ ಎಂದು ವಿವರಿಸುತ್ತಾರೆ.

– ಇತಿಹಾಸ ತಜ್ಞ ಪ್ರೊ.ಪಿ.ವಿ.ನಂಜರಾಜೇ ಅರಸ್

# ಸಂತ್ರಸ್ತರ ಗೌಪ್ಯತೆ ಇನ್ನು ಕಡ್ಡಾಯ

## ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ ಮಹತ್ವದ ಬದಲಾವಣೆ ತಂದ ಡಿಜಿ–ಐಜಿಪಿ ಡಾ. ಎಂ.ಎ. ಸಲೀಂ



ಬೆಂಗಳೂರು, ಫೆ.17: ಮಹಿಳೆಯರು ಮತ್ತು ಅಪ್ರಾಪ್ತರ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ ಪ್ರಕರಣಗಳ ತನಿಖೆ ಮತ್ತು ನ್ಯಾಯಾಂಗ ಪ್ರಕ್ರಿಯೆಯಲ್ಲಿ ಸಂತ್ರಸ್ತರ ಗುರುತನ್ನು ರಕ್ಷಿಸಲು ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎ. ಸಲೀಂ ಅವರು ಕಟ್ಟುನಿಟ್ಟಿನ ಆದೇಶ ಹೊರಡಿಸಿದ್ದಾರೆ.

ಸುಪ್ರೀಂಕೋರ್ಟ್ ನೀಡಿದ ನಿರ್ದೇಶನಗಳನ್ನು ಉಲ್ಲೇಖಿಸಿ ಈ ಹೊಸ ಮಾರ್ಗಸೂಚಿಗಳನ್ನು ಜಾರಿಗೆ ತರಲಾಗಿದೆ. ಲೈಂಗಿಕ ದೌರ್ಜನ್ಯಕ್ಕೊಳಗಾದ ಮಹಿಳೆಯರು ಅಥವಾ ಅಪ್ರಾಪ್ತ ಸಂತ್ರಸ್ತರ ಹೆಸರು, ವಿಳಾಸ ಹಾಗೂ ಯಾವುದೇ ರೀತಿಯ ಗುರುತನ್ನು ಸಾರ್ವಜನಿಕವಾಗಿ ಅಥವಾ ದಾಖಲೆಗಳಲ್ಲಿ ಬಹಿರಂಗಪಡಿಸುವಂತಿಲ್ಲ. ದೂರು ಸ್ವೀಕರಿಸಿದ ನಂತರ ಠಾಣಾಧಿಕಾರಿ ಅಥವಾ ತನಿಖಾಧಿಕಾರಿಯು ಮೂಲ ಹೆಸರನ್ನು ಬದಲಾಯಿಸಿ, ಸಾಂಕೇತಿಕ ಹೆಸರನ್ನು ಬಳಸಬೇಕು. ಎಫ್‌ಐಆರ್ ನಲ್ಲೂ ಈ ಬದಲಾದ ಹೆಸರನ್ನೇ ನಮೂದಿಸಬೇಕು ಮತ್ತು ಜತೆಗೆ ಇದರಲ್ಲಿ 'ಹೆಸರು ಬದಲಿಸಲಾಗಿದೆ' ಎಂದು ಸ್ಪಷ್ಟಪಡಿಸಬೇಕು. ನ್ಯಾಯಾಲಯಕ್ಕೆ ಸಲ್ಲಿಸುವ ದೂರು ಪ್ರತಿ, ಮಹಜರು ವರದಿ ಹಾಗೂ ಚಾರ್ಜ್‌ಶೀಟ್ (ದೋಷಾ ರೋಪಪಟ್ಟಿ) ಸೇರಿದಂತೆ ಎಲ್ಲಾ ಪ್ರಮುಖ ದಾಖಲೆಗಳನ್ನು 'ಮುಚ್ಚಿದ ಲಕೋಟೆಯಲ್ಲಿ' ಸಲ್ಲಿಸುವುದು ಇನ್ನು ಮುಂದೆ ಕಡ್ಡಾಯವಾಗಿದೆ.

ಕೇವಲ ನ್ಯಾಯಾಲಯದಲ್ಲಿ ಮಾತ್ರವಲ್ಲದೆ, ತನಿಖೆಯ ಯಾವುದೇ ಹಂತದಲ್ಲೂ ಸಂತ್ರಸ್ತರ ವಿವರಗಳು ಸೋರಿಕೆಯಾಗದಂತೆ ತನಿಖಾಧಿಕಾರಿಗಳು ಎಚ್ಚರ ವಹಿಸಬೇಕು. ಅನೇಕ ಪ್ರಕರಣಗಳಲ್ಲಿ ಸಂತ್ರಸ್ತರ ಗುರುತು ಬಹಿರಂಗವಾಗುವುದರಿಂದ ಅವರು ಸಾಮಾಜಿಕವಾಗಿ ಮುಜುಗರ ಮತ್ತು ಮಾನಸಿಕ ಕಿರುಕುಳ ಅನುಭವಿಸುತ್ತಿದ್ದರು. ಇದು ಅವರ ನ್ಯಾಯಾಂಗ ಹೋರಾಟದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿತ್ತು. ಸುಪ್ರೀಂಕೋರ್ಟ್‌ನ ಆಶಯದಂತೆ ಸಂತ್ರಸ್ತರಿಗೆ ಸಂಪೂರ್ಣ ಸುರಕ್ಷತೆ ನೀಡಲು ಈ ಕ್ರಮ ಕೈಗೊಳ್ಳಲಾಗಿದೆ.

# ಅಸಹಜ ಲೈಂಗಿಕ ದೌರ್ಜನ್ಯ ಪ್ರಕರಣ: ಸೂರಜ್ ರೇವಣ್ಣಗೆ ಮತ್ತೊಂದು ಶಾಕ್



ಬೆಂಗಳೂರು, ಫೆ. 17: ಜೆಡಿಎಸ್ ಎಂಎಲ್‌ಸಿ ಸೂರಜ್ ರೇವಣ್ಣ ವಿರುದ್ಧದ ಅಸಹಜ ಲೈಂಗಿಕ ದೌರ್ಜನ್ಯ ಪ್ರಕರಣದಿಂದ ಕೈಬಿಡುವಂತೆ ಕೋರಿದ್ದ ಮರುಪರಿಶೀಲನಾ ಅರ್ಜಿಯನ್ನು ಕೋರ್ಟ್ ವಜಾ ಮಾಡಿದೆ. ಹೊಳೆನರಸೀಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದಿಂದ ತಮ್ಮನ್ನು ಕೈಬಿಡುವಂತೆ ಕೋರಿ ಸೂರಜ್ ರೇವಣ್ಣ ಸಲ್ಲಿಸಿದ್ದ ಅರ್ಜಿಯನ್ನು ವಜಾ ಮಾಡಿ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ಜಡ್ಜ್ ಸಂತೋಷ್ ಗಜಾನನ ಭಟ್ ಆದೇಶ ಹೊರಡಿಸಿದ್ದಾರೆ.

**ಇದೇ ಕೇಸಿನಲ್ಲಿ ಜೈಲಿಗೆ ಹೋಗಿದ್ದ ಸೂರಜ್:** ಇನ್ನು ಜೆಡಿಎಸ್ ಕಾರ್ಯಕರ್ತನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಪ್ರಕರಣದಲ್ಲಿ ಡಾ.ಸೂರಜ್ ರೇವಣ್ಣ ಅವರನ್ನು ಬಂಧಿಸಿ ಪರಪ್ಪನ ಅಗ್ರಹಾರ ಜೈಲಿಗೆ ಕಳುಹಿಸಲಾಗಿತ್ತು. ಬಳಿಕ ಸೂರಜ್ ಅವರಿಗೆ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾ ಲಯವು ಷರತ್ತುಬದ್ಧ ಜಾಮೀನು ಮಂಜೂರು ಮಾಡಿ ಆದೇಶಿಸಿತ್ತು. ಈ ಹಿನ್ನೆಲೆ ಸೂರಜ್ ಒಂದು ತಿಂಗಳ ಬಳಿಕ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಿಂದ ಬಿಡುಗಡೆಯಾಗಿದ್ದರು.

**ಪ್ರಕರಣದ ಹಿನ್ನೆಲೆ:** ಸೂರಜ್ ರೇವಣ್ಣ ಅಸಹಜ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು 2024ರ ಜೂನ್ 22 ರಂದು ಸಂತ್ರಸ್ತ ದೂರು ನೀಡಿದ್ದರು. ಇದರ ಆಧಾರದಲ್ಲಿ ಹೊಳೆನರಸೀಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ವಿವಿಧ ಸೆಕ್ಷನ್‌ಗಳ ಅಡಿ ಪ್ರಕರಣ ದಾಖಲಾಗಿತ್ತು. ಆರಂಭದಲ್ಲಿ ಹಾಸನದ ಜಿಲ್ಲಾ ಪೊಲೀಸ್ ಠಾಣೆಗೆ ಸಂತ್ರಸ್ತ ದೂರು ನೀಡಲು ಆಗಮಿಸಿದ್ದರು. ಆದರೆ, ನಂತರ ಅದನ್ನು ಹೊಳೆನರಸೀಪುರ ಗ್ರಾಮಾಂತರ ಠಾಣೆ ಪೊಲೀಸರಿಗೆ ವರ್ಗಾಯಿಸಲಾ ಗಿತ್ತು. ಅದರಂತೆ, ಜೂನ್ 23 ರಂದು ಸೂರಜ್ ರೇವಣ್ಣರನ್ನು ಬಂಧಿಸಲಾಗಿತ್ತು.

ಮತ್ತೊಂದೆಡೆ, ಸುಳ್ಳು ಆರೋಪ ಮಾಡಿ ಹಣಕ್ಕಾಗಿ ಪೀಡಿಸಿದ್ದಾರೆ ಎಂದು ಸೂರಜ್ ರೇವಣ್ಣ ಆಪ್ತ ಶಿವಕುಮಾರ್ ಎಂಬುವರು ಸಂತ್ರಸ್ತನ ವಿರುದ್ಧ ಪ್ರತಿ ದೂರು ನೀಡಿದ್ದರು. ಸೂರಜ್ ರೇವಣ್ಣ ವಿರುದ್ಧ ದೂರುದಾರ ಲೈಂಗಿಕ ಕಿರುಕುಳ ದೂರು ನೀಡುವುದಾಗಿ ಬೆದರಿಕೆ ಹಾಕಿ, ಐದು ಕೋಟಿ ರೂ. ಹಣ ನೀಡದಿದ್ದರೆ ಲೈಂಗಿಕ ದೌರ್ಜನ್ಯ ಕೇಸ್ ದಾಖಲಿ ಸುತ್ತೇನೆ ಎಂದು ಬ್ಲ್ಯಾಕ್‌ಮೇಲ್ ಮಾಡಿದ್ದರು ಎಂದು ಶಿವಕುಮಾರ್ ದೂರಿನಲ್ಲಿ ಉಲ್ಲೇಖಿಸಿದ್ದರು. ಈ ಎಲ್ಲ ಬೆಳವಣಿಗೆಗಳ ನಂತರ ರಾಜ್ಯ ಸರ್ಕಾರ, ಈ ಪ್ರಕರಣವನ್ನು ಸಿಐಡಿಗೆ ವರ್ಗಾಯಿಸಿತ್ತು

## ಕರ್ನಾಟಕ ಹೈಕೋರ್ಟ್: ಮೂವರು ಹೊಸ ಎಎಜಿಗಳ ನೇಮಕ

ಬೆಂಗಳೂರು: ಕರ್ನಾಟಕ ಹೈಕೋರ್ಟ್‌ನ ಹಾಲಿ ಹೆಚ್ಚುವರಿ ಅಡ್ವೋಕೇಟ್ ಜನರಲ್‌ಗಳಾದ (ಎಎಜಿ) ಸಿ.ಎಸ್.ಪ್ರದೀಪ್, ಸಂತೋಷ್ ಎಸ್.ಗೋಗಿ ಮತ್ತು ಎನ್.ದೇವದಾಸ್ ಅವರನ್ನು ಕರ್ತವ್ಯದಿಂದ ಬಿಡುಗಡೆ ಮಾಡಲಾಗಿದೆ. ಈ ತೆರವಾದ ಹುದ್ದೆಗಳಿಗೆ ಕ್ರಮವಾಗಿ ಹೈಕೋರ್ಟ್ ವಕೀಲರಾದ ಪ್ರದೀಪ್ ಗಾಂವಕರ್, ತಾರನಾಥ ಪೂಜಾರಿ ಮತ್ತು ಕೆ.ಶ್ರೀಕಾಂತ ಪಾಟೀಲ ಅವರನ್ನು ನೇಮಕ ಮಾಡಿ ಕಾನೂನು ಇಲಾಖೆ ಆದೇಶಿಸಿದೆ.

## ಬಿಬಿಸಿ ವರ್ಷದ ಮಹಿಳಾ ಕ್ರೀಡಾಪಟು ಪ್ರಶಸ್ತಿಗೆ ಸ್ಮೃತಿ ಮಂದಾನ ಆಯ್ಕೆ



ಸ್ಮೃತಿ ಮಂದಾನ

ನವದೆಹಲಿ: ಐಸಿಸಿ ಮಹಿಳಾ ವಿಶ್ವಕಪ್ ವಿಜೇತ ಭಾರತ ತಂಡದ ಆಟಗಾರ್ತಿ ಸ್ಮೃತಿ ಮಂದಾನ ಅವರು ಬಿಬಿಸಿ ನೀಡುವ 2025ನೇ ಸಾಲಿನ 'ಭಾರತೀಯ ಮಹಿಳಾ ಕ್ರೀಡಾಪಟು' ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಫಿಡೆ ಮಹಿಳಾ ಚೆಸ್ ವಿಶ್ವಕಪ್ ವಿಜೇತ ದಿವ್ಯಾ ದೇಶಮುಖ್ ಅವರು ವರ್ಷದ ಉದಯೋನ್ಮುಖ ಆಟಗಾರ್ತಿ ಗೌರವಕ್ಕೆ ಭಾಜನರಾಗಿದ್ದಾರೆ.

2024ರ ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಎರಡು ಕಂಚಿನ ಪದಕ ಜಯಿಸಿದ್ದ ಪ್ರೀತಿ ಪಾಲ್ ಅವರು ಪ್ಯಾರಾ ಮಹಿಳಾ ಅಥ್ಲೀಟ್ ಪ್ರಶಸ್ತಿ ಪಡೆದಿದ್ದಾರೆ. ಒಲಿಂಪಿಕ್ಸ್ ಶೂಟಿಂಗ್‌ನಲ್ಲಿ ಫೈನಲ್ ತಲುಪಿದ್ದ ಭಾರತದ ಮೊದಲ ಮಹಿಳಾ ಶೂಟರ್ ಅಂಜಲಿ ಭಾಗವತ್ ಅವರು ಜೀವಮಾನ ಸಾಧನೆ ಗೌರವಕ್ಕೆ ಪಾತ್ರರಾಗಿದ್ದಾರೆ. ದಿಗ್ಗಜ ಟೆನಿಸ್ ಆಟಗಾರ ಲಿಯಾಂಡರ್ ಪೇಸ್, ಪ್ಯಾರಾಲಿಂಪಿಕ್ ಪದಕ ವಿಜೇತೆ ದೀಪಾ ಮಲಿಕ್ ಹಾಗೂ ಭಾರತ ಅಥ್ಲೆಟಿಕ್ ಫೆಡರೇಶನ್‌ನ ಹಿರಿಯ ಉಪಾಧ್ಯಕ್ಷೆ ಅಂಜು ಬಾಬಿ ಜಾರ್ಜ್ ಅವರನ್ನೊಳಗೊಂಡ ತೀರ್ಪುಗಾರರ ಸಮಿತಿಯು ವಿಜೇತರನ್ನು ಆಯ್ಕೆ ಮಾಡಿದೆ.

ಮೈಸೂರು ಮಿತ್ರ ಬುಧವಾರ 18 ಫೆಬ್ರವರಿ 2026

# ಮೈಸೂರಿಗೆ ಮಾದಕ ವಸ್ತು ಪೂರೈಕೆ: ಬೆಂಗಳೂರಿನ ಇಬ್ಬರು ಪೆಡ್ಲರ್‌ಗಳ ಬಂಧನ

## 5.10 ಲಕ್ಷ ಮೌಲ್ಯದ ಎಂಡಿಎಂಎ, 1.25 ಲಕ್ಷದ ಗಾಂಜಾ, ಕಾರು ವಶಕ್ಕೆ

ಮೈಸೂರು, ಫೆ.17(ಎಂಕೆ)– ಮೈಸೂರು ನಗರಕ್ಕೆ ಮಾದಕ ವಸ್ತುಗಳನ್ನು ಪೂರೈಕೆ ಮಾಡುತ್ತಿದ್ದ ಬೆಂಗಳೂರು ಮೂಲದ ಇಬ್ಬರು ಪೆಡ್ಲರ್‌ಗಳನ್ನು ಬಂಧಿಸಿರುವ ಸಿಸಿಬಿ ಪೊಲೀಸರು, ಬಂಧಿತರಿಂದ 5.10 ಲಕ್ಷ ರೂ ಎಂಡಿಎಂಎ, 1.25 ಲಕ್ಷರೂ. ಮೌಲ್ಯದ ಗಾಂಜಾ ವಶಪಡಿಸಿಕೊಂಡಿದ್ದಾರೆ.

ಬೆಂಗಳೂರು ನಂದಿನಿ ಲೇಔಟ್ ವಿಜಯಾನಂದ ನಗರದ ನಿವಾಸಿಗಳಾದ ಆರ್.ಪ್ರಮೋದ್(27), ಎಂ.ವಿಕಾಸ್ (23) ಬಂಧಿತ ಪೆಡ್ಲರ್‌ಗಳು. ಮೈಸೂರು ನಗರದಲ್ಲಿ ಮಾದಕ ವಸ್ತುಗಳ ಮಾರಾಟ ಜಾಲ ಪತ್ತೆ ಕಾರ್ಯಾಚರಣೆ ಮುಂದುವರೆಸಿರುವ ಸಿಸಿಬಿ ಪೊಲೀಸರು, ಮಂಗಳವಾರ ಬೆಂಗಳೂರಿನಿಂದ ಮೈಸೂರು ನಗರಕ್ಕೆ ಅಕ್ರಮವಾಗಿ ಮಾದಕ ವಸ್ತುಗಳಾದ ಎಂಡಿಎಂಎ ಮತ್ತು ಗಾಂಜಾ ಪೂರೈಕೆ ಮಾಡುತ್ತಿದ್ದ ಪೆಡ್ಲರ್‌ಗಳನ್ನು ಬಂಧಿಸಿದ್ದಾರೆ.


ಪ್ರಮೋದ್


ವಿಕಾಸ್

ಬಂಧಿತರಿಂದ 5.10 ಲಕ್ಷ ರೂ. ಮೌಲ್ಯದ 51 ಗ್ರಾಂ, 83 ಮಿಲಿ ನಿಷೇಧಿತ ಮಾದಕ ವಸ್ತು ಎಂಡಿಎಂಎ ಹಾಗೂ 1.25 ಲಕ್ಷ ರೂ.ಮೌಲ್ಯದ 2 ಕೆಜಿ 230 ಗ್ರಾಂ ಗಾಂಜಾ ಸೇರಿ ಒಟ್ಟು 6,35,000 ರೂ.ಮೌಲ್ಯದ ನಿಷೇಧಿತ ಮಾದಕ ವಸ್ತು ಹಾಗೂ ಮಾದಕ ವಸ್ತುಗಳ ಸಾಗಾಟಕ್ಕೆ ಬಳಸುತ್ತಿದ್ದ 3 ಲಕ್ಷ ಮೌಲ್ಯದ ಹುಂಡೈ ಐ–2(DL-7-CP-8989) ಕಾರನ್ನು ವಶಕ್ಕೆ ಪಡೆದು, ಪೆಡ್ಲರ್‌ಗಳಿಬ್ಬರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಸಿಸಿಬಿ ಎಸಿಪಿ ಮಹಮ್ಮದ್ ಶರೀಫ್‌ರಾವು ತರ್ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್, ಪಿಎಸ್‌ಐಗಳಾದ ಕೆ.ಲೇಪಾಕ್ಷ ಜ್ಯೋತ್ಸ್ನಾ ರಾಜ್, ರೇವಣ ಸಿದ್ದಪ್ಪ, ಸಿಬ್ಬಂದಿಗಳಾದ ಮಧುಕುಮಾರ್, ಚೇತನ್, ರಾಜಾ ಸಾಬ್, ಯಶವಂತಕುಮಾರ್, ಕಿರಣ್ ರಾಥೋಡ್, ಸಂತೋಷ್ ಪವಾರ್, ಹಜರತ್ ಅಲಿ, ಸಮೀರ್, ಮಮತ, ಸಿದ್ದರಾಜು ಇದ್ದರು.

### ಕಟ್ಟುನಿಟ್ಟಿನ ಕ್ರಮ

ಮೈಸೂರು ನಗರಕ್ಕೆ ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಿಂದ ಅಕ್ರಮವಾಗಿ ಮಾದಕ ವಸ್ತುಗಳನ್ನು ಪೂರೈಕೆ ಮಾಡುವ ಜಾಲ ಪತ್ತೆ ಕಾರ್ಯಾಚರಣೆ ನಡೆಸಲಾಗುತ್ತಿದೆ. ಪೆಡ್ಲರ್‌ಗಳ ಕಾರ್ಯಚಟುವಟಿಕೆಗಳ ಮೇಲೆ ಗಮನ ಹರಿಸಲಾಗಿದ್ದು, ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ. –ಸಿಸಿಬಿ ಪೊಲೀಸರು

# ವೈದ್ಯರ ಸಲಹಾ ಚೀಟಿ ಇಲ್ಲದೆ ನಿದ್ರೆ ಮಾತ್ರೆ, ಮತ್ತು ಬರುವ ಔಷಧಿ ಮಾರಾಟ ಮಾಡದಂತೆ ಅಪರ ಎಸ್ಪಿ ಎಚ್ಚರಿಕೆ


ಮೈಸೂರು ಎಸ್ಪಿ ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಮಾದಕ ದ್ರವ್ಯಗಳ ಸಮನ್ವಯ ಸಮಿತಿ(ಎನ್‌ಸಿಓಆರ್‌ಡಿ) ಸಭೆ ನಡೆಯಿತು.



ಮೈಸೂರು, ಫೆ.17(ಎಂಕೆ)– ಮೆಡಿಕಲ್ ಸ್ಟೋರ್‌ಗಳಲ್ಲಿ ವೈದ್ಯರ ಸಲಹಾ ಚೀಟಿ ಇಲ್ಲದೆ ನಿದ್ರೆ ಮಾತ್ರೆ ಇನ್ನಿತರೆ ಮಾದಕ ವಸ್ತುಗಳ ಸೇವನೆಗೆ ಬಳಸುವ ಔಷಧಿ ಮಾರಾಟ ಕಂಡು ಬಂದಲ್ಲಿ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಹೆಚ್ಚುವರಿ ಪೊಲೀಸ್ ಅಧೀಕ್ಷಕ ಸಿ.ಮಲ್ಲಿಕ್ ಎಚ್ಚರಿಕೆ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಮಾದಕ ದ್ರವ್ಯಗಳ ಸಮನ್ವಯ ಸಮಿತಿ (ಎನ್‌ಸಿಓಆರ್‌ಡಿ) ಸಭೆಯಲ್ಲಿ ಮಾತನಾಡಿದ ಅವರು, ಮಾದಕ ವಸ್ತುಗಳ ಸೇವನೆಯ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸುವ ಮೂಲಕ ಮಾದಕ ವಸ್ತುಗಳ ಉತ್ಪಾದನೆ ಹಾಗೂ ಬೇಡಿಕೆ ಜಾಲವನ್ನು ನಿಷ್ಕ್ರಿಯಗೊಳಿಸಬೇಕಿದೆ ಎಂದರು.

ಮಾದಕ ವಸ್ತುಗಳ ವ್ಯಸನಿಗಳನ್ನು ಗುರುತಿಸಿ, ವ್ಯಸನ ಮುಕ್ತ ಕೇಂದ್ರಗಳ ಮೂಲಕ ಸಮಾಲೋಚನೆ ಏರ್ಪಡಿಸಿ ವ್ಯಸನ ಮುಕ್ತರನ್ನಾಗಿಸಲು ಶ್ರಮಿಸಬೇಕು. ಮಾದಕ ವಸ್ತುಗಳ ಬಳಕೆ ಮತ್ತು ಮಾರಾಟ ನಿಯಂತ್ರಣಕ್ಕೆ ಪೊಲೀಸ್ ಇಲಾಖೆ ವತಿಯಿಂದ ಹಲವಾರು ದಾಳಿಗಳನ್ನು ನಡೆಸಲಾಗುತ್ತಿದೆ. ಸಾರ್ವಜನಿಕರು ಹಾಗೂ ವಿವಿಧ ಇಲಾಖೆಗಳು ಮಾದಕ ವಸ್ತುಗಳ ಮಾರಾಟ ಜಾಲವನ್ನು ಸಂಪೂರ್ಣವಾಗಿ ತೊಡೆದುಹಾಕಲು ಸಹಕಾರ ನೀಡಬೇಕು ಎಂದು ತಿಳಿಸಿದರು.

ವೈದ್ಯರ ಸಲಹಾ ಚೀಟಿಯಿಲ್ಲದೆ ನಿದ್ರೆ ಮಾತ್ರೆಗಳನ್ನು ಖರೀದಿಸಿ ಮಾದಕ ವಸ್ತುಗಳ ರೂಪದಲ್ಲಿ ಬಳಸುವ ಪ್ರಕರಣಗಳು ಕಂಡು ಬಂದಿವೆ. ಈ ನಿಟ್ಟಿನಲ್ಲಿ ಮೆಡಿಕಲ್ ಸ್ಟೋರ್ ಮಾಲೀಕರು, ಕೆಲಸಗಾರರ ವೈದ್ಯರ ಸಲಹಾ ಚೀಟಿ ಇಲ್ಲದೆ ಇಂತಹ ಔಷಧಿ ಮಾರಾಟ ಮಾಡುವುದು ಕಂಡು ಬಂದಲ್ಲಿ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು.

ಹಾಗೆಯೇ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳ ಮೇಲೆ ವಾರ್ಡನ್‌ಗಳು ನಿಗಾ ವಹಿಸಬೇಕು. ವಿದ್ಯಾರ್ಥಿಗಳು ಹೊರಗಿನಿಂದ ಆಹಾರ ಸೇರಿ ಇನ್ನಿತರೆ ವಸ್ತುಗಳನ್ನು ಆರ್ಡರ್ ಮಾಡಿ ಖರೀದಿಸುತ್ತಾರೆ. ಅವುಗಳ ಬಗ್ಗೆ ತೀಕ್ಷ್ಣ ನಿಗಾ ವಹಿಸಬೇಕು. ಹೊರಗಿನಿಂದ ತರುವ ಪದಾರ್ಥಗಳನ್ನು ಪರಿಶೀಲನೆ ಮಾಡಬೇಕು ಎಂದು ಹೇಳಿದರು.

**ವಿಮುಕ್ತಿ ಅಭಿಯಾನ:** ನಗರ ಪೊಲೀಸ್ ವಿಭಾಗದ ಡಿಸಿಪಿ ಸುಂದರ್‌ರಾಜ್ ಮಾತನಾಡಿ, ಮೈಸೂರು ನಗರದೆಲ್ಲೆಡೆ 'ವಿಮುಕ್ತಿ' ಅಭಿಯಾನ ನಡೆಸಲಾಗುತ್ತಿದ್ದು, ರಾಷ್ಟ್ರೀಯ ಮಾದಕ ದ್ರವ್ಯಗಳ ಸಮನ್ವಯ ಸಮಿತಿ ಸದಸ್ಯರು ಡ್ರಗ್ಸ್ ಮಾರಾಟದ ಬಗ್ಗೆ ಮಾಹಿತಿ ನೀಡಿದರೆ ಅವರ ಹೆಸರನ್ನು ಗೌಪ್ಯವಾಗಿಡಲಾಗುವುದು. ಡ್ರಗ್ಸ್ ವ್ಯಸನಿಗಳು ಕಂಡು ಬಂದಲ್ಲಿ ಅವರು ಮಾದಕ ವಸ್ತು ಸೇವನೆ ಮಾಡದಂತೆ ನೋಡಿಕೊಳ್ಳಲು ಒಬ್ಬರು ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗುತ್ತಿದೆ ಎಂದರು. ಸಭೆಯಲ್ಲಿ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಭಾರತೀಯ ವಿದ್ಯಾಭವನದಲ್ಲಿ ದಾಸರಪದಗಳು



ಮೈಸೂರು,ಫೆ.17–ಭಾರತೀಯ ವಿದ್ಯಾ ಭವನ, ಮೈಸೂರು ವತಿಯಿಂದ ಫೆ. 21 ರಂದು ಸಂಜೆ 6 ಗಂಟೆಗೆ ವಿದುಷಿ ಕು. ಸಾಧ್ವಿನಿ ಕೊಪ್ಪ ಮತ್ತು ತಂಡದಿಂದ ದಾಸರ ಪದಗಳು ಕಾರ್ಯಕ್ರಮ ವಿದುಷಿ ಸಾಧ್ವಿನಿ ಕೊಪ್ಪ ವನ್ನು ಭಾರತೀಯ ವಿದ್ಯಾಭವನದ ತಾತಾಚಾರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಪಕ್ಕವಾದ್ಯದಲ್ಲಿ ಯಶಸ್ವಿ–ವಯೋಲಿನ್, ಎಂ.ಕೆ.ಶ್ರೀನಿಧಿ–ಕೀಬೋರ್ಡ್, ವಿನಯ್ ರಂಗದಾಲ್–ರಿದಂ ಪ್ಯಾಡ್ ಮತ್ತು ಆತ್ಮಾರಾವ್ ನಾಯಕ್–ತಬಲಾದಲ್ಲಿ ಸಹಕಾರ ನೀಡಲಿದ್ದಾರೆ.


ಆತ್ಮಾರಾಂ



ಶ್ರೀನಿಧಿ


ವಿನಯ್ ರಂಗದಾಲ್


ಯಶಸ್ವಿ

**ಸಾಧ್ವಿನಿ ಕೊಪ್ಪ ಪರಿಚಯ:** ಸಂಗೀತವನ್ನು ತಮ್ಮ ಮೂರನೇ ವಯಸ್ಸಿನಿಂದಲೇ ಕಲಿಯುತ್ತಾ, ತಮ್ಮ ತಂದೆ ತಾಯಿ ಕಳೆದ ಮೂವತ್ತು ವರ್ಷಗಳಿಂದ ನಡೆಸಿಕೊಂಡು ಬಂದಿರುವ ನಾದಬ್ರಹ್ಮ ಸಂಗೀತ ಮತ್ತು ನೃತ್ಯ ಶಾಲೆಯಲ್ಲಿ, ವಿದ್ವಾನ್ ಮತ್ತೂರು ಟಿ ಗೋಪಾಲ್ ಇವರ ಬಳಿ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಕಲಿಯಲಾರಂಭಿಸಿದರು. ಜೊತೆಯಲ್ಲಿ ವಿದ್ವಾನ್ ಎಂ.ಇ.ನಟರಾಜ್ ಅವರ ಬಳಿ ವಯೋಲಿನ್ ಹಾಗೂ ವಿದ್ವಾನ್ ನಾರಾಯಣ್,ಬೆಂಗಳೂರು, ಅವರ ಬಳಿ ಭರತನಾಟ್ಯವನ್ನು ಕೂಡ ಕೆಲವು ವರ್ಷಗಳ ಕಾಲ ಅಭ್ಯಾಸ ಮಾಡಿದ್ದಾರೆ.

ಇವರ ಗುರುಗಳು ವಿದ್ವಾನ್ ಮತ್ತೂರು ಟಿ.ಗೋಪಾಲ್, ವಿದ್ವಾನ್ ವಿನಯ್ ಶರ್ವ, ವಿದ್ವಾನ್ ಕಾರೈಕುಡಿ ಸುಬ್ರಹ್ಮಣ್ಯನ್ ಹಾಗೂ ವಿದುಷಿ ಸುಕನ್ಯಾ ಪ್ರಭಾಕರ್, ತಂದೆ–ವಿದ್ವಾನ್ ಎಂ.ಕೆ.ಶ್ರೀನಿಧಿ, ತಾಯಿ–ಶೋಭಾ ಶ್ರೀನಿಧಿ ಕಲಾಶ್ರೀ ಪ್ರಶಸ್ತಿಯನ್ನು ಮುಖ್ಯಮಂತ್ರಿಗಳಿಂದ ಪಡೆದಿದ್ದಾರೆ.



### ಪ್ರಸಾದ ವಿನಿಯೋಗ

ಶಿವರಾತ್ರಿ ಅಂಗವಾಗಿ ಮೇಟಗಳ್ಳಿ ಕರಕುಶಲ ನಗರದಲ್ಲಿ ಆಯೋಜಿಸಿದ್ದ ಪ್ರಸಾದ ವಿನಿಯೋಗ ಸೇವೆಗೆ ಮೈಸೂರು ನಗರ ಜೆಡಿಎಸ್ ಅಧ್ಯಕ್ಷ ಎಸ್‌ಬಿಎಂ ಮಂಜು ಚಾಲನೆ ನೀಡಿದರು. ಈ ವೇಳೆ ಆಯೋಜಕರಾದ ಮಂಜು, ಅಕ್ಷಯ್, ಯೋಗೇಶ್, ಕೃಷ್ಣಚಾರ್, ಜಗದೀಶ್, ಶಂಕರ್ ಇನ್ನಿತರರು ಉಪಸ್ಥಿತರಿದ್ದರು.

### ಮಹಿಳೆ ನಾಪತ್ತೆ



ಮೈಸೂರು: ಆಸ್ಪತ್ರೆಗೆಂದು ಮನೆಯಿಂದ ಹೊರಹೋದ ಮಹಿಳೆ ಮನೆಗೆ ಹಿಂತಿರುಗದೆ ನಾಪತ್ತೆಯಾಗಿರುವ ಘಟನೆ ನಡೆದಿದೆ. ಮೈಸೂರಿನ ಗಾಂಧಿನಗರದ ನಿವಾಸಿ ಶ್ರೀಮತಿ ಜಾನಕಮ್ಮ 06–03–2025ರಂದು ಆಸ್ಪತ್ರೆಗೆಂದು ಮನೆಯಿಂದ ಹೊರಹೋದವರು ನಾಪತ್ತೆಯಾಗಿದ್ದಾರೆ. ಜಾನಕಮ್ಮ ಅವರ ವಯಸ್ಸು 75 ವರ್ಷ, ಎಣ್ಣೆಗೆಂಪು ಮೈಬಣ್ಣ, ಸಾಧಾರಣ ಮೈಕಟ್ಟು, ಬಿಳಿಮಿಶ್ರಿತ ಕಪ್ಪು ತಲೆಗೂದಲು, ಬಲಗಾಲಿನಲ್ಲಿ ಗಾಯದ ಬಿಳಿ ಮತ್ತು ಕಪ್ಪು ಗುರುತುಗಳು ಉಳ್ಳವರಾಗಿದ್ದು, ಕನ್ನಡ ಭಾಷೆ ಮಾತನಾಡುತ್ತಾರೆ. ಕಾಣೆಯಾದಾಗ ನೀಲಿ ಬಣ್ಣದ ಸೀರೆ ಮತ್ತು ರವಿಕೆ ಧರಿಸಿರುತ್ತಾರೆ. ಇವರ ಬಗ್ಗೆ ಸುಳಿವು ಸಿಕ್ಕಲ್ಲಿ ನರಸಿಂಹರಾಜ ಠಾಣೆ ದೂ. 0821–2418312, 24118100, 2418339/40ಗೆ ಮಾಹಿತಿ ನೀಡುವಂತೆ ಪ್ರಕಟಣೆ ಕೋರಿದೆ.

# ತುಕ್ಕು ಹಿಡಿಯುತ್ತಿರುವ ಅಂಚೆ ಪೆಟ್ಟಿಗೆ




ಮೈಸೂರಿನ ಗಾಂಧಿಚೌಕದ ಬಳಿ ಬಳಕೆಗೆ ಬಾರದೆ ತುಕ್ಕು ಹಿಡಿಯುತ್ತಿರುವ ಅಂಚೆ ಪೆಟ್ಟಿಗೆಯನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಫೆ.17(ಪಿಎಂ)– ಫುಟ್‌ಪಾತ್‌ನಲ್ಲಿ ತುಕ್ಕು ಹಿಡಿಯುತ್ತಿರುವ ಅಂಚೆ ಪೆಟ್ಟಿಗೆಯು ದಿನ ಕಳೆದಂತೆ ಕಸದ ತೊಟ್ಟಿಯಾಗಿ ಪರಿವರ್ತನೆ ಕಂಡರೂ ಅಚ್ಚರಿ ಇಲ್ಲ. ಅದರ ಬಾಗಿಲು ಮುರಿದು ಬಿದ್ದು ಎಷ್ಟೋ ದಿನಗಳು ಕಳೆದಿವೆ.

ಇಂತಹ ದುಸ್ಥಿತಿಯಲ್ಲಿರುವ ಅಂಚೆ ಪೆಟ್ಟಿಗೆಯನ್ನು ಸುಸ್ಥಿತಿಗೆ ತಂದರೂ ಪ್ರಯೋಜನ ಇಲ್ಲವೆಂಬಂತಿದೆ. ಕಾರಣ ಇ–ಮೇಲ್, ವಾಟ್ಸಪ್ ಸೇರಿದಂತೆ ಅಂತರ್ಜಾಲದ ಅಬ್ಬರದಲ್ಲಿ ಈ ಕಬ್ಬಿಣದ ಪೆಟ್ಟಿಗೆಯತ್ತ ತಿರುಗಿ ನೋಡುವವರಾದರೂ ಯಾರು?

ಕೊನೆ ಪಕ್ಷ ಅದನ್ನು ತೆರವು ಮಾಡಿದರೆ ಫುಟ್‌ಪಾತ್‌ನಲ್ಲಿ ಪಾದಚಾರಿಗಳು ಸಾರಾಗವಾಗಿ ಸಂಚರಿಸಲು ಅನುವಾದರೂ ಮಾಡಿಕೊಡಬಹುದು. ಆದರೆ ಅಂಚೆ ಇಲಾಖೆಯಾಗಲೀ, ಮೈಸೂರು ಮಹಾನಗರಪಾಲಿಕೆಯಾಗಲೀ, ಯಾವುದೇ ಕ್ರಮ ವಹಿಸದೇ ಹಾಗೇ ಬಿಟ್ಟಿದ್ದು, ಸದ್ಯ ಅದರೊಳಗೆ ದೇವರ ಫೋಟೋ ಇಟ್ಟಿರುವ ಜನ, ಮುಂದಿನ ದಿನಗಳಲ್ಲಿ ಕಸದ ಬುಟ್ಟಿಯಾಗಿ ಪರಿವರ್ತಿಸಿಕೊಂಡರೂ ಅಚ್ಚರಿ ಇಲ್ಲ.

ಮೈಸೂರಿನ ಗಾಂಧಿಚೌಕ ಸಮೀಪ ಮಕ್ಕಾಜಿ ಚೌಕ ವಾಣಿಜ್ಯ ಸಂಕೀರ್ಣದ (ವಾರ್ಡ್ 41) ಎದುರು ಫುಟ್‌ಪಾತ್‌ನಲ್ಲಿ ಈ ಪೋಸ್ಟ್ ಬಾಕ್ಸ್ ಇದ್ದು, ತುಕ್ಕು ಹಿಡಿಯುವ ಸ್ಥಿತಿಯಲ್ಲಿದೆ. ಅದರ ಕೆಳಗೆ ಪ್ಲಾಸ್ಟಿಕ್ ಕವರ್, ಬಾಟಲಿ ಸೇರಿದಂತೆ ತ್ಯಾಜ್ಯ ಗುಡ್ಡೆ ಹಾಕುತ್ತಿದ್ದು, ಇದು ಅನೈರ್ಮಲ್ಯದೊಂದಿಗೆ ನಗರದ ಅಂದಗೆಡಿಸುತ್ತಿದೆ. ಸ್ವಚ್ಛ ಸರ್ವೇಕ್ಷಣ್‌ಗೆ ಸಜ್ಜಾಗುತ್ತಿರುವ ಮೈಸೂರು ಪಾಲಿಕೆ ಇನ್ನಾದರೂ ಈ ಪೆಟ್ಟಿಗೆ ವಿಚಾರದಲ್ಲಿ ಸೂಕ್ತ ಕ್ರಮ ವಹಿಸುವುದೇ ಕಾದು ನೋಡಬೇಕಿದೆ.

### ಫೆ.20ಕ್ಕೆ 'ಧರ್ಮಿಷ್ಠ' ತೆರೆಗೆ

ಮೈಸೂರು,ಫೆ.17(ಜಿಎ)–ಗೋಲ್ಡನ್ ಸುರೇಶ್ ಫಿಲಂಸ್ ಬ್ಯಾನರ್‌ನಲ್ಲಿ ನಿರ್ಮಿಸಿರುವ 'ಧರ್ಮಿಷ್ಠ' ಚಲನಚಿತ್ರವು ಫೆ.20ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದ್ದು, ವೀಕ್ಷರು ಪ್ರೋತ್ಸಾಹಿಸ ಬೇಕು ಎಂದು ಚಿತ್ರದ ನಿರ್ಮಾಪಕ ಗೋಲ್ಡನ್ ಸುರೇಶ್ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಲ್ಲರ ಸಹಕಾರದಿಂದ ಮೊದಲ ಚಿತ್ರ ನಿರ್ಮಾಣ ಮಾಡಿದ್ದೇನೆ. ಎಲ್ಲರೂ ಕುಟುಂಬ ಸಮೇತ ಚಿತ್ರವನ್ನು ವೀಕ್ಷಿಸಬಹುದು. ಚಿತ್ರದಲ್ಲಿ ಹೊಸ ಪ್ರತಿಭೆಗಳಿಗೆ ಅವಕಾಶ ನೀಡಲಾಗಿದೆ ಎಂದರು.

ಚಿತ್ರ ನಿರ್ದೇಶಕ ಹೆಚ್.ವಿ.ಪುಟ್ಟಸ್ವಾಮಿ ಮಾತನಾಡಿ, 'ಧರ್ಮಿಷ್ಠ' ಚಿತ್ರವು ತಾಳಿದವನು ಬಾಳಿಯಾನು ಎಂಬ ಸಂದೇಶವನ್ನೊಳಗೊಂಡಿದೆ. ಜೂನಿಯರ್ ರಾಜ್‌ಕುಮಾರ್ ಖ್ಯಾತಿಯ ಅಜಿತ್‌ಕುಮಾರ್ ಪ್ರಥಮ ಬಾರಿ ನಾಯಕನಾಗಿ ಅಭಿನಯಿಸಿದ್ದಾರೆ. ಭಾಸ್ಕರ್ ಕೃಷ್ಣ ಸಂಭಾಷಣೆ, ಚೇತನ್ ಛಾಯಾಗ್ರಹಣ, ಮಹೇಂದ್ರ ಮಹದೇವು ಸಂಕಲನ ಹಾಗೂ ರವಿಶಂಕರ್ ಸಂಗೀತ ನೀಡಿದ್ದಾರೆ ಎಂದರು. ಗೋಷ್ಠಿಯಲ್ಲಿ ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಎಂ.ರಾಮೇಗೌಡ, ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಎಂ.ನಂದೀಶ್, ಎಂ.ಸುರೇಶ್ ಇದ್ದರು.

### ನೇಮಕ



ಮೈಸೂರು: ಮೈಸೂರಿನ ಚಾಮರಾಜ ವಿಧಾನ ಸಭಾ ಕ್ಷೇತ್ರದ ದೇವರಾಜ ಬ್ಲಾಕ್ ಉಪಾಧ್ಯಕ್ಷರನ್ನಾಗಿ ಬಿ.ಚಂದ್ರಶೇಖರ್ ಅವರನ್ನು ನೇಮಕ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಫೆ.17–ವಿವಿ ಮೊಹಲ್ಲಾ ವಿಭಾಗ ವ್ಯಾಪ್ತಿ ನಿರ್ವಹಣಾ ಕೆಲಸದ ನಿಮಿತ್ತ ಫೆ.18ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 6ರವರೆಗೆ ದಟ್ಟಗಳ್ಳಿ 3ನೇ ಹಂತ, ತ್ರಿವೇಣಿ ಸೂಪರ್ ಮಾರ್ಕೆಟ್ ಏರಿಯಾ, ಕದಂಬ ಬೇಕರಿಏರಿಯಾ, ದಟ್ಟಗಳ್ಳಿ 'ಐ' ಬ್ಲಾಕ್, ಮುಡಾ ಎಂಪ್ಲಾಯಿಸ್ ಲೇಔಟ್, ಆಂದೋಲನ ವೃತ್ತ, ಸಬ್ ರಿಜಿಸ್ಟ್ರಾರ್ ಆಫೀಸ್, ಕನಕದಾಸನಗರ, ಆದಿತ್ಯ ಸರ್ಕಲ್, ಸೋಮನಾಥನಗರ, ಮಹಾಲಕ್ಷ್ಮೀ ಬಡಾವಣೆ ಕೇರ್ಗಳ್ಳಿ, ಕಲ್ಕಿ ಬಡಾವಣೆ, ನಂದಿ ಸರ್ಕಲ್ ದಟ್ಟಗಳ್ಳಿ, ಜೋಡಿ ಬೇವಿನಮರ ದಟ್ಟಗಳ್ಳಿ, ರಾಮಕೃಷ್ಣನಗರ, ಆರ್.ಟಿ.ನಗರ, ಲಿಂಗಾಂಬುದಿಪಾಳ್ಯ, ಯೂನಿವರ್ಸಿಟಿ ಲೇಔಟ್, ವಾಸು ಲೇಔಟ್, ಕೆಬ್ಲಾಕ್ ಆರ್.ಕೆ. ನಗರ, ಮೂಗನಹುಂಡಿ, ನಗರ್ತಹಳ್ಳಿ, ದೇವಗಳ್ಳಿ, ಬಲ್ಲಳ್ಳಿ, ಅನಗಳ್ಳಿ, ತಿಬ್ಬಯ್ಯನಹುಂಡಿ, ಬೀರಿ ಹುಂಡಿ ಐ.ಪಿ ಲಿಮಿಟ್ಸ್ ಚಾವಿಸನಿನಿ ಮುಖ್ಯ ಇಂಜಿನಿಯರ್ ಕಚೇರಿ, ಹೆಲ್ತ್ ಸಿಟಿ, ಕಾರ್ತಿಕ ಬಡಾವಣೆ ಐ ಬ್ಲಾಕ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

# ಕೃತಿಕಾಗೆ ಪಿಹೆಚ್.ಡಿ ಪದವಿ



ಮೈಸೂರು,ಫೆ.17–ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಡಾ.ತ್ರಿಶಿಲಾದೇವಿ.ಸಿ. ನಾಗವಿ ಅವರ ಮಾರ್ಗದರ್ಶನದಲ್ಲಿ ಶ್ರೀಮತಿ ಕೃತಿಕಾ ಎಸ್.ಜಿ. ಅವರು ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

## ತೊಳಸಿ ಜುವೆಲ್ಸ್‌ನಿಂದ ಗಾಲ್ಫ್ ಪಂದ್ಯಾವಳಿ; ವಿಜೇತರಿಗೆ ಪ್ರಶಸ್ತಿ ವಿತರಣೆ...






ಮೈಸೂರಿನ ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್‌ನಲ್ಲಿ (ಜೆಡಬ್ಲ್ಯೂಜಿಸಿ) ತೊಳಸಿ ಜುವೆಲ್ಸ್ ವತಿಯಿಂದ ಆಯೋಜಿಸಿದ್ದ ಸ್ಟ್ರೋಕ್ಸ್ ಅಥವಾ ಸ್ಪೈಸ್ ಟೂರ್ನಮೆಂಟ್ 2026ರ ಎರಡನೇ ಆವೃತ್ತಿಯನ್ನು ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಗಾಲ್ಫ್ ಆಡುವ ಮೂಲಕ ಉದ್ಘಾಟಿಸಿದರು. ಬಲಚಿತ್ರದಲ್ಲಿ ವಿಜೇತರಿಗೆ ಪ್ರಶಸ್ತಿಗಳನ್ನು ವಿತರಿಸುತ್ತಿರುವುದು. ಜೆಡಬ್ಲ್ಯೂಜಿಸಿ ಗೌರವ ಕಾರ್ಯದರ್ಶಿ ಕೆ.ಎಸ್.ಸುಧೀರ್ ಭಟ್, ಜೆಡಬ್ಲ್ಯೂಜಿಸಿ ಪಂದ್ಯಾವಳಿ ಸಮಿತಿ ಅಧ್ಯಕ್ಷ ಫಲ್ಗುಣ ವಿ.ಅರಸ್, ಅಧ್ಯಕ್ಷ ಹೆಚ್.ಎಸ್.ಅರುಣ್‌ಕುಮಾರ್, ಹರ್ಷ ತೊಳಸಿ, ಸುರೇಖಾ ತೊಳಸಿ, ಸಿ.ಹೆಚ್.ಹೃಷಿಕೇಶ್, ಜಯಲಕ್ಷ್ಮೀ (2ನೇ ರನ್ನರ್ ಅಪ್), ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಸ್ನೇಹ ತೊಳಸಿ, ತಿಲಕ್ ತೊಳಸಿ, ಜೆಡಬ್ಲ್ಯೂಜಿಸಿ ಕ್ಯಾಪ್ಟನ್ ಎಂ.ಎಸ್.ಯಶವಂತ್, ಖಜಾಂಚಿ ಡಿ.ವಿ.ಶ್ರೀಧರ್, ರಘುನಾಥ ಮೈಕ್ಕರ, ಪ್ರೇರಣಾ ರಾಧಾಕೃಷ್ಣ (ಪಂದ್ಯಾವಳಿ ವಿಜೇತರು), ನಂದರಾವ್, ವೈ.ಎ.ಪವಮಾನ್ (ರನ್ನರ್ ಅಪ್), ಸಮರ್ಥ ಎಸ್.ಅರಸ್ (ನೀಯರೆಸ್ಟ್ ಟು ಪಿನ್), ರುಚಿಕಾ ದೀಪಕ್, ವಿ.ದೀಪಕ್‌ಕುಮಾರ್ ಜೈನ್ (ಲೀಸ್ಟ್ ನಂಬರ್ ಆಫ್ ಫುಟ್ಸ್) ಚಿತ್ರದಲ್ಲಿದ್ದಾರೆ.

# ದೇಶ - ವಿದೇಶ

## ಬಾಲಾಪರಾಧಿ ಗೃಹದಿಂದ ಮೂವರು ಪಾಕಿಸ್ತಾನಿ ಕೈದಿಗಳು ಪರಾರಿ



**ಶ್ರೀನಗರ:** ಪೊಲೀಸರ ಮೇಲೆಯೇ ಹಲ್ಲೆ ನಡೆಸಿ, ಜಮ್ಮು–ಕಾಶ್ಮೀರದ ಬಾಲಾಪರಾಧಿ ಗೃಹದಿಂದ ಮೂವರು ಪಾಕಿಸ್ತಾನಿ ಕೈದಿಗಳು ಪರಾರಿಯಾಗಿರುವ ಘಟನೆ ನಡೆದಿದೆ.

ಜಮ್ಮುವಿನ ಆರ್‌ಎಸ್ ಪುರದಲ್ಲಿ ರುವ ಜೈಲಿನಲ್ಲಿ ನಿಯೋಜಿಸಲಾಗಿದ್ದ ಪೊಲೀಸರ ಮೇಲೆ ದಾಳಿ ಮಾಡಿ, ಇಬ್ಬರು ಪಾಕಿಸ್ತಾನಿಗಳು ಸೇರಿ ಮೂವರು ಕೈದಿಗಳು ಜೈಲಿಂದ ಓಡಿ ಹೋಗಿದ್ದು, ಘಟನೆಯಲ್ಲಿ ಇಬ್ಬರು ಪೊಲೀಸರು ಗಾಯಗೊಂಡಿದ್ದಾರೆ. ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ನಿವಾಸಿಗಳಾದ ಅಹ್ಸಾನ್ ಅನ್ವರ್ ಮತ್ತು ಮೊಹಮ್ಮದ್ ಸನಾವುಲ್ಲಾ ಮತ್ತು ಜಮ್ಮುವಿನ ನಿವಾಸಿ ಕರಣ್‌ಜಿತ್ ಸಿಂಗ್ ಅಲಿಯಾಸ್ ಗುಗ್ಗಾ ಪರಾರಿಯಾಗಿರುವ ಆರೋಪಿಗಳು. ಘಟನೆಯ ಬಳಿಕ ಪೊಲೀಸ್ ಹಾಗೂ ಅರೆಸೇನಾ ಪಡೆಗಳು, ಕೈದಿಗಳಿಗಾಗಿ ಶೋಧ ಕಾರ್ಯಾಚರಣೆ ಆರಂಭಿಸಿವೆ. ಏತನ್ಮಧ್ಯೆ ಬಾಲಾಪರಾಧಿ ಗೃಹದ ಒಳಗೆ ಕೈದಿಗಳಿಗೆ ಶಸ್ತ್ರಾಸ್ತ್ರಗಳು ಹೇಗೆ ದೊರಕಿದವು ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ. ಭಾರತದಾದ್ಯಂತ 300ಕ್ಕೂ ಹೆಚ್ಚು ಜೈಲುಗಳು ಅವುಗಳ ಸಾಮರ್ಥ್ಯಕ್ಕಿಂತ ಎರಡು ಪಟ್ಟು ಹೆಚ್ಚು ಕಾರ್ಯನಿರ್ವಹಿಸುತ್ತಿವೆ. ಮಲಗುವ ಸ್ಥಳ, ಆರೋಗ್ಯ, ರಕ್ಷಣೆ ಮತ್ತು ಮೇಲ್ವಿಚಾರಣೆಯಂತಹ ಮೂಲಭೂತ ವಿಷಯಗಳು ಸಹ ಕಷ್ಟಕರವಾಗುತ್ತಿವೆ. ದೆಹಲಿಯ ಕೇಂದ್ರ ಜೈಲು ಸಂಖ್ಯೆ 4ರಲ್ಲಿ, 2020ರಿಂದ ಜನದಟ್ಟಣೆ ಸ್ಥಿರವಾಗಿ ಏರಿದೆ. 2023ರಲ್ಲಿ 550% ತಲುಪಿದೆ.

## ಇನ್ಮುಂದೆ ಅಮೆರಿಕಾ ವೀಸಾ ಪಡೆಯುವುದು ಮತ್ತಷ್ಟು ಕ್ಲಿಷ್ಟ



**ವಾಷಿಂಗ್ಟನ್:** ಅಮೆರಿಕಾದಲ್ಲಿ ಹೆಚ್ಚುತ್ತಿರುವ ವಲಸೆ ವಿರೋಧಿ ನೀತಿಗಳಿಂದ ವೀಸಾ ಸಿಗುವುದೇ ಅತ್ಯಂತ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಒಂದು ವೇಳೆ ವೀಸಾ ಸಿಕ್ಕರೂ ಭಯದಲ್ಲೇ ಬದುಕುವ ವಾತವರಣ ಸೃಷ್ಟಿಯಾಗಿದೆ. ಇದಕ್ಕೆ ಮತ್ತಷ್ಟು ಪುಷ್ಟಿ ನೀಡುವಂತೆ ಅಮೆರಿಕಾದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ, ಯುಎಸ್ ವೀಸಾ ಯಾರ ಹಕ್ಕು ಅಲ್ಲ, ಒಂದು ವೇಳೆ ವೀಸಾ ಪಡೆದಿರುವ ವಿದೇಶಿ ಪ್ರಜೆಗಳು ಅಮೆರಿಕಾದ ರಾಷ್ಟ್ರೀಯ ಹಿತಾಸಕ್ತಿಗೆ ಧಕ್ಕೆ ತರುವ ಚಟುವಟಿಕೆಗಳನ್ನು ತೊಡಗಿಸಿಕೊಂಡಿರುವುದು ಕಂಡುಬಂದಲ್ಲಿ ಅಂತವರ ವೀಸಾ ರದ್ದುಗೊಳಿಸುತ್ತೇವೆ ಎಂದು ಎಚ್ಚರಿಕೆ ನೀಡಿದ್ದಾರೆ.

ವೀಸಾ ಕೇವಲ ನಮ್ಮ ದೇಶವನ್ನು ಪ್ರವೇಶಿಸಲು ಸಂದರ್ಶಕರು/ವಿದೇಶಿ ಪ್ರಜೆಗಳಿಗೆ ನಾವು ನೀಡುವ ಅನುಮತಿಯಷ್ಟೇ. ಈ ನೀತಿಯು ವಿದ್ಯಾರ್ಥಿಗಳು, ಪ್ರವಾಸಿಗರು ಮತ್ತು ಪತ್ರಕರ್ತರು ಸೇರಿದಂತೆ ಎಲ್ಲಾ ವರ್ಗದ ತಾತ್ಕಾಲಿಕ ಸಂದರ್ಶಕರಿಗೆ ಅನ್ವಯಿಸುತ್ತದೆ ಎಂದು ಸ್ಪಷ್ಟ ಪಡಿಸಿದ್ದಾರೆ. ಕಳೆದ ತಿಂಗಳು ಮಾರ್ಕೊ ರುಬಿಯೊ ನೇತೃತ್ವದ ಅಮೆರಿಕಾದ ವಿದೇಶಾಂಗ ಇಲಾಖೆ ಅಮೆರಿಕನ್ನರಿಂದ ಸ್ವೀಕಾರಾರ್ಹವಲ್ಲದ ದರದಲ್ಲಿ ಸೇವೆಯ ಲಾಭಗಳನ್ನು ಪಡೆಯುತ್ತಿರುವ ವಿದೇಶಿ ಪ್ರಜೆಗಳನ್ನು ನಿರ್ಬಂಧಿಸಬೇಕು ಎಂದು ಹೇಳಿ ಬರೋಬ್ಬರಿ 75 ದೇಶಗಳ ವೀಸಾ ಅನುಮೋದನೆಯನ್ನು ಸ್ಥಗಿತಗೊಳಿಸಿತ್ತು. ಅಮೆರಿಕಾದಲ್ಲಿರುವ ವಿದೇಶಿ ಪ್ರಜೆಗಳು ಸಣ್ಣ ತಪ್ಪು ನಡೆದರು ವೀಸಾ ರದ್ದಾಗುವ ಆತಂಕದಲ್ಲಿದ್ದಾರೆ.

## ವೆಲ್ಲೂರಲ್ಲಿ 60 ಅಡಿ ಎತ್ತರದ ರಥ ಕುಸಿದು ಭಕ್ತರಿಗೆ ಗಾಯ



**ವೆಲ್ಲೂರು:** ತಮಿಳುನಾಡಿನ ವೆಲ್ಲೂರಿನಲ್ಲಿ ಕಳೆದ ರಾತ್ರಿ ನಡೆದ ಮಯಾನ ಕೊಳ್ಳೈ ಹಬ್ಬದ ವೇಳೆ 60 ಅಡಿ ಎತ್ತರದ ರಥ ಕುಸಿದು ಏಳಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ

ಶಿವರಾತ್ರಿಯ ಮರುದಿನ ನಡೆದ ರಥೋತ್ಸವ ಕಣ್ತುಂಬಿಕೊಳ್ಳಲು ಸಾವಿರಾರು ಭಕ್ತರು ನೆರೆದಿದ್ದರು. ದೇವಿಯ ಮೂರ್ತಿಯನ್ನು ಭವ್ಯವಾದ ರಥ ಅಥವಾ ಪಲ್ಲಕ್ಕಿಯಲ್ಲಿ ಇಟ್ಟು, ಮೆರವಣಿಗೆ ನಡೆಸುವಾಗ ಈ ದುರಂತ ಸಂಭವಿಸಿದೆ. ರಥವು ಅಲಂಕರಿಸಲಾದ ಮರ ಮತ್ತು ಲೋಹದ ಭಾರ ಹೆಚ್ಚಿರುವುದರಿಂದ ಕುಸಿತ ಸಂಭವಿಸಿರಬಹುದು ಎನ್ನಲಾಗಿದೆ. ಸರಿಯಾದ ನಿರ್ವಹಣೆ ಇಲ್ಲದಿದ್ದರೆ ಮಧ್ಯದ ಅಕ್ಷ ಮುರಿಯುವುದು ಅಥವಾ ಚಕ್ರಗಳು ವಾಲುವಿಕೆ ಆಗಬಹುದು. ಇತ್ತೀಚೆಗೆ ರಥಗಳ ಎತ್ತರ 60ರಿಂದ 100 ಅಡಿ ಎತ್ತರವಿರುತ್ತದೆ. ಕೆಳಭಾಗ ಸಣ್ಣದಾಗಿದ್ದು ಮೇಲ್ಭಾಗದಲ್ಲಿ ಹೆಚ್ಚಿನ ಅಲಂಕಾರ ಇರುವುದರಿಂದ ಇಂತಹ ರಥಗಳು ಸಹಜವಾಗಿಯೇ ಅಸ್ಥಿರವಾಗಿರುವ ಸಾಧ್ಯತೆ ಇದೆ ಎನ್ನಲಾಗಿದೆ.

## ಭಾರತದ ಕಡಲ ವಲಯದಲ್ಲಿ ಇರಾನ್ ಟ್ಯಾಂಕರ್ ಹಡಗುಗಳು ವಶ



**ನವದೆಹಲಿ:** ಅಮೆರಿಕದಿಂದ ನಿರ್ಬಂಧಕ್ಕೊಳಗಾಗಿರುವ ಇರಾನ್‌ನ ಟ್ಯಾಂಕರ್ ಹಡಗುಗಳನ್ನು ಭಾರತದ ಕಡಲ ವಲಯದಲ್ಲಿ ವಶಪಡಿಸಿಕೊಳ್ಳಲಾಗಿದೆ

ಭಾರತ ಮತ್ತು ಅಮೆರಿಕ ನಡುವಿನ ಮುಕ್ತ ವ್ಯಾಪಾರ ಒಪ್ಪಂದದ ನಂತರ, ಭಾರತದ ಕಡಲ ವಲಯದಲ್ಲಿ ಅಕ್ರಮ ವ್ಯಾಪಾರವನ್ನು ತಡೆಯಲು ಭಾರಿ ಭದ್ರತೆಯನ್ನು ಕೈಗೊಳ್ಳಲಾಗಿದೆ. ಭಾರತೀಯ ಕಡಲ ರಕ್ಷಣಾ ಪಡೆಯು 55 ಹಡಗು, 10ರಿಂದ 12 ವಿಮಾನಗಳನ್ನು ಕಣ್ಗಾವಲಿಗೆ ಬಳಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಇತ್ತೀಚೆಗೆ ಅಮೆರಿಕವು ಭಾರತದಿಂದ ರಫ್ತಾಗುವ ವಸ್ತುಗಳ ಮೇಲಿನ ಸುಂಕವನ್ನು ಶೇ.50 ರಿಂದ ಶೇ.18ಕ್ಕೆ ಇಳಿಸಿತ್ತು. ಇದರ ಬೆನ್ನಲ್ಲೇ ಮುಂಬೈನಿಂದ ನೂರು ನಾಟಿಕಲ್ ಮೈಲಿ ದೂರದಲ್ಲಿ ಭಾರತದ ಕಡಲ ವಲಯದೊಳಗೆ ಅನುಮಾನಸ್ಪದ ಘಟನೆಯ ಹಿನ್ನಲೆಯಲ್ಲಿ ಟ್ಯಾಂಕರ್ ಹಡಗುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಫೆ.6ರಂದು ಭಾರತೀಯ ಅಧಿಕಾರಿಗಳು ಪೋಸ್ಟ್ ಮಾಡಿದ್ದರು. ಆದರೆ, ನಂತರ ಅದನ್ನು ಡಿಲೀಟ್ ಮಾಡಲಾಗಿತ್ತು.

ಟ್ಯಾಂಕರ್ ಹಡಗುಗಳನ್ನು ಸ್ಟೆಲ್ಲರ್ ರೂಬಿ, ಆಸ್ಫಾಲ್ಟ್ ಸ್ಟಾರ್ ಹಾಗೂ ಅಲ್ ಜಾಫ್ಜಿಯಾ ಎಂದು ಗುರುತಿಸಲಾಗಿದ್ದು, ಈ ಹಡಗುಗಳು ತಮ್ಮ ಗುರುತನ್ನು ಮರೆಮಾಚಿಕೊಂಡು, ಕಾನೂನುಗಳನ್ನು ಉಲ್ಲಂಘಿಸಿ ಕಡಲನ್ನು ಅಕ್ರಮ ಪ್ರವೇಶ ಮಾಡುವ ಪ್ರಯತ್ನ ಮಾಡುತ್ತಿದ್ದವು ಎಂದು ಹೇಳಲಾಗಿದೆ

## ಪ್ರೇಯಸಿ ಕೊಂದು ಆಕೆ ಆತ್ಮದೊಂದಿಗೆ ಮಾತನಾಡಲೆತ್ನಿಸಿದ ಪಾಗಲ್ ಪ್ರೇಮಿ



**ಮಧ್ಯಪ್ರದೇಶ:** ಇಂದೋರ್‌ನಲ್ಲಿ ಎಂಬಿಎ ವಿದ್ಯಾರ್ಥಿನಿಯನ್ನು ಭೀಕರವಾಗಿ ಕೊಲೆಗೈದ ಪಾಗಲ್ ಪ್ರೇಮಿ, ಕೊಂದ ನಂತರವೂ ಆಕೆಯ ದೇಹವನ್ನು ಹಿಂಸಿಸಿರುವುದು ಪೊಲೀಸರ ತನಿಖೆಯಲ್ಲಿ ಬಯಲಾಗಿದೆ.

ಮನೆಯೊಂದರಲ್ಲಿ ಫೆ.13ರಂದು ಇಂದೋರ್‌ನ ಪ್ರತಿಷ್ಠಿತ ಕಾಲೇಜಿನ ಎಂಬಿಎ ವಿದ್ಯಾರ್ಥಿನಿಯ ಶವ ವಿವಸ್ತ್ರವಾಗಿ ಪತ್ತೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಥಳೀಯರು ನೀಡಿದ ದೂರಿನ ಮೇರೆಗೆ ತನಿಖೆ ಆರಂಭಿಸಿದ ಪೊಲೀಸರು, ಸಿಸಿಟಿವಿ ಕ್ಯಾಮರಾಗಳನ್ನು ಪರಿಶೀಲಿಸಿದ ಬಳಿಕ ಆಕೆಯ ಪ್ರಿಯಕರ ಪಿಯೂಷ್ ಧಮ್ನೋಟಿಯಾ ಹತ್ಯೆ ಆರೋಪಿ ಎಂಬುದು ಸ್ಪಷ್ಟವಾಗಿದೆ. ಬಳಿಕ ಆರೋಪಿಯನ್ನು ಬಂಧಿಸಿ ತನಿಖೆಗೆ ಒಳಪಡಿಸಿದಾಗ ಬೆಚ್ಚಿಬೀಳಿಸುವ ಹಲವು ಸಂಗತಿಗಳನ್ನು ಬಾಯ್ಬಿಟ್ಟಿದ್ದಾನೆ. ಯುವತಿಯನ್ನು ಕೊಂದ ಬಳಿಕ ವಿವಸ್ತ್ರಗೊಳಿಸಿ, ಯೂಟ್ಯೂಬ್ ವಿಡಿಯೋಗಳನ್ನು ನೋಡಿ, ಮಾಟ–ಮಂತ್ರದ ಮೂಲಕ ಆಕೆಯ ಆತ್ಮವನ್ನು ಕರೆಸಲು ಯತ್ನಿಸಿದ್ದಾನೆ. ಕತ್ತಲೆ ಕೋಣೆಯಲ್ಲಿ ಮೃತದೇಹವನ್ನಿಟ್ಟು ಕ್ಷಮೆ ಕೇಳುತ್ತ ಮಂತ್ರ ಪಠಿಸಿ, ಅವಳ ಆತ್ಮದ ಜೊತೆಗೆ ಮಾತನಾಡಲು ಪ್ರಯತ್ನಿಸಿದ್ದಾಗಿ ತಿಳಿಸಿದ್ದಾನೆ. ದೈಹಿಕ ಸಂಪರ್ಕಕ್ಕೆ ಒಪ್ಪದ ಕಾರಣಕ್ಕೆ ಆಕೆಯ ಕೈ–ಕಾಲು, ಕಣ್ಣನ್ನು ಕಟ್ಟಿ, ಸೊಂಟದ ಮೇಲೆ ಕುಳಿತು ಎದೆಗೆ ಬಲವಾಗಿ ಚಾಕು ಇರಿದು ಹತ್ಯೆ ಮಾಡಿ, ನಂತರ ಆಕೆಯ ಆತ್ಮದೊಂದಿಗೆ ಮಾತನಾಡುವ ಹುಚ್ಚುತನ ತೋರಿದ್ದನೆಂದು ತನಿಖೆಯಲ್ಲಿ ತಿಳಿದುಬಂದಿದೆ.

ಮೈಸೂರು ಮಿತ್ರ ಬುಧವಾರ 18 ಫೆಬ್ರವರಿ 2026

# ಫೆ.24, ಸುಳ್ಯದಲ್ಲಿ ಅರೆಭಾಷೆ ರಾಷ್ಟ್ರೀಯ ವಿಚಾರ ಸಂಕಿರಣ

ನಾಪೋಕ್ಲು, ಫೆ.17 (ದುಗ್ಗಳ)– ಅರೆಭಾಷೆ ರಾಷ್ಟ್ರೀಯ ವಿಚಾರ ಸಂಕಿರಣವು ಫೆ.24 ರಂದು ಸುಳ್ಯದ ನೆಹರು ಮೆಮೋರಿಯಲ್ ಕಾಲೇಜಿನ ಕೆ.ವಿ.ಜಿ ಸಾಹಿತ್ಯ ಭವನ ರಂಗಮಂದಿರದಲ್ಲಿ ಜರುಗಲಿದೆ ಎಂದು ಅಕಾಡೆಮಿಯ ಅಧ್ಯಕ್ಷ ಸದಾನಂದ ಮಾವಜಿ ತಿಳಿಸಿದ್ದಾರೆ.

ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ ಅಧ್ಯಕ್ಷತೆಯಲ್ಲಿ ಜರುಗಲಿರುವ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಅಕಾಡೆಮಿ ಆಫ್ ಲಿಬರಲ್ ಎಜುಕೇಶನ್ ಅಧ್ಯಕ್ಷ ಡಾ. ಕೆ.ವಿ. ಚಿದಾನಂದ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಎ.ಓಎಲ್.ಇ(ರಿ.) ಪ್ರಧಾನ ಕಾರ್ಯದರ್ಶಿ ಕೆ.ಸಿ.ಅಕ್ಷಯ್, ನೆಹರೂ ಮೆಮೋರಿಯಲ್ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ಎಂ.ರುದ್ರಕುಮಾರ್, ಮಿಥಾಲಿ ರೈ ಪಿ., ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಕೆ.ಟಿ. ವಿಶ್ವನಾಥ ರವರು ಉಪಸ್ಥಿತರಿರುತ್ತಾರೆ.

ಪ್ರಥಮ ಅಧಿವೇಶನದ ಭಾಷಾ ವಿಚಾರ ಸಂಕಿರಣದಲ್ಲಿ ಪ್ರಾದೇಶಿಕ ಭಾಷೆಗಳು ಎದುರಿಸುತ್ತಿರುವ ಸವಾಲುಗಳು ಎಂಬ ವಿಷಯದ ಬಗ್ಗೆ ಡಾ. ಧನಂಜಯ ಕುಂಬ್ಳೆ ಹಾಗೂ ಜಾಗತೀಕರಣ ಮತ್ತು ಸಾಂಸ್ಕೃತಿಕ ಪಲ್ಲಟಗಳು ಎಂಬ ವಿಷಯದ ಬಗ್ಗೆ ಡಾ. ನರೇಂದ್ರ ರೈ ದೇರ್ಲ ಇವರು ಪ್ರಬಂಧ ಮಂಡಿಸಲಿದ್ದಾರೆ. ಗೋಷ್ಠಿಯ ಅಧ್ಯಕ್ಷತೆಯನ್ನು ವಿಶ್ರಾಂತ ಕುಲಪತಿ ಡಾ. ಕೆ.ಚಿನ್ನಪ್ಪ ಗೌಡ ವಹಿಸುವರು.

ದ್ವಿತೀಯ ಅಧಿವೇಶನದಲ್ಲಿ ಅರೆಭಾಷೆ ವಿಚಾರ ಸಂಕಿರಣ ನಡೆಯಲಿದೆ. ಅರೆಭಾಷೆಯ ಅನನ್ಯತೆ ಎಂಬ ವಿಷಯದ ಬಗ್ಗೆ ಕೆ.ಆರ್.ಗಂಗಾಧರ ಹಾಗೂ ಅರೆ ಭಾಷೆಯ ಪ್ರಾದೇಶಿಕ ವಿಭಿನ್ನತೆಗೆ ವಿಷಯದ ಕುರಿತು ಡಾ.ಪುರುಷೋತ್ತಮ ಕರಂಗಲ್ಲು ಮಾತನಾಡಲಿದ್ದಾರೆ. ಗೋಷ್ಠಿಯ ಅಧ್ಯಕ್ಷತೆಯನ್ನು ಬೆಂಗಳೂರಿನ ಸಾಹಿತಿ ಪ್ರೊ.ಕೆ.ಇ.ರಾಧಾಕೃಷ್ಣ ವಹಿಸಲಿದ್ದಾರೆ.

ಎರಡನೇ ದಿನ ಅರೆಭಾಷೆ ಸಂಸ್ಕೃತಿ ವಿಚಾರ ಸಂಕಿರಣ ನಡೆಯಲಿದೆ. ಅರೆಭಾಷೆನ ಮೊದ್ದೆ ಪದ್ಧತಿಗಳಲ್ಲಿ ಬದಲಾವಣೆ ಎಂಬ ವಿಷಯದ ಕುರಿತು ಶ್ರೀ ದೊಡ್ಡಣ ಬರೆ ಮೇಲು, ಸಿದ್ದವೇಶ–ಅರೆಭಾಷಿಕರ ಜಾನಪದ ನೃತ್ಯ ಎಂಬ ವಿಷಯದ ಬಗ್ಗೆ ಜಯಪ್ರಕಾಶ ಕುಕ್ಕೆಟ್ಟಿ, ಅರೆಭಾಷಿಕರ ದೈವ ರಾಧಾನೆ ಬಗ್ಗೆ ಡಾ.ಕರುಣಾಕರ ನಿಡಿಂಜಿ ಹಾಗೂ ಕೊಡಗಿನ ಅರೆಭಾಷಿಕರ ಹಬ್ಬ ಹರಿದಿನಗಳ ಬಗ್ಗೆ ಡಾ.ದಯಾನಂದ ಕೂಡಕಂಡಿ ಉಪನ್ಯಾಸ ನೀಡಲಿದ್ದಾರೆ. ಗೋಷ್ಠಿಯ ಅಧ್ಯಕ್ಷತೆಯನ್ನು ಖ್ಯಾತ ವಾಗ್ಮಿ ಪಟ್ಟಡ ಶಿವಕುಮಾರ್ ವಹಿಸಲಿದ್ದಾರೆ. ಪದವಿ ಕಾಲೇಜಿನ ಉಪನ್ಯಾಸಕರಿಗೆ ಓಓಡಿ ಸೌಲಭ್ಯವನ್ನು ನೀಡಲಾಗಿದೆ. ಕಾರ್ಯಕ್ರಮದ ಸದಸ್ಯ ಸಂಚಾಲಕರಾಗಿ ಚಂದ್ರಶೇಖರ ಪೇರಾಲ್ ಕೆಲಸ ನಿರ್ವಹಿಸಲಿದ್ದಾರೆ ಎಂದು ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಲಂಚ ಪಡೆಯುವಾಗ ಸಿಕ್ಕಿಬಿದ್ದ ಪಿಡಬ್ಲ್ಯೂಡಿ ನೌಕರ



ಶರತ್



ನೌಕರನ ಮನೆಯಲ್ಲಿ ಲೋಕಾಯುಕ್ತ ಅಧಿಕಾರಿಗಳು ತಪಾಸಣೆ ನಡೆಸಿದರು.

**ಕುಶಾಲನಗರ:** ಗುತ್ತಿಗೆದಾರನಿಗೆ ಪರವಾನಿಗೆ ನೀಡಲು ಲೋಕೋಪಯೋಗಿ ಇಲಾಖೆ ಕಚೇರಿಯ ನೌಕರನೊಬ್ಬ ಲಂಚ ಪಡೆಯುತ್ತಿದ್ದ ಸಂದರ್ಭದಲ್ಲೇ ಲೋಕಾಯುಕ್ತ ಅಧಿಕಾರಿಗಳ ಬಲೆಗೆ ಸಿಕ್ಕಿಬಿದ್ದಿದ್ದು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಮಡಿಕೇರಿಯ ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಅಭಿಯಂತರ ಕಚೇರಿಯಲ್ಲಿ ಡಿ ಗ್ರೂಪ್ ನೌಕರ ಶರತ್ ಎಂಬಾತ ಕುಶಾಲನಗರ ಸಮೀಪ ವೀರಭೂಮಿ ಬಳಿ ತನ್ನ ಮನೆಯಲ್ಲಿ ರಾಘವೇಂದ್ರ ಎಂಬವರಿಂದ 10 ಸಾವಿರ ರೂಪಾಯಿ ಲಂಚ ಪಡೆಯುತ್ತಿದ್ದ ಸಂದರ್ಭದಲ್ಲೇ ಸಿಕ್ಕಿಬಿದ್ದಿದ್ದಾನೆ. ಗುತ್ತಿಗೆದಾರ ಲೈಸೆನ್ಸ್ ನೀಡಲು ತನಗೆ 10 ಸಾವಿರ ಮತ್ತು ತನ್ನ ಕಚೇರಿಯಲ್ಲಿ ರೂ. 4 ಸಾವಿರ ಸೇರಿದಂತೆ ಒಟ್ಟು 14 ಸಾವಿರ ರೂಗಳಿಗೆ ಬೇಡಿಕೆ ಇಟ್ಟಿದ್ದ ಶರತ್ 10 ಸಾವಿರ ರೂ.ಗಳನ್ನು ಪಡೆಯುತ್ತಿದ್ದ ಸಂದರ್ಭ ಲೋಕಾಯುಕ್ತ ಅಧಿಕಾರಿಗಳು ಬಲೆ ಬೀಸಿದ್ದಾರೆ. ಲೋಕಾಯುಕ್ತ ಎಸ್ಪಿ ಉದೇಶ್ ಮಾರ್ಗದರ್ಶನದಲ್ಲಿ ಡಿವೈಎಸ್‌ಪಿ ದಿನಕರ ಶೆಟ್ಟಿ ನೇತೃತ್ವದಲ್ಲಿ ಇನ್ಸ್‌ಪೆಕ್ಟರ್ ವೀಣಾ ನಾಯಕ್ ಮತ್ತು ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

# ಕಾಂಗ್ರೆಸ್ ಸರ್ಕಾರ ಕೇವಲ ಪ್ರಚಾರಕಷ್ಟೇ ಸೀಮಿತ

ಮಡಿಕೇರಿ,ಫೆ.17–ರಾಜ್ಯದ ಕಾಂಗ್ರೆಸ್ ನೇತೃತ್ವದ ಆಡಳಿತ ಕೇವಲ ಪ್ರಚಾರಕಷ್ಟೇ ಸೀಮಿತವಾಗಿದ್ದು, ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ. ಕೊಡಗಿನಲ್ಲಿ ಭ್ರಷ್ಟಾಚಾರವನ್ನು ನಿಯಂತ್ರಿಸುವಲ್ಲಿ ಶಾಸಕರು ಸಂಪೂರ್ಣವಾಗಿ ವಿಫಲರಾಗಿದ್ದಾರೆ ಎಂದು ಬಿಜೆಪಿ ಮಂಡಲದ ವಕ್ತಾರ ಚೆಪ್ಪುಡಿರ ರಾಕೇಶ್ ದೇವಯ್ಯ ಆರೋಪಿ ಸಿದ್ದಾರೆ.

ಅಭಿವೃದ್ಧಿ ಕಾರ್ಯಗಳ ಕುರಿತು ಸರಕಾರ ಹಾಗೂ ಶಾಸಕರು ಸುಳ್ಳು ಹೇಳುತ್ತಾ ಕಾಲಾಹರಣ ಮಾಡುತ್ತಿದ್ದಾರೆ. ಹಗರಣಗಳಲ್ಲಿ ಮುಳುಗಿರುವ ಸರಕಾರದ ಬಣ್ಣವನ್ನು ಇತ್ತೀಚೆಗೆ ಗುತ್ತಿಗೆದಾರರ ಸಂಘ ಬಯಲು ಮಾಡಿದ್ದು, ಭ್ರಷ್ಟಾಚಾರದ ಪ್ರಮಾಣ ಹೆಚ್ಚಾಗಿರುವ ಕುರಿತು ಆರೋಪ ಮಾಡಿದೆ. ಪೂರ್ಣಗೊಂಡ ಕಾಮಗಾರಿಗಳ ಹಣವನ್ನು ಗುತ್ತಿಗೆದಾರರಿಗೆ ನೀಡಲಾಗದೆ ಪರದಾಡುತ್ತಿರುವ ಸರಕಾರ ಅಭಿವೃದ್ಧಿ ವಿಚಾರದಲ್ಲಿ ಸುಳ್ಳು ಪ್ರಚಾರ ಮಾಡಿ ಜನರ ಹಾದಿ ತಪ್ಪಿಸುತ್ತಿದೆ ಎಂದು ಟೀಕಿಸಿದ್ದಾರೆ.

ಪೊನ್ನಂಪೇಟೆ ಮತ್ತು ವಿರಾಜಪೇಟೆ ತಾಲೂಕಿನ ಸರಕಾರಿ ಕಚೇರಿಗಳಲ್ಲಿ ಭ್ರಷ್ಟಾಚಾರ ರಾಜಾರೋಷವಾಗಿ ನಡೆಯುತ್ತಿದೆ, ಅರ್ಜಿ ವಿಲೇವಾರಿಯಾಗುತ್ತಿಲ್ಲವೆಂದು ಜನ ಅಳಲು ತೋಡಿಕೊಂಡರು ಯಾವುದೇ ಪ್ರಯೋಜನವಾಗುತ್ತಿಲ್ಲ. ಭ್ರಷ್ಟಾಚಾರವನ್ನು ನಿಯಂತ್ರಿಸುವಲ್ಲಿ ಶಾಸಕರು ವಿಫಲರಾಗಿದ್ದಾರೆ, ಕ್ಷೇತ್ರದಲ್ಲಿ ನಿರ್ಮಾಣಗೊಂಡಿರುವ ಹಲವು ರಸ್ತೆಗಳು ಕಳಪೆ ಗುಣಮಟ್ಟದಿಂದ ಕೂಡಿದೆ. ಕಳಪೆ ಕಾಮಗಾರಿ ಭ್ರಷ್ಟಾಚಾರದ ಒಂದು ಭಾಗವಾಗಿದೆ ಎಂದು ರಾಕೇಶ್ ದೇವಯ್ಯ ಆರೋಪಿಸಿದ್ದಾರೆ.

# ಅಂಗಾಳ ಪರಮೇಶ್ವರಿ ದೇವಾಲಯದ ವಾರ್ಷಿಕ ಉತ್ಸವ ಸಂಪನ್ನ



ಅಂಗಾಳ ಪರಮೇಶ್ವರಿ ದೇವಾಲಯದ ಉತ್ಸವ ಮೂರ್ತಿ ಮೆರವಣಿಗೆ ಸೋಮವಾರ ನಡೆಯಿತು.

ವಿರಾಜಪೇಟೆ, ಫೆ.17–ಪಟ್ಟಣದ ತೆಲುಗರ ಬೀದಿಯ ಅಂಗಾಳ ಪರಮೇಶ್ವರಿ ದೇವಾಲಯದ ನಾಲ್ಕು ದಿನಗಳ ವಾರ್ಷಿಕ ಉತ್ಸವವು ಶ್ರದ್ಧಾಭಕ್ತಿಯಿಂದ ಮುಕ್ತಾಯ ಗೊಂಡಿತು.

ಫೆ.13ರಂದು ದೇವಾಲಯದ ವಾರ್ಷಿಕ ಉತ್ಸವಕ್ಕೆ ಚಾಲನೆ ನೀಡಲಾಗಿತ್ತು. ಉತ್ಸವದ 2ನೇ ದಿನದಂದು ದೇವಾಲಯದ ರಕ್ಷಕ ದೈವಗಳಿಗೆ ಪೂಜೆಯನ್ನು ಸಮರ್ಪಿಸಲಾಯಿತು. ಉತ್ಸವ ಪ್ರಮುಖ ದಿನವಾದ 3ನೇ ದಿನದಂದು ದೇವಿಗೆ ಕಾಲಗಳ ಮಹಾಪೂಜೆಯನ್ನು ನೆರವೇರಿಸಲಾಯಿತು. ಈ ಸಂದರ್ಭ ಸುಗಂಧ ದ್ರವ್ಯ, ಪುಷ್ಪಾರ್ಚನೆ ಹಾಗೂ ವಿವಿಧ ಅಭಿಷೇಕ ಸೇರಿದಂತೆ ಧಾರ್ಮಿಕ ವಿಧಿವಿಧಾನವನ್ನು ನೆರವೇರಿಸಲಾಯಿತು.

ಉತ್ಸವದ ಕೊನೆಯ ದಿನದಂದು ಮಹಾಪೂಜೆಯ ಬಳಿಕ ಪಟ್ಟಣದ ಮುಖ್ಯರಸ್ತೆಯಲ್ಲಿ ದೇವಿಯ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿರಿಸಿ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯು ಪಟ್ಟಣದ ಮಲಬಾರ್ ರಸ್ತೆಯಲ್ಲಿನ ಕಂಚಿ ಕಾಮಾಕ್ಷಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ ದೇವಾಲಯಕ್ಕೆ ಹಿಂದಿರುಗಿತು. ಮೆರವಣಿಗೆಯಲ್ಲಿ ವಿವಿಧ ದೇವರ ಪ್ರತಿರೂಪಗಳೊಂದಿಗೆ, ಚಂಡೆಮೇಳ, ವಿವಿಧ ಧಾನ್ಯಗಳ ಸಸಿಗಳನ್ನು ಹೊತ್ತ ಮಹಿಳೆಯರು ಮೆರವಣಿಗೆಯಲ್ಲಿ ಗಮನ ಸೆಳೆದರು. ಉತ್ಸವದ ಅಂಗವಾಗಿ ದೇವಾಲಯದಲ್ಲಿ ಅನ್ನ ಸಂತರ್ಪಣೆಯನ್ನು ನಡೆಸಲಾಯಿತು. ಈ ಸಂದರ್ಭ ದೇವಾಲಯದ ಆಡಳಿತ ಮಂಡಳಿ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಪೋಲೀಸರ ತಪಾಸಣೆ ತಪ್ಪಿಸಲೆತ್ನಿಸಲು ಹೋಗಿ

# ಗೂಡ್ಸ್ ವಾಹನಕ್ಕೆ ಬೈಕ್ ಡಿಕ್ಕಿ: ಸವಾರನ ಸಾವು; ಪತ್ನಿಗೆ ತೀವ್ರ ಗಾಯ



ಕುಶಾಲನಗರ, ಫೆ.17–ಸಮೀಪದ ಕೂಡುಮಂಗಳೂರು ಗ್ರಾಮದ ದೊಡ್ಡಮ್ಮ ತಾಯಿ ದೇವಾಲಯ ಮುಂಭಾಗ ಗೂಡ್ಸ್ ವಾಹನಕ್ಕೆ ಬೈಕ್ ಡಿಕ್ಕಿಯಾಗಿ ಸವಾರ ಮೃತಪಟ್ಟ ಘಟನೆ ಮಂಗಳವಾರ ರಾತ್ರಿ ನಡೆದಿದೆ.

ಹೆಬ್ಬಾಲೆ ಪಂಚಾಯಿತಿ ವ್ಯಾಪ್ತಿಯ ಮರೂರು ಗ್ರಾಮದ ನಟೇಶ್ (31) ಮೃತ ದುರ್ದೈವಿ. ಹಿಂಬದಿ ಸವಾರರಾಗಿದ್ದ ಮೃತರ ಪತ್ನಿ ದಿವ್ಯ (30) ಅವರ ಎಡಗಾಲು ಮುರಿದು ತೀವ್ರ ಗಾಯಕ್ಕೊಳಗಾಗಿದ್ದಾರೆ.

ಕೂಡ್ಲೂರು ಸಂಚಾರಿ ಪೊಲೀಸ್ ಠಾಣೆ ಬಳಿ ಪೊಲೀಸರು ತಪಾಸಣೆ ನಡೆಸುತ್ತಿದ್ದರು. ಪೊಲೀಸರಿಂದ ತಪ್ಪಿಸಿಕೊಳ್ಳಲು ನಟೇಶ್ ಬೈಕ್ ಹಿಂದಕ್ಕೆ ತಿರುಗಿಸಿದಾಗ ಹಿಂಬದಿಯಿಂದ ಬರುತ್ತಿದ್ದ ಅಶೋಕ್ ಲೈಲಾಂಡ್ ಗೂಡ್ಸ್ ವಾಹನ ಡಿಕ್ಕಿಯಾಗಿದೆ. ಕೂಡಲೆ ಗಾಯಾಳುಗಳನ್ನು ಇಲ್ಲಿನ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ತಲೆಗೆ ಗಂಭೀರ ಗಾಯಗೊಂಡಿದ್ದ ನಟೇಶ್ ರಕ್ತಸ್ರಾವದಿಂದ ಮೃತಪಟ್ಟಿದ್ದಾರೆ.

ಪೊಲೀಸ್ ಠಾಣೆ ಮುಂಭಾಗ ಪೊಲೀಸರನ್ನು ಗಮನಿಸಿದ ಸವಾರ ಬೈಕ್ ವಾಪಸ್ ತಿರುಗಿಸಿದ ಸಂದರ್ಭ ಹಿಂದಿನಿಂದ ಗೂಡ್ಸ್ ವಾಹನ ಡಿಕ್ಕಿ ಹೊಡೆದಿದೆ ಎಂದು ಗಾಯಾಳುಗಳನ್ನು ಆಸ್ಪತ್ರೆಗೆ ಕರೆದೊಯ್ದಿದ್ದ ಜಬೀವುಲ್ಲಾ, ದಾವುದ್ ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಸಂಚಾರಿ ಪೊಲೀಸರು ವಾಹನಗಳನ್ನು ವಶಕ್ಕೆ ತೆಗೆದುಕೊಂಡು, ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

# ಅಜ್ಜ-ಅಜ್ಜಿಯರ ದಿನವನ್ನು ಸಂಭ್ರಮದಲ್ಲಿ ಆಚರಿಸಿದ ಚಿಣ್ಣರು




ಕೊಡಗು ವಿದ್ಯಾಲಯದ ಪ್ಲೇ ಹೋಂ ಪುಟಾಣಿಗಳು ಅಜ್ಜ–ಅಜ್ಜಿಯರ ದಿನವನ್ನು ಸಂಭ್ರಮದಿಂದ ಆಚರಿಸಿದರು

ಮಡಿಕೇರಿ, ಫೆ.17–ಕೊಡಗು ವಿದ್ಯಾಲಯದ ಪ್ಲೇ ಹೋಂ, ಎಲ್‌ಕೆಜಿ ಹಾಗೂ ಯುಕೆಜಿ ಮಕ್ಕಳ ವತಿಯಿಂದ ಅಜ್ಜ–ಅಜ್ಜಿಯರ ದಿನವನ್ನು ಸಂಭ್ರಮದಿಂದ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಕೊಡಗು ಹೋಂಸ್ಟೇ ಅಸೋಸಿಯೇಷನ್ ಅಧ್ಯಕ್ಷ ಮೊಂತಿ ಗಣೇಶ್ ಮಾತನಾಡಿ, ಮಕ್ಕಳ ಜೀವನದಲ್ಲಿ ಅಜ್ಜ–ಅಜ್ಜಿಯರ ಮಹತ್ವವನ್ನು ವಿವರಿಸಿದರು. ಕುಟುಂಬದ ಮೌಲ್ಯಗಳನ್ನು ಬೆಳೆಸುವಲ್ಲಿ ಹಿರಿಯರ ಪಾತ್ರ ಅತ್ಯಂತ ಮುಖ್ಯ ಎಂದು ತಿಳಿಸಿದರು.

ಪುಟಾಣಿ ಮಕ್ಕಳು ಮನಮುಟ್ಟುವ ನೃತ್ಯ ಪ್ರದರ್ಶನ ನೀಡಿ ಮೆಚ್ಚುಗೆ ಗಳಿಸಿದರು. ವಿಶೇಷ ಆಕರ್ಷಣೆಯಾಗಿ ಮೊಮ್ಮಕ್ಕಳು ತಮ್ಮ ಅಜ್ಜ–ಅಜ್ಜಿಯರೊಂದಿಗೆ ಸೇರಿ ಕೈ ಗುರುತು ಚಟುವಟಿಕೆಯಲ್ಲಿ ಭಾಗವಹಿಸಿ ಸ್ಮರಣೀಯ ಕ್ಷಣಗಳನ್ನು ರೂಪಿಸಿದರು. ಈ ಕಾರ್ಯಕ್ರಮವು ಮಕ್ಕಳಿಗೆ ಮತ್ತು ಅಜ್ಜ–ಅಜ್ಜಿಯರಿಗೆ ಆತ್ಮೀಯತೆ, ಸಂತೋಷ ಮತ್ತು ಸಂಸ್ಕಾರದ ಸಂದೇಶವನ್ನು ನೀಡಿದ ಸ್ಮರಣೀಯ ದಿನವಾಗಿ ಉಳಿಯಿತು.

ಕೊಡಗು ವಿದ್ಯಾಲಯದ ಪ್ರಾಂಶುಪಾಲೆ ಕೆ.ಎಸ್.ಸುಮಿತ್ರ ಆಡಳಿತ ನಿರ್ವಹಣಾಧಿಕಾರಿ ಪಿ.ರವಿ. ಸಂಯೋಜಕಿ ಕೆ. ಭಾರತಿ ಶಿಕ್ಷಕ, ಶಿಕ್ಷಕಿಯರು, ಸಿಬ್ಬಂದಿ ವರ್ಗದವರು ಪೋಷಕರು ಉಪಸ್ಥಿತರಿದ್ದರು.

## ಅರ್ಜಿ ಆಹ್ವಾನ

ಮಡಿಕೇರಿ, ಫೆ.17–ಜಿಲ್ಲೆಯಲ್ಲಿ ಸಾರ್ವಜನಿಕರಿಗೆ ಒಂದೇ ಸೂರಿನಡಿಯಲ್ಲಿ ಎಲ್ಲಾ ಇಲಾಖೆಗಳ ಆಯ್ದ ಸರ್ಕಾರದ ಸೇವೆಗಳನ್ನು ನಗರ ಸ್ಥಳೀಯ ಸಂಸ್ಥೆಯ ಭಾಗದ ನಾಗರಿಕರಿಗೆ ನೀಡುವ ಸದುದ್ದೇಶದಿಂದ ಕರ್ನಾಟಕ ಒನ್ ಕೇಂದ್ರಗಳನ್ನು ಸ್ಥಾಪಿಸಲು ಆಸಕ್ತ ಫ್ರಾಂಚೈಸಿಗಳಿಂದ ಮರು ಅರ್ಜಿ ಆಹ್ವಾನಿಸಲಾಗಿದೆ. ಪ್ರಸ್ತುತ ಕುಶಾಲನಗರ(ಟಿಎಂಸಿ), ಮಡಿಕೇರಿ(ಸಿಎಂಸಿ) ಮತ್ತು ಪೊನ್ನಂಪೇಟೆ (ಟಿಪಿ) ಈ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕೇಂದ್ರವನ್ನು ತೆರೆಯಲು ಇಡಿಸಿಎಸ್ ನಿರ್ದೇಶನಾಲಯದಿಂದ ಅವಕಾಶ ಕಲ್ಪಿಸಿರುತ್ತಾರೆ.

## ತಮ್ಮಯ್ಯ ಚಾಮಿ ನಿಧನ



ನಾಪೋಕ್ಲು, ಫೆ.17–ಸಮೀಪದ ಕಕ್ಕಬ್ಬೆ ಕುಂಜಿಲ ಗ್ರಾಮದ ನಿವಾಸಿ ಕೋಲೆಯಂಡ ತಮ್ಮಯ್ಯ ಚಾಮಿ(85) ಮಂಗಳವಾರ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು, ಪುತ್ರಿಯನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಮಂಗಳವಾರ ಕುಂಜಿಲ ಗ್ರಾಮದಲ್ಲಿ ಜರುಗಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಗುಂಡ್ಲುಪೇಟೆಯಲ್ಲಿ ಆಡಳಿತ ವ್ಯವಸ್ಥೆ ಸಂಪೂರ್ಣ ಕುಸಿತ

## ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನಕುಮಾರ್ ಆರೋಪ



ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನಕುಮಾರ್ ಮಾತನಾಡಿದರು.

ಗುಂಡ್ಲುಪೇಟೆ, ಫೆ.17(ಸೋಮ್.ಜಿ)– ತಾಲೂಕಿನಲ್ಲಿ ಆಡಳಿತ ವ್ಯವಸ್ಥೆ ಸಂಪೂರ್ಣ ಕುಸಿದಿದ್ದು, ಆಡಳಿತ ನಿರ್ವಹಿಸುವಲ್ಲಿ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಅಸಮರ್ಥರಾಗಿದ್ದಾರೆ ಎಂದು ಮಾಜಿ ಶಾಸಕರೂ ಆದ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್. ನಿರಂಜನಕುಮಾರ್ ಆರೋಪಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕರು ಅಧಿಕಾರಿಗಳ ಮೇಲೆ ನಿಯಂತ್ರಣ ಕಳೆದುಕೊಂಡಿದ್ದಾರೆ. ತಾಲೂಕು ಕಚೇರಿಯಲ್ಲಿ ಜನಸಾಮಾನ್ಯರು ಕೆಲಸ ಕಾರ್ಯಗಳಿಗೆ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದ್ದು, ತಹಸೀಲ್ದಾರ್ ಮತ್ತು ಕಂದಾಯ ಇಲಾಖೆ ಅಧಿಕಾರಿಗಳು ಜನರ ಕೈಗೆ ಸಿಗುತ್ತಿಲ್ಲ ಎಂದು ಕಿಡಿಕಾರಿದರು.

ತಾಲೂಕಿನಲ್ಲಿ ಆಂಬುಲೆನ್ಸ್ ಮತ್ತು ವೈದ್ಯರ ಕೊರತೆ ಇದೆ. ಕಳೆದ 2 ದಿನಗಳ ಹಿಂದೆ ಬೇಗೂರು ಬಳಿ ಅಪಘಾತ ಸಂಭವಿಸಿ ಸಮಯಕ್ಕೆ ಸರಿಯಾಗಿ ಆಂಬುಲೆನ್ಸ್ ಬಾರದೇ ಮೂವರು ಸಾವನ್ನಪ್ಪಿದ್ದರು. ಹೋಬಳಿಗೊಂದು ಆಂಬುಲೆನ್ಸ್ ಇರಬೇಕು ಎಂಬ ನಿಯಮವಿದೆ. ಆದರೇ ಇಡೀ ತಾಲೂಕಿಗೆ ಒಂದು ಆಂಬುಲೆನ್ಸ್ ಇದೆ. ರಾಷ್ಟ್ರೀಯ ಹೆದ್ದಾರಿಯಲ್ಲಿ ಇಷ್ಟು ಅಪಘಾತಗಳು ಸಂಭವಿಸಿದರೂ ಈ ಬಗ್ಗೆ ಗಮನ ಹರಿಸದ ಶಾಸಕರು ಮೈಸೂರಿನಿಂದ ಗುಂಡ್ಲುಪೇಟೆಗೆ ಬಂದು ಹೋಗಿ ಫ್ಲೈಯಿಂಗ್ ಶಾಸಕರೆನಿಸಿಕೊಂಡಿದ್ದಾರೆ ಎಂದು ವ್ಯಂಗ್ಯವಾಡಿದರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ತೆರಕಣಾಂಬಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲಾಯಿತು. ಆದರೆ ಶಾಸಕರು ಅಗತ್ಯವಾದ ವೈದ್ಯರು ಮತ್ತು ಸಿಬ್ಬಂದಿಗಳನ್ನು ನೇಮಿಸಲು ಮುಂದಾಗಲಿಲ್ಲ. ಆದರೆ ನಾನು ಶಾಸಕನಾಗಿದ್ದ ಅವಧಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಮತ್ತು ಪೊಲೀಸ್ ಅಧಿಕಾರಿಗಳ ಸಭೆ ನಡೆಸಿ ಅಪಘಾತ ವಲಯಗಳನ್ನು ಗುರುತಿಸಿ ಅಪಘಾತ ನಿಯಂತ್ರಣಕ್ಕೆ ಅಗತ್ಯ ಕ್ರಮ ಕೈಗೊಂಡಿದ್ದೆ ಎಂದರು.

ತೆರಕಣಾಂಬಿ ಪದವಿ ಕಾಲೇಜಿನಲ್ಲಿ ದಾಖಲಾತಿ ಕಡಿಮೆ ಇದ್ದ ಕಾರಣ ಮುಚ್ಚುವ ಹಂತಕ್ಕೆ ಬಂದಿತ್ತು ಆದರೆ ಹೋರಾಟ ಮಾಡಿ ಕಾಲೇಜನ್ನು ಪುನರಾರಂಭ ಮಾಡಿದ್ದೆವು. ಆದರೆ ಈಗ ಕಾಲೇಜು ಸಂಪೂರ್ಣವಾಗಿ ಮುಚ್ಚುವುದಕ್ಕೆ ಶಾಸಕ ಗಣೇಶ್ ಪ್ರಸಾದ್ ನಿರ್ಲಕ್ಷ್ಯ ಕಾರಣ ಎಂದು ಆರೋಪಿಸಿದರು.

ಬೇಸಿಗೆ ಆರಂಭವಾಗುವ ಮುನ್ನವೇ ತಾಲೂಕಿನಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿದೆ. ಚಿಕ್ಕತುಪ್ಪೂರಿನಲ್ಲಿ ಕುಡಿಯುವ ನೀರಿಗೆ ಜನ ಬೀದಿಗೆ ಇಳಿದು ಪ್ರತಿಭಟನೆ ನಡೆಸಿರುವುದು ತಾಲೂಕು ಆಡಳಿತ ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ತಾಲೂಕಿನ ಕೆರೆಗಳಿಗೆ ನೀರು ತುಂಬಿಸುವಲ್ಲಿ ಶಾಸಕರು ಅಸಮರ್ಥರಾಗಿದ್ದಾರೆ. ಗುಂಡ್ಲುಪೇಟೆ ಯಜಮಾನ ಇಲ್ಲದ ಮನೆಯಾಗಿದ್ದು, ರಾಜ್ಯವನ್ನು ಕಾಂಗ್ರೆಸ್ ಸರ್ಕಾರ, ತಾಲೂಕನ್ನು ಶಾಸಕ ಗಣೇಶ್ ಪ್ರಸಾದ್ ಹಾಳು ಮಾಡಿದ್ದಾರೆ ಎಂದು ಹೇಳಿದರು.

ಮಾಜಿ ಪುರಸಭಾಧ್ಯಕ್ಷ ಜಿ.ಡಿ.ಎಲ್ ಸುರೇಶ್ ಮಾತನಾಡಿ, ಅಂದು ಮಾಜಿ ಸಚಿವ ಮಹದೇವಪ್ರಸಾದ್ ರೈತರನ್ನು ಮೈಗಳ್ಳರು ಎಂದು ಜರಿದಿದ್ದರು. ಇಂದು ಅವರ ಮಗ ಶಾಸಕ ಗಣೇಶ್ ಪ್ರಸಾದ್ ಕೆರೆಗಳಿಗೆ ನೀರು ತುಂಬಿಸುವಂತೆ ಕೇಳಿದ ರೈತರನ್ನು ಅವರ ಬೆಂಬಲಿಗರ ಮೂಲಕ ನಾಯಿಗಳಿಗೆ ಹೋಲಿಕೆ ಮಾಡಿರುವುದು ಸರಿಯಲ್ಲ. ಕೂಡಲೇ ಶಾಸಕರು ಕ್ಷಮೆ ಕೇಳಬೇಕು. ಇಲ್ಲದಿದ್ದರೆ ಹೋರಾಟ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಎನ್.ಮಲ್ಲೇಶ್, ಚಾಮುಲ್ ಮಾಜಿ ನಿರ್ದೇಶಕ ಡಿ.ಮಾದಪ್ಪ ನಾಗೇಂದ್ರ, ಮಾಜಿ ಪುರಸಭಾ ಸದಸ್ಯ ನಾಗೇಶ್, ಸಿದ್ದಯ್ಯ, ಬಿಜೆಪಿ ಮಂಡಲ ಪ್ರಧಾನ ಕಾರ್ಯದರ್ಶಿ ಮಹೇಂದ್ರ, ಸುನೀಲ್ ಉಪಸ್ಥಿತರಿದ್ದರು.

# ಸವಿತಾ ಮಹರ್ಷಿ ಜಯಂತಿ ಬಹಿಷ್ಕರಿಸಿದ ಮುಖಂಡರು

## ಕಾರ್ಯಕ್ರಮಕ್ಕೆ ಗೈರಾದ ಜನಪ್ರತಿನಿಧಿಗಳು, ಅಧಿಕಾರಿಗಳ ವಿರುದ್ಧ ಆಕ್ರೋಶ



ಮಹರ್ಷಿ ಜಯಂತಿ ಬಹಿಷ್ಕರಿಸಿ ಸಮುದಾಯದ ಮುಖಂಡರು ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಫೆ.17– ಅಧಿಕಾರಿಗಳು, ಜನಪ್ರತಿನಿಧಿಗಳು ಕಾರ್ಯಕ್ರಮಕ್ಕೆ ಗೈರಾಗಿದ್ದರಿಂದ ಆಕ್ರೋಶಗೊಂಡ ಸವಿತಾ ಸಮಾಜದ ಮುಖಂಡರು, ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಆಯೋಜಿಸಿದ್ದ ಸವಿತಾ ಮಹರ್ಷಿ ಜಯಂತಿ ಬಹಿಷ್ಕರಿಸಿದರು.

ಜಿಲ್ಲಾಡಳಿತ ಭವನದ ಆವರಣದಲ್ಲಿರುವ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಬೆಳಗ್ಗೆ 11 ಗಂಟೆಗೆ ಕಾರ್ಯಕ್ರಮ ನಿಗದಿಗೊಳಿಸಲಾಗಿತ್ತು. ಹೀಗಾಗಿ, ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ, ಹನೂರು ಹಾಗೂ ಗುಂಡ್ಲುಪೇಟೆ ತಾಲೂಕಿನಿಂದ 100ಕ್ಕೂ ಹೆಚ್ಚು ಸಮುದಾಯದ ಮುಖಂಡರು ಕಾರ್ಯಕ್ರಮಕ್ಕೆ ನಿಗದಿತ ಸಮಯಕ್ಕೆ ಆಗಮಿಸಿದ್ದರು. ಆದರೆ ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ ಅವರನ್ನು ಹೊರತುಪಡಿಸಿ ಮಧ್ಯಾಹ್ನ 12 ಗಂಟೆಯಾದರೂ ಕಾರ್ಯಕ್ರಮಕ್ಕೆ ಯಾವೊಬ್ಬ ಜನಪ್ರತಿನಿಧಿಯಾಗಲಿ, ಅಧಿಕಾರಿಯಾಗಲೀ ಬಂದಿರಲಿಲ್ಲ. ಇದರಿಂದ ಆಕ್ರೋಶಗೊಂಡ ಸಮುದಾಯದ ಮುಖಂಡರು ಸವಿತಾ ಮಹರ್ಷಿ ಭಾವಚಿತ್ರಕ್ಕೆ ನಮಿಸಿ ಅಧಿಕಾರಿಗಳು, ಜಿಲ್ಲಾಡಳಿತ, ಜನಪ್ರತಿನಿಧಿಗಳ ವಿರುದ್ಧ ಘೋಷಣೆ ಕೂಗಿ ರಂಗಮಂದಿರದಿಂದ ಹೊರನಡೆದರು.

**ಎಡಿಸಿ ಭೇಟಿ:** ವಿಚಾರ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಅಪರ ಜಿಲ್ಲಾಧಿಕಾರಿ ಜವರೇಗೌಡ ಆಗಮಿಸಿ ಸಮುದಾಯದ ಮುಖಂಡರನ್ನು ಮನವೊಲಿಸಲು ಯತ್ನಿಸಿದರು. ಆದರೆ ಅವರ ಮನವಿ ತಿರಸ್ಕರಿಸಿ, ಜಿಲ್ಲಾಡಳಿತ ಭವನದ ಮುಂಭಾಗ ಕುಳಿತು ಪ್ರತಿಭಟನೆ ನಡೆಸಿದರು.

ಸಮುದಾಯದ ಮುಖಂಡ ಪಣ್ಯದಹುಂಡಿ ವೆಂಕಟರಾಜು ಮಾತನಾಡಿ, ಸವಿತಾ ಮಹರ್ಷಿ ಜಯಂತಿ ಆಹ್ವಾನ ಪತ್ರಿಕೆಯಲ್ಲಿ ಎಲ್ಲಾ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಹೆಸರನ್ನು ಹಾಕಿಸಲಾಗಿದೆ. ಆದರೆ, ಅವರು ಯಾರು ಬಂದಿಲ್ಲ. ಅಲ್ಲದೇ 11 ಗಂಟೆಗೆ ಕಾರ್ಯಕ್ರಮ ಎಂದು ಹೇಳಿ 12 ಗಂಟೆಯಾದರೂ ಪ್ರಾರಂಭವಾಗಿಲ್ಲ. ಇದರಿಂದ ನಮ್ಮ ಸಮುದಾಯದವರ ಮೇಲೆ ಜಿಲ್ಲಾಡಳಿತ ಮಲತಾಯಿ ಧೋರಣೆ ಅನುಸರಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

**ಗುಂಡ್ಲುಪೇಟೆ– ಕೊಳ್ಳೇಗಾಲದಲ್ಲೂ ನಿರ್ಲಕ್ಷ್ಯ:** ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮವನ್ನು ಕೆಲವು ದಿನಗಳ ಹಿಂದೆ ಗುಂಡ್ಲುಪೇಟೆ ಹಾಗೂ ಕೊಳ್ಳೇಗಾಲದಲ್ಲಿ ಆಯೋಜಿಸಿದಾಗಲೂ ಕಾರ್ಯಕ್ರಮಕ್ಕೆ ಯಾವ ಅಧಿಕಾರಿಗಳು ಬರಲಿಲ್ಲ. ಜಿಲ್ಲೆಯಲ್ಲಿ ನಮ್ಮ ಸಮುದಾಯವನ್ನು ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ನಿರ್ಲಕ್ಷ್ಯದಿಂದ ನೋಡುತ್ತಿದ್ದಾರೆ ಎಂದು ಮುಖಂಡರು ಬೇಸರ ವ್ಯಕ್ತಪಡಿಸಿದರು.

ಬಳಿಕ ಎಡಿಸಿ ಜವರೇಗೌಡ ಮಾತನಾಡಿ, ಜಿಲ್ಲಾಡಳಿತದ ಶಿಷ್ಟಾಚಾರದಂತೆ ಎಲ್ಲಾ ಜನಪ್ರತಿನಿಧಿಗಳ ಹೆಸರನ್ನು ಹಾಕಿಸಲಾಗಿದೆ. ಅಲ್ಲದೇ ನಿಮ್ಮ ಕಾರ್ಯಕ್ರಮಕ್ಕೆ ಜಿಲ್ಲಾಧಿಕಾರಿಯವರು ಆಗಮಿಸಬೇಕಾಗಿತ್ತು. ಆದರೆ, ಬದನಗುಪ್ಪೆ ಗ್ರಾಮದಲ್ಲಿ ಗಲಾಟೆಯಾಗಿದ್ದರಿಂದ ಪೊಲೀಸ್ ಇಲಾಖೆ 2 ಸಮುದಾಯದ ಮುಖಂಡರೊಂದಿಗೆ ಜಿಲ್ಲಾಡಳಿತ ಭವನದಲ್ಲಿ ದಿಢೀರ್ ಶಾಂತಿ ಸಭೆ ಏರ್ಪಡಿಸಿದ್ದರಿಂದ ಅಲ್ಲಿಗೆ ಹೋಗಿದ್ದಾರೆ. ದ್ವಿತೀಯ ಪಿಯುಸಿ ಪರೀಕ್ಷೆ ಸಂಬಂಧ ನನಗೆ ವಿಡಿಯೋ ಕಾನ್ಫರೆನ್ಸ್ ಇದ್ದ ಕಾರಣ ನಾನು ಬರುವುದು ತಡವಾಯಿತು ಎಂದು ಸಮಜಾಯಿಷಿ ನೀಡಿದರು.

ಈ ವೇಳೆ ಸಮುದಾಯದ ಎಲ್ಲಾ ತಾಲೂಕು ಅಧ್ಯಕ್ಷರು, ಮುಖಂಡರು, ಯುವಕರು ಹಾಗೂ ಇತರರು ಇದ್ದರು.

### ಡಿಸಿ, ಎಸ್‌ಪಿಯಿಂದ ಪುಷ್ಪಾರ್ಚನೆ

ಸಮುದಾಯದ ಮುಖಂಡರು ಜಿಲ್ಲಾಡಳಿತ ಭವನದ ಮುಂಭಾಗ ಪ್ರತಿಭಟನೆ ನಡೆಸುತ್ತಿರುವ ವಿಚಾರ ತಿಳಿದು ಸ್ಥಳಕ್ಕೆ ಆಗಮಿಸಿದ ಜಿಲ್ಲಾಧಿಕಾರಿ ಶ್ರೀರೂಪಾ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್. ಮುತ್ತುರಾಜು ಅವರು ಮುಖಂಡರ ಮನವೊಲಿಸಿ, ಎಲ್ಲರನ್ನು ಕಾರ್ಯಕ್ರಮದ ಸ್ಥಳಕ್ಕೆ ಕರೆದುಕೊಂಡು ಹೋಗಿ ಸವಿತಾ ಮಹರ್ಷಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

# ಜಮೀನಿನ ವಿಚಾರಕ್ಕೆ ಕುಟುಂಬಕ್ಕೆ ಸಾಮಾಜಿಕ ಬಹಿಷ್ಕಾರ



ಚಾಮರಾಜನಗರ, ಫೆ.17– ಜಮೀನಿನ ವಿಚಾರಕ್ಕೆ ಸಂಬಂಧಿಸಿದಂತೆ ಗ್ರಾಮದ ಯಜಮಾನರು ಸಾಮಾಜಿಕ ಬಹಿಷ್ಕಾರಕ್ಕೆ ಹಾಕಿದ್ದು, ಇದರಿಂದ ಜೀವನ ನಡೆಸಲು ತೊಂದರೆಯಾಗುತ್ತಿದೆ. ಸಂಬಂಧಪಟ್ಟವರು ನಮ್ಮ ಕುಟುಂಬಕ್ಕೆ ನ್ಯಾಯ ಕೊಡಿಸಬೇಕು ಎಂದು ಕೊಳ್ಳೇಗಾಲ ಮೋಳೆ ನಿವಾಸಿಗಳಾದ ಪ್ರಭುಸ್ವಾಮಿ, ನಾಗರಾಜಮ್ಮ ಆಗ್ರಹಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತಾಡಿ, ನನ್ನ ಭಾಗಕ್ಕೆ ಬಂದಿದ್ದ ಜಮೀನನ್ನು ನನ್ನ ಅಣ್ಣನ ಮಗ ಬೇರೆಯವರಿಗೆ ಮಾರಿಕೊಂಡಿದ್ದ. ಇದನ್ನು ಪ್ರಶ್ನಿಸಿದ್ದಲ್ಲದೇ ಈ ಸಂಬಂಧ ನ್ಯಾಯ ಕೊಡಿಸುವಂತೆ ಗ್ರಾಮದ ಯಜಮಾನರ ಬಳಿ ಮನವಿ ಮಾಡಿದ್ದೆ. ಆದರೆ, ಯಜಮಾನರು ಅವನ ಪರ ಇದ್ದು ನಮ್ಮ ಕುಟುಂಬಕ್ಕೆ ಸಾಮಾಜಿಕ ಬಹಿಷ್ಕಾರ ಹಾಕಿದ್ದಾರೆ ಎಂದು ದೂರಿದರು.

ಇದರಿಂದಾಗಿ ನಮ್ಮ ಕುಟುಂದವರನ್ನು ಊರಿನ ಜನರು ಮಾತನಾಡಿಸುವುದಿಲ್ಲ. ಜೊತೆಗೆ ಅಂಗಡಿಗಳಲ್ಲಿ ಸಾಮಗ್ರಿಗಳನ್ನು ಖರೀದಿ ಸಲು ಹೋದರೆ ಕೊಡುವುದಿಲ್ಲ. ಜೊತೆಗೆ ಜಮೀನುಗಳಿಗೆ ಕೆಲಸ ಮಾಡಲು ಆಳುಗಳು ಬರುತ್ತಿಲ್ಲ. ಇದರಿಂದ ಜೀವನ ನಡೆಸಲು ತೊಂದರೆಯಾಗುತ್ತಿದೆ ಎಂದು ಅಳಲು ತೋಡಿಕೊಂಡರು.

ನಮ್ಮ ಮಕ್ಕಳು, ಸೊಸೆಯಂದಿರು ಇದರಿಂದ ಮನನೊಂದು ಬೆಂಗಳೂರಿಗೆ ಹೋಗಿ ವಾಸ ಮಾಡುತ್ತಿದ್ದಾರೆ. 2014ರಲ್ಲಿ ಸಾಮಾಜಿಕ ಬಹಿಷ್ಕಾರ ಹಾಕಿದ್ದು, ಅಂದಿನಿಂದ ಇಲ್ಲಿಯ ತನಕ ಗ್ರಾಮದಲ್ಲಿ ನಡೆಯುವ ಹಬ್ಬಕ್ಕೆ ಕರೆಯುವುದಿಲ್ಲ. ಅಲ್ಲದೇ ನಮ್ಮ ಕುಟುಂಬಕ್ಕೆ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿದರು.

ಕೊಳ್ಳೇಗಾಲ ಠಾಣೆಗೆ ದೂರು ನೀಡಲಾಗಿದ್ದು, ಇಲ್ಲಿವರೆಗೆ ಯಾವುದೇ ಕ್ರಮವಹಿಸಿಲ್ಲ. ಆದ್ದರಿಂದ ನಮ್ಮ ಕುಟುಂಬಕ್ಕೆ ನ್ಯಾಯ ಕೊಡಿಸಬೇಕು ಎಂದು ಮನವಿ ಮಾಡಿದರು.

# ಗ್ರಾಮೀಣ ರಸ್ತೆ ಅಭಿವೃದ್ಧಿಗೆ ಆದ್ಯತೆ: ಶಾಸಕ ಎಆರ್‌ಕೆ



ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎ.ಆರ್.ಕೃಷ್ಣಮೂರ್ತಿ ಭೂಮಿಪೂಜೆ ನೆರವೇರಿಸಿದರು.

ಯಳಂದೂರು, ಫೆ.17– ಗ್ರಾಮೀಣ ರಸ್ತೆ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಮುಂದಿನ ದಿನಗಳಲ್ಲಿ ಎಲ್ಲಾ ಗ್ರಾಮಗಳಿಗೂ ರಸ್ತೆ, ಚರಂಡಿ ಸೇರಿದಂತೆ ಮೂಲ ಸೌಲಭ್ಯ ಕಲ್ಪಿಸಲು ಒತ್ತು ನೀಡಲಾಗುವುದು ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ತಿಳಿಸಿದರು.

ತಾಲೂಕಿನ ಬೆಲವತ್ತ, ಮುರಟಿಪಾಳ್ಯ ಗ್ರಾಮಗಳ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು ಈ ಗ್ರಾಮಗಳಲ್ಲಿ ಬುಡಕಟ್ಟು ಸೋಲಿಗ ಜನಾಂಗದವರು ಹೆಚ್ಚಾಗಿದ್ದಾರೆ. ಇವೆರಡೂ ಚಿಕ್ಕ ಗ್ರಾಮಗಳಾಗಿದ್ದು, ಇಲ್ಲಿನ ಬೀದಿಗಳಿಗೆ ರಸ್ತೆ, ಚರಂಡಿ ಇಲ್ಲ. ಹೀಗಾಗಿ ತಲಾ 25 ಲಕ್ಷ ರೂ. ವೆಚ್ಚದಲ್ಲಿ ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಗಮದ ನೆರವಿನೊಂದಿಗೆ ರಸ್ತೆ ನಿರ್ಮಿಸಲು ಭೂಮಿ ಪೂಜೆ ಮಾಡಲಾಗಿದೆ ಎಂದರು.

ಯಳಂದೂರು ಹಾಗೂ ಚಾಮರಾಜನಗರ ಸಂಪರ್ಕ ಕಲ್ಪಿಸುವ ರಸ್ತೆ ತೀರಾ ಹದಗೆಟ್ಟಿದೆ. ಇದನ್ನು ದುರಸ್ತಿಗೊಳಿಸಬೇಕು ಎಂಬುದು ಇಲ್ಲಿನ ನಾಗರಿಕರ ಒತ್ತಾಯವಾಗಿದೆ. ಆದಷ್ಟು ಬೇಗ ಈ ರಸ್ತೆ ಅಭಿವೃದ್ಧಿಗೂ ಸಂಬಂಧಪಟ್ಟ ಇಲಾಖೆಯ ಉನ್ನತ ಅಧಿಕಾರಿಗಳೊಂದಿಗೆ ಚರ್ಚಿಸಿ ಸರ್ಕಾರದ ಮಟ್ಟದಲ್ಲಿ ಹಣ ಬಿಡುಗಡೆಗೊಳಿಸಿ ಇದರ ಅಭಿವೃದ್ಧಿಗೂ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದರು.

ಈ ವೇಳೆ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಹೆಚ್.ವಿ.ಚಂದ್ರು, ತಾಲೂಕು ಅಧ್ಯಕ್ಷ ಪ್ರಭುಪ್ರಸಾದ್, ಮುಖಂಡ ನಂಜುಂಡಸ್ವಾಮಿ, ಶಿನಂಜಯ್ಯ, ಕೆಆರ್‌ಐಡಿಎಲ್‌ನ ಜೆಇ ಅರುಣ್‌ಕುಮಾರ್ ಸೇರಿದಂತೆ ಅನೇಕರಿದ್ದರು.

# ಕುಡಿದ ಮತ್ತಿನಲ್ಲಿ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನ

ಕೊಳ್ಳೇಗಾಲ, ಫೆ.17– ಗುಂಡಿನ ಮತ್ತೆ ಗಮ್ಮತ್ತು ಅಳತೆ ಮೀರಿದರೆ ಆಪತ್ತು ಎಂಬ ಗಾದೆ ಮಾತಿನಂತೆ ವ್ಯಕ್ತಿಯೋರ್ವ ಕುಡಿದ ಮತ್ತಿನಲ್ಲಿ ಮೈ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ಪಟ್ಟಣದ ಹೊರ ವಲಯದ ದೊಡ್ಡ ಚಾನಲ್ ಬಳಿ ಮಂಗಳವಾರ ನಡೆದಿದೆ.

ಬಸ್ತೀಪುರ ಬಡಾವಣೆ ನಿವಾಸಿ ಆನಂದ್ (42) ಆತ್ಮಹತ್ಯೆಗೆ ಯತ್ನಿಸಿದವರು. ಈತ ಕಳೆದ 12 ವರ್ಷಗಳಿಂದ ಪತ್ನಿಯೊಂದಿಗೆ ಜಗಳವಾಡಿ ದೂರವಿರುವ ಕಾರಣ ಜೀವನದಲ್ಲಿ ಜಿಗುಪ್ಸೆಗೊಂಡು ಕುಡಿತದ ಚಟಕ್ಕೆ ದಾಸನಾಗಿದ್ದ. ಮಂಗಳವಾರ ಬೆಳಗ್ಗೆಯೂ ಮದ್ಯಪಾನ ಮಾಡಿದ್ದ ಆನಂದ್ ಕುಡಿತದ ಮತ್ತಿನಲ್ಲಿ ಮೈ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿಕೊಂಡಿದ್ದಾನೆ ಎನ್ನಲಾಗಿದೆ. ಈ ವೇಳೆ ಬೆಂಕಿಯ ತಾಪ ತಾಳಲಾರದೇ ಪಕ್ಕದಲ್ಲಿಯೇ ಹರಿಯುತ್ತಿದ್ದ ಚಾನಲ್‌ಗೆ ಹಾರಿದ್ದಾರೆ. ಬಳಿಕ ತೀವ್ರ ಸುಟ್ಟು ಗಾಯಗಳಾದರೂ ಚಾನಲ್‌ನಿಂದ ಎದ್ದು ಬರುತ್ತಿದ್ದ ಈತನನ್ನು ಗಮನಿಸಿದ ಸ್ಥಳೀಯರು ಕೊಳ್ಳೇಗಾಲ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ದಾಖಲಿಸಿದ್ದಾರೆ.



## ಶಿವರಾತ್ರಿ ಪ್ರಯುಕ್ತ ವಿಶೇಷ ಪೂಜೆ

ಮಹಾ ಶಿವರಾತ್ರಿ ಪ್ರಯುಕ್ತ ಚಾಮರಾಜನಗರ ತಾಲೂಕಿನ ಮುತ್ತಿಗೆ ಗ್ರಾಮದ ಹೊರವಲಯದಲ್ಲಿರುವ ಬೀರಲಿಂಗೇಶ್ವರಸ್ವಾಮಿಗೆ ವಿಶೇಷ ಪೂಜೆ ನೆರವೇರಿಸಲಾಯಿತು.

## ಇಂದು ವಿದ್ಯುತ್ ವ್ಯತ್ಯಯ

**ಕೊಳ್ಳೇಗಾಲ:** ಕೊತ್ತನೂರು ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಫೆ.18ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಕೊತ್ತನೂರು, ತೆಳ್ಳನೂರು, ಬಿ.ಜಿ. ದೊಡ್ಡಿ, ಸುಂಡ್ರಳ್ಳಿ, ಬಾಣೂರು, ರಾಚಪ್ಪಾಜಿ ನಗರ, ಅಂಕಣಾಪುರ, ಚಿಕ್ಕಲ್ಲೂರು, ಬಾಳಗುಣಸೆ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

# ಫೆ.21ಕ್ಕೆ ಗೀತ್ ಸಂಗಮ್-15; ಸಂಗೀತ ರಸ ಸಂಜೆ ಕಾರ್ಯಕ್ರಮ



ನಿತ್ಯಾನಂದ ಸದಾಶಿವ ಡಾ.ಸೋಮನಾಥ್ ನಾರಾಯಣ್ ಡಾ.ಸೀತಾಲಕ್ಷ್ಮಿ ಡಾ.ರವೀಂದ್ರ



ಅನ್ನು ಡಾ.ಭರತ್ ಡಾ.ಭಾರತಿ ಕುಮಾರಸ್ವಾಮಿ ಗೀತಾ ವಿನಾಯಕ

ಮೈಸೂರು. ಫೆ.17- ಮೈಸೂರಿನ ಖ್ಯಾತ ಗಾಯಕಿ ಶ್ರೀಮತಿ ಜಿ.ಕವಿತಾ ಕಾಮತ್ ಸಾರಥ್ಯದಲ್ಲಿ ಗೀತ್ ಸಂಗಮ್ ತಂಡದ 15ನೇ ವಾರ್ಷಿಕೋತ್ಸವದ ಪ್ರಯುಕ್ತ ಫೆಬ್ರವರಿ, 21ನೇ ಶನಿವಾರ ಸಂಜೆ 5.30ಕ್ಕೆ ಮೈಸೂರಿನ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಕನ್ನಡ ಹಾಗೂ ಹಿಂದಿ ಚಲನಚಿತ್ರಗಳ ಪ್ರಣಯ ಗೀತೆಗಳ ಸಂಗೀತ ರಸಸಂಜೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.



ಕವಿತಾ ಕಾಮತ್

ಈ ಕಾರ್ಯಕ್ರಮದಲ್ಲಿ ಹಲವಾರು ವರ್ಷಗಳಿಂದ ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಹಿರಿಯ ಸಾಧಕರಿಗೆ ಸನ್ಮಾನ ಏರ್ಪಡಿಸಲಾಗಿದೆ. ಅಲ್ಲದೆ ವೃತ್ತಿಪರ ಹಾಗೂ ಹವ್ಯಾಸಿ ಗಾಯಕರಾದ ಶ್ರೀಮತಿ ಜಿ.ಕವಿತಾ ಕಾಮತ್, ಜಿ.ನಿತ್ಯಾನಂದ ಕಾಮತ್, ಸದಾಶಿವ ಶೆಣೈ, ಡಾ.ಸೋಮನಾಥ ವಾಸುದೇವ, ಹೆಡತಲೆ ನಾರಾಯಣ, ಡಾ.ಸೀತಾಲಕ್ಷ್ಮಿ, ಶ್ರೀಮತಿ ಅನ್ನುಪೂರ್ಣ ನಾರ್ಡ್, ಡಾ. ರವೀಂದ್ರಕುಮಾರ್, ಕುಮಾರಸ್ವಾಮಿ .ಬಿ.ಎಸ್, ಡಾ.ಭಾರತಿ, ಶ್ರೀಮತಿ ಗೀತಾ ರಾವ್, ಡಾ.ಭರತ್‌ರಾಜ್, ವಿನಾಯಕ ಭಟ್ ಗಾಯನವನ್ನು ನಡೆಸಿಕೊಡಲಿದ್ದಾರೆ. ನಿರೂಪಣೆಯನ್ನು ಡಾ.ಆರ್.ಎಲ್. ಜಗದೀಶ್ ಮತ್ತು ಶ್ರೀಮತಿ ಅನಿತಾ. ಎಂ.ಆರ್. ನಿರ್ವಹಿಸಲಿದ್ದಾರೆ. ಈ ಕಾರ್ಯಕ್ರಮಕ್ಕೆ ಪ್ರವೇಶ ಉಚಿತ.

## ಇಂಡಿಯಾ ಎಐ ಇಂಪ್ಯಾಕ್ಟ್ ಎಕ್ಸ್‌ಪೋ-2026

# ಆವಿಷ್ಕಾರ, ನಾವೀನ್ಯತೆಗಳ ಪ್ರಬಲ ಸಂಗಮ: ಮೋದಿ

**ನವದೆಹಲಿ:** ದೆಹಲಿಯಲ್ಲಿ ನಡೆಯುತ್ತಿರುವ ಇಂಡಿಯಾ ಎಐ ಇಂಪ್ಯಾಕ್ಟ್ ಎಕ್ಸ್‌ಪೋ 2026 ಆಲೋಚನೆ, ಆವಿಷ್ಕಾರ, ನಾವೀನ್ಯತೆ ಮತ್ತು ಉದ್ದೇಶಗಳ ಪ್ರಬಲ ಸಂಗಮ ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಬಣ್ಣಿಸಿದ್ದಾರೆ.

ವೇಗವಾಗಿ ಮುಂದುವರಿಯುತ್ತಿರುವ ಜಾಗತಿಕ ಹೈಟೆಕ್ ಭೂದೃಶ್ಯಕ್ಕೆ ಅನುಗುಣವಾಗಿ ಆಡಳಿತ ಮತ್ತು ದೈನಂದಿನ ಜೀವನದಲ್ಲಿ ತಂತ್ರಜ್ಞಾನದ ವ್ಯಾಪಕ ಬಳಕೆಯನ್ನು ಪ್ರಧಾನಿ ಮೋದಿ ಒತ್ತಿ ಹೇಳಿದ್ದಾರೆ.

ಸೋಮವಾರ ಎಕ್ಸ್‌ಪೋವನ್ನು ಉದ್ಘಾಟಿಸಿದ ನಂತರ, ಪ್ರಧಾನಿ ಮೋದಿ ಅವರು ತಮ್ಮ ಬ್ಯುಸಿ ವೇಳಾಪಟ್ಟಿಯ ಹೊರತಾಗಿಯೂ ವಿವಿಧ ಸ್ಟಾಲ್‌ಗಳಿಗೆ ಭೇಟಿ ನೀಡಿ, ಎಕ್ಸ್‌ಪೋವನ್ನು ವೀಕ್ಷಿಸಿದರು. ಅಲ್ಲದೆ ಪ್ರದರ್ಶಕರೊಂದಿಗೆ ಸಂವಹನ ನಡೆಸಿದರು ಮತ್ತು ಕೃತಕ ಬುದ್ಧಿಮತ್ತೆಗೆ ಸಂಬಂಧಿಸಿದ ಪ್ರದರ್ಶನಗಳು ಹಾಗೂ ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ತಂತ್ರಜ್ಞಾನ-ಚಾಲಿತ ವಲಯದ ಇತರ ಬೆಳವಣಿಗೆಗಳ ಬಗ್ಗೆ ತಿಳಿದುಕೊಂಡರು.



ದೆಹಲಿಯಲ್ಲಿ ನಡೆಯುತ್ತಿರುವ ಇಂಡಿಯಾ ಎಐ ಇಂಪ್ಯಾಕ್ಟ್ ಎಕ್ಸ್‌ಪೋ 2026ನಲ್ಲಿ ಭಾಗವಹಿಸಿದ ಪ್ರಧಾನಿ ಮೋದಿ ಆವಿಷ್ಕಾರಗಳ ಬಗ್ಗೆ ತಂತ್ರಜ್ಞರಿಂದ ತಿಳಿದುಕೊಂಡರು.


> “ ಸರ್ವಜನ ಹಿತಾಯ, ಸರ್ವ ಜನ ಸುಖಾಯ ಅಥವಾ ಎಲ್ಲರಿಗೂ ಕಲ್ಯಾಣ, ಎಲ್ಲರಿಗೂ ಸಂತೋಷ, ಇದು ಮಾನವ ಕೇಂದ್ರಿತ ಪ್ರಗತಿಗಾಗಿ ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಳ್ಳುವ ನಮ್ಮ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ.
> -ಪ್ರಧಾನಿ ನರೇಂದ್ರ ಮೋದಿ

ಈ ಕುರಿತು ಇಂದು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಮೋದಿ, ಭಾರತದ ಎಐ ಇಂಪ್ಯಾಕ್ಟ್ ಎಕ್ಸ್‌ಪೋ 2026 ಕಲ್ಪನೆಗಳು, ನಾವೀನ್ಯತೆ ಮತ್ತು ಉದ್ದೇಶಗಳ ಪ್ರಬಲ ಸಂಗಮವಾಗಿದೆ. ಜಾಗತಿಕ ಒಳಿತಿಗಾಗಿ ಕೃತಕ ಬುದ್ಧಿಮತ್ತೆಯು ಭವಿಷ್ಯವನ್ನು ರೂಪಿಸುವಲ್ಲಿ ಇದು ಭಾರತೀಯ ಪ್ರತಿಭೆಗಳ ಅಸಾಧಾರಣ ಸಾಮರ್ಥ್ಯವನ್ನು ಪ್ರದರ್ಶಿಸಿದೆ. ಇದೆಲ್ಲಕ್ಕಿಂತ ಹೆಚ್ಚಾಗಿ, ಮಾನವ ಪ್ರಗತಿಗಾಗಿ ಎಐಅನ್ನು ಜವಾಬ್ದಾರಿಯುತವಾಗಿ, ಸಮಗ್ರವಾಗಿ ಮತ್ತು ಹೆಚ್ಚಿನ ಪ್ರಮಾಣದಲ್ಲಿ ಬಳಸಿಕೊಳ್ಳುವ ಭಾರತದ ಬದ್ಧತೆಯನ್ನು ಎಕ್ಸ್‌ಪೋ ಪುನರುಚ್ಚರಿಸಿದೆ ಎಂದಿದ್ದಾರೆ.

ಎಕ್ಸ್‌ಪೋವು ಜಾಗತಿಕ ತಂತ್ರಜ್ಞಾನ ಘಟಕ, ಸ್ಟಾರ್ಟ್‌ಅಪ್, ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆ, ಕೇಂದ್ರ ಮತ್ತು ರಾಜ್ಯ ಸರ್ಕಾರ ಮತ್ತು ಅಂತಾರಾಷ್ಟ್ರೀಯ ಪಾಲುದಾರಿಕೆಯನ್ನು ಒಂದೇ ವೇದಿಕೆಗೆ ತಂದಿದೆ ಎಂದರು. ಭಾರತ್ ಮಂಟಪದಲ್ಲಿ 70,000 ಚದರ ಮೀಟರ್‌ಗಿಂತಲೂ ಹೆಚ್ಚು ವಿಸ್ತೀರ್ಣದ 10 ಕ್ರೀಡಾಂಗಣಗಳಲ್ಲಿ ಹರಡಿರುವ ಈ ಎಕ್ಸ್‌ಪೋ ಜಾಗತಿಕ ತಂತ್ರಜ್ಞಾನ ಸಂಸ್ಥೆಗಳು, ನವೋದ್ಯಮಗಳು, ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಗಳು, ಕೇಂದ್ರ ಸಚಿವಾಲಯಗಳು, ರಾಜ್ಯ ಸರ್ಕಾರಗಳು ಮತ್ತು ಅಂತಾರಾಷ್ಟ್ರೀಯ ಪಾಲುದಾರರನ್ನು ಒಟ್ಟುಗೂಡಿಸಿದೆ.

ಈ ಎಕ್ಸ್‌ಪೋದಲ್ಲಿ 13 ದೇಶಗಳು ಕೃತಕ ಬುದ್ಧಿಮತ್ತೆಯ ಪರಿಸರ ವ್ಯವಸ್ಥೆಯ ಅಂತಾರಾಷ್ಟ್ರೀಯ ಸಹಕಾರವನ್ನು ಪ್ರದರ್ಶಿಸಿವೆ. ಇದರಲ್ಲಿ ಆಸ್ಟ್ರೇಲಿಯಾ, ಜಪಾನ್, ರಷ್ಯಾ, ಯುನೈಟೆಡ್ ಕಿಂಗ್‌ಡಮ್, ಫ್ರಾನ್ಸ್, ಜರ್ಮನಿ, ಇಟಲಿ, ನೆದರ್‌ಲ್ಯಾಂಡ್ಸ್, ಸ್ವಿಟ್ಜರ್‌ಲ್ಯಾಂಡ್, ಸೆರ್ಬಿಯಾ, ಎಸ್ಟೋನಿಯಾ, ತಜಕಿಸ್ತಾನ್ ಮತ್ತು ಆಫ್ರಿಕಾ ಸೇರಿವೆ.

# ಬಾಂಗ್ಲಾದೇಶದ ನೂತನ ಪ್ರಧಾನಿಯಾಗಿ ತಾರಿಕ್ ರೆಹಮಾನ್ ಪದಗ್ರಹಣ



ಬಾಂಗ್ಲಾದೇಶದ ನೂತನ ಪ್ರಧಾನಿಯಾಗಿ ತಾರಿಕ್ ರೆಹಮಾನ್ ಪ್ರಮಾಣ ವಚನ ಸ್ವೀಕರಿಸಿದರು.

**ಢಾಕಾ:** ಬಾಂಗ್ಲಾದೇಶದ ನೂತನ ಪ್ರಧಾನಿಯಾಗಿ ಬಾಂಗ್ಲಾದೇಶ ನ್ಯಾಶನಲಿಸ್ಟ್ ಪಾರ್ಟಿ ಅಧ್ಯಕ್ಷ ತಾರಿಕ್ ರೆಹಮಾನ್ ಮಂಗಳವಾರ ಪ್ರಮಾಣ ವಚನ ಸ್ವೀಕರಿಸಿದರು. ಸಂಜೆ 4:15ರ ಸುಮಾರಿಗೆ ಜಾತ್ಯ ಸಂಸದ್ ಭಾಬನ್ನ ಸೌತ್ ಪ್ಲಾಜಾದಲ್ಲಿ ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ಅವರು ಪ್ರತಿಜ್ಞಾವಿಧಿ ಬೋಧಿಸಿದರು.

ಇದಕ್ಕೂ ಮುನ್ನಾ ರಾಷ್ಟ್ರೀಯ ಸಂಸದ್ ಭಾಬಾನ್‌ನಲ್ಲಿ ನಡೆದ BNP ಶಾಸಕಾಂಗ ಪಕ್ಷದ ಸಭೆಯಲ್ಲಿ ತಾರಿಕ್ ರೆಹಮಾನ್ ಅವರನ್ನು ಸಂಸದೀಯ ನಾಯಕರನ್ನಾಗಿ ಆಯ್ಕೆ ಮಾಡಲಾಯಿತು. ಅಲ್ಲದೇ, ಪಕ್ಷವು ಅವರ ನೇತೃತ್ವದಲ್ಲಿ ಹೊಸ ಕ್ಯಾಬಿನೆಟ್ ಘೋಷಿಸಿದ್ದು, 25 ಸಚಿವರು ಮತ್ತು 24 ರಾಜ್ಯ ಸಚಿವರನ್ನು ನಾಮನಿರ್ದೇಶನ ಮಾಡಿದೆ.

ಹೊಸ ಸರ್ಕಾರ ರಚನೆಯ ನಂತರ ನೂತನ ಪ್ರಧಾನಿ ತಾರಿಕ್ ರೆಹಮಾನ್ ಬುಧವಾರ (ಫೆಬ್ರವರಿ 18) ಸೆಕ್ರೆಟರಿಯೇಟ್‌ನಲ್ಲಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ತಮ್ಮ ಮೊದಲ ಕೆಲಸದ ದಿನದಂದು ಸಂಪುಟ ಸದಸ್ಯರೊಂದಿಗೆ ವಿಶೇಷ ಸಭೆಯನ್ನು ನಡೆಸಲು ಮತ್ತು ಕಾರ್ಯದರ್ಶಿಗಳೊಂದಿಗೆ ಅಭಿಪ್ರಾಯ ವಿನಿಮಯ ಮಾಡಿಕೊಳ್ಳಲು ನಿರ್ಧರಿಸಿದ್ದಾರೆ ಎಂದು ಡೈಲಿ ಅಬ್ಸರ್ವರ್ ವರದಿ ಮಾಡಿದೆ.

ಬೆಳಗ್ಗೆ 10 ಗಂಟೆಗೆ ರಾಷ್ಟ್ರೀಯ ಹುತಾತ್ಮರ ಸ್ಮಾರಕಕ್ಕೆ ಮಾಲಾರ್ಪಣೆ ಮಾಡಲಿದ್ದಾರೆ. ಬಳಿಕ ಮಧ್ಯಾಹ್ನ 12:30ರ ಸುಮಾರಿಗೆ ಸೆಕ್ರೆಟರಿಯೇಟ್‌ನಲ್ಲಿರುವ ಕ್ಯಾಬಿನೆಟ್ ವಿಭಾಗದ ಪ್ರಧಾನ ಮಂತ್ರಿಗಳ ಕಚೇರಿಯಲ್ಲಿ ಔಪಚಾರಿಕವಾಗಿ ತಮ್ಮ ಅಧಿಕಾರವನ್ನು ವಹಿಸಿಕೊಳ್ಳಲಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ.

# ಉತ್ತರ ಕೊರಿಯಾ ಸರ್ವಾಧಿಕಾರಕ್ಕಾಗಿ ಅತ್ತೆ-ಸೊಸೆ ಫೈಟ್

**ಪ್ಯೋಂಗ್‌ಯಾಂಗ್:** ವಿಶ್ವದ ಅತ್ಯಂತ ನಿಗೂಢ ರಾಷ್ಟ್ರ ಉತ್ತರ ಕೊರಿಯಾದಲ್ಲಿ ಈಗ ಅಧಿಕಾರ ಹಸ್ತಾಂತರದ ಕಿಡಿ ಹೊತ್ತಿಕೊಂಡಿದೆ. ಸರ್ವಾಧಿಕಾರಿ ಕಿಮ್ ಜೊಂಗ್ ಉನ್ ತಮ್ಮ ಮಗಳು ಕಿಮ್ ಜು ಆಯೆ ಅವರನ್ನು ಅಧಿಕೃತವಾಗಿ ಉತ್ತರಾಧಿಕಾರಿ ಸ್ಥಾನಕ್ಕೆ ತರುತ್ತಿರುವುದು, ಕಿಮ್ ಅವರ ಪ್ರಭಾವಿ ತಂಗಿ ಕಿಮ್ ಯೋ ಜೊಂಗ್ ಅವರ ಕೆಂಗಣ್ಣಿಗೆ ಗುರಿಯಾಗಿದೆ ಎಂದು ಅಂತಾರಾಷ್ಟ್ರೀಯ ಗುಪ್ತಚರ ವರದಿಗಳು ಎಚ್ಚರಿಸಿವೆ.

ಫೆಬ್ರವರಿ 12ರಂದು ದಕ್ಷಿಣ ಕೊರಿಯಾದ ರಾಷ್ಟ್ರೀಯ ಗುಪ್ತಚರ ಸಂಸ್ಥೆ ಮಹತ್ವದ ವರದಿಯನ್ನು ಬಿಡುಗಡೆ ಮಾಡಿದೆ. ಸುಮಾರು 13 ವರ್ಷದ ಕಿಮ್ ಜು ಆಯೆ ಈಗ ಕೇವಲ ತರಬೇತಿ ಹಂತದಲ್ಲಿ ಇಲ್ಲ. ಬದಲಿಗೆ ಆಕೆಯನ್ನು ನಿಯೋಜಿತ ಉತ್ತರಾಧಿಕಾರಿ ಹಂತಕ್ಕೆ ಏರಿಸಲಾಗಿದೆ ಎಂದು ವರದಿ ಹೇಳಿದೆ. ಇತ್ತೀಚಿನ ಕ್ಷಿಪಣಿ ಪರೀಕ್ಷೆಗಳು, ಮಿಲಿಟರಿ ಪರೇಡ್‌ಗಳು ಮತ್ತು



ಉತ್ತರ ಕೊರಿಯಾ ಸರ್ವಾಧಿಕಾರಿ ಕಿಮ್ ಜೊಂಗ್ ಉನ್ ಹಾಗೂ ಅವರ ಪುತ್ರಿ ಕಿಮ್ ಜು ಆಯೆ.

ಚೀನಾ ಅಧ್ಯಕ್ಷರ ಜೊತೆಗಿನ ಭೇಟಿಯಲ್ಲೂ ಕಿಮ್ ತನ್ನ ಮಗಳನ್ನು ಜೊತೆಗೆ ಇರಿಸಿಕೊಂಡಿರುವುದು ಈ ಅನುಮಾನಕ್ಕೆ ಮತ್ತಷ್ಟು ಪುಷ್ಟಿ ನೀಡಿದೆ.

ಈ ಮೂಲಕ ಹುದ್ದೆ ಮೇಲೆ ಕಣ್ಣಿಟ್ಟಿದ್ದ ಸಹೋದರಿ ಕಿಮ್ ಯೋ-ಜಾಂಗ್‌ಗೆ ನಿರಾಸೆಯಾಗಿದೆ ಎನ್ನಲಾಗಿದೆ. ಕಿಮ್ ಯೋ ಜೊಂಗ್‌ಗೆ ಉತ್ತರ ಕೊರಿಯಾದ ಸೇನೆ ಮತ್ತು ಕಮ್ಯುನಿಸ್ಟ್ ಪಕ್ಷದಲ್ಲಿ ದೊಡ್ಡ ಬೆಂಬಲವಿದೆ. ಆಕೆ ಈ ದೇಶದ ಎರಡನೇ ಅತ್ಯಂತ ಶಕ್ತಿಶಾಲಿ ವ್ಯಕ್ತಿ ಎಂದು ಪರಿಗಣಿಸಲ್ಪಟ್ಟಿದ್ದಾರೆ.

ಈಗ ಕಿಮ್ ತನ್ನ ಮಗಳನ್ನು ಮುಂದಕ್ಕೆ ತರುತ್ತಿರುವುದು ಕಿಮ್ ಯೋ ಜೊಂಗ್ ಅವರ ರಾಜಕೀಯ ಮಹತ್ವಾಕಾಂಕ್ಷೆಗೆ ಅಡ್ಡಿಯಾಗಬಹುದು. ಬ್ರಿಟಿಷ್ ಮಾಧ್ಯಮ ದಿ ಟೆಲಿಗ್ರಾಫ್ ವರದಿಯ ಪ್ರಕಾರ, ಕಿಮ್ ಜೊಂಗ್ ಉನ್ ಅವರ ಆರೋಗ್ಯದಲ್ಲಿ ಏರುಪೇರಾದರೆ, ಅಧಿಕಾರಕ್ಕಾಗಿ ಅತ್ತೆ ಮತ್ತು ಸೊಸೆಯ ನಡುವೆ ತೀವ್ರ ಹೋರಾಟ ನಡೆಯುವ ಸಾಧ್ಯತೆಯಿದೆ.


ಈ ತಿಂಗಳ ಅಂತ್ಯದಲ್ಲಿ ಉತ್ತರ ಕೊರಿಯಾದಲ್ಲಿ ಬೃಹತ್ ಪಾರ್ಟಿ ಕಾಂಗ್ರೆಸ್ ಸಮಾವೇಶದಲ್ಲಿ ಕಿಮ್ ಜು ಆಯೆಗೆ ಯಾವುದಾದರೂ ಮಿಲಿಟರಿ ಅಥವಾ ರಾಜಕೀಯ ಪದವಿ ನೀಡಲಾಗುತ್ತದೆಯೇ ಎಂಬ ಬಗ್ಗೆ ಕುತೂಹಲ ಮೂಡಿದೆ. ಒಂದು ವೇಳೆ ಮಗಳಿಗೆ ಹೆಚ್ಚಿನ ಅಧಿಕಾರ ನೀಡಿದರೆ, ಅದು ಕಿಮ್ ಯೋ ಜೊಂಗ್ ಅವರ ಆಕ್ರೋಶಕ್ಕೆ ಕಾರಣವಾಗುವುದು ಖಚಿತವಾಗಿದೆ.

## ಬೆಳ್ಳಿ ಕಡಗಗಳ ಸಮರ್ಪಣೆ...



ಮೈಸೂರು ತಾಲೂಕು ಜಯಪುರ ಗ್ರಾಮದ ಮಲೆಯ ಋಷಿ ಕೋಣಪ್ಪಸ್ವಾಮಿ ದೇವರ ಸತ್ತಿಗೆಗೆ ಜಯಪುರದ ಪ್ರಗತಿಪರ ರೈತರಾದ ಅರುಣ್‌ಕುಮಾರ್, ಕಿರಣ್‌ಕುಮಾರ್ ಸಹೋದರರು 3.70 ಲಕ್ಷ ರೂ. ಮೌಲ್ಯದ ಬೆಳ್ಳಿಯ ಕಡಗಗಳನ್ನು ಗ್ರಾಮದ ಮುಖಂಡರಿಗೆ ಸಮರ್ಪಿಸಿದರು. ಈ ವೇಳೆ ಮುಖಂಡರಾದ ಮೂಗನಾಯಕ, ಜವರನಾಯಕ, ಡೇರಿ ಬಸವರಾಜು, ಎಂ.ನಾಗರಾಜು, ಬಿ.ರೇಣುಕಾ, ಚೌಡನಾಯಕ, ಕೆಂಪನಾಯಕ, ಕೆಂಪರಾಜು, ನಾಗನಾಯಕ, ರಾಚನಾಯಕ, ಶಿವಣ್ಣ, ಟೈಲರ್ ಬಸವರಾಜು ಇದ್ದರು.

## ಶಾಲಾ ವಾರ್ಷಿಕೋತ್ಸವ...



ಮೈಸೂರು ತಾಲೂಕು ಕಡಕೊಳ ಗ್ರಾಮದ ಶ್ರೀ ಗುರು ವಿದ್ಯಾ ವಿಕಾಸ ಕೇಂದ್ರ ಶಾಲೆಯ ವಾರ್ಷಿಕೋತ್ಸವವನ್ನು ಮಲ್ಲನಮೂಲೆ ಮಠದ ಶ್ರೀ ಇಮ್ಮಡಿ ಸಿದ್ದಲಿಂಗ ಸ್ವಾಮೀಜಿ ಉದ್ಘಾಟಿಸಿದರು. ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸದಸ್ಯ ಕಡಕೊಳ ಕುಮಾರಸ್ವಾಮಿ, ಜಿ.ಪಂ ಮಾಜಿ ಸದಸ್ಯ ಪಟೇಲ್ ಜವರೇಗೌಡ, ಸಂಸ್ಥೆಯ ಕಾರ್ಯದರ್ಶಿ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ, ತಾಪಂ ಮಾಜಿ ಸದಸ್ಯ ಶ್ರೀಕಂಠ ತೊಂಡೆಗೌಡ, ಗ್ರಾಪಂ ಮಾಜಿಸದಸ್ಯ ಶಿವಕುಮಾರ್, ಮುಖ್ಯೋಪಾಧ್ಯಾಯ ಪ್ರಭುಸ್ವಾಮಿ ಮತ್ತಿತರರಿದ್ದರು.

## ಹಿರಿಯರಿಗೆ ಸನ್ಮಾನ...



ಮಹಾಶಿವರಾತ್ರಿ ಹಬ್ಬದ ಅಂಗವಾಗಿ ಬೆಳಕು ವಾತ್ಸಲ್ಯಧಾಮದ ನಿವಾಸಿಗಳಿಗೆ ಪ್ರಕಾಶ್ ಪ್ರಿಯಾದರ್ಶನ ಸ್ನೇಹ ಬಳಗದ ವತಿಯಿಂದ ಸೀರೆ, ಡ್ರೈಫ್ರೂಟ್ಸ್, ಹಣ್ಣು ಹಂಪಲು ವಿತರಿಸಲಾಯಿತು. ಬಳಗದ ಅಧ್ಯಕ್ಷ ಸಂದೀಪ್, ನಗರ ಜೆಡಿಎಸ್ ಕಾರ್ಯಾಧ್ಯಕ್ಷ ಎಸ್.ಪ್ರಕಾಶ್ ಪ್ರಿಯಾದರ್ಶನ್, ಯಶವಂತ್‌ಕುಮಾರ್, ಸಿಂಚನಗೌಡ ಇತರರಿದ್ದರು.

# ನಾಳೆ, ನಾಳಿದ್ದು, ಪ್ರಾದೇಶಿಕ ಮಟ್ಟದ ತಾಂತ್ರಿಕ, ಸಾಂಸ್ಕೃತಿಕ ಹಬ್ಬ 'ಯುಕ್ತಿ'

ಮೈಸೂರು,ಫೆ.17(ಜಿಎ)-ಮೈಸೂರಿನ ಸಾತಗಳ್ಳಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ ಪ್ರಾದೇಶಿಕ ಕೇಂದ್ರದಲ್ಲಿ ಫೆ.19 ಮತ್ತು 20ರಂದು ಪ್ರಾದೇಶಿಕ ಮಟ್ಟದ ತಾಂತ್ರಿಕ ಮತ್ತು ಸಾಂಸ್ಕೃತಿಕ ಹಬ್ಬ 'ಯುಕ್ತಿ 2026' ಆಯೋಜಿಸಲಾಗಿದೆ ಎಂದು ಕೇಂದ್ರದ ಪ್ರಾದೇಶಿಕ ನಿರ್ದೇಶಕ ಹೆಚ್.ಎಂ.ನಂಜುಂಡಸ್ವಾಮಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆ.19ರಂದು ಬೆಳಿಗ್ಗೆ 10ಗಂಟೆಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ ಕುಲಪತಿ ಎಸ್.ವಿದ್ಯಾಶಂಕರ್ ಕಾರ್ಯಕ್ರಮ ಉದ್ಘಾಟಿಸುವರು. ನಟ ಶರಣ್, ನಟಿಯರಾದ ಸೋನಲ್ ಮೊಂಥೇರೋ, ಧನ್ಯಾ ರಾಮ್‌ಕುಮಾರ್, ಗಾಯಕ ವಾಸುಕಿ ವೈಭವ್, ವಯೋಲಿನ್ ವಾದಕ ಅನೀಶ್ ವಿದ್ಯಾಶಂಕರ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ವಿವಿಧ ತಾಂತ್ರಿಕ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಸುಮಾರು 1,200 ವಿದ್ಯಾರ್ಥಿಗಳು ಪಾಲ್ಗೊಳ್ಳುವ ನಿರೀಕ್ಷೆಯಿದೆ. ಫೆ.20ರಂದು ಸಂಜೆ 5ಕ್ಕೆ ಸಮಾರೋಪ ನಡೆಯಲಿದ್ದು, ವಿವಿಸಿಇ ಪ್ರಾಂಶುಪಾಲ ಬಿ.ಸದಾಶಿವೇಗೌಡ ಅತಿಥಿಯಾಗಿ ಪಾಲ್ಗೊಳ್ಳಲಿದ್ದು, ವಿಜೇತರಿಗೆ ಬಹುಮಾನ ವಿತರಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಸಂಘಟನಾ ಕಾರ್ಯದರ್ಶಿ ಎಸ್.ತಿಮ್ಮರಾಜು, ಬೋಧಕ ಸಿಬ್ಬಂದಿ ಪ್ರಕೃತಿ, ಪ್ರಸನ್ನ, ಕೀರ್ತಿಗೌಡ ಉಪಸ್ಥಿತರಿದ್ದರು.

# ಸೋಮಣ್ಣನ ಕ್ಷೇತ್ರ ವಿಜಯನಗರ ನೋಡಿ ಅಭಿವೃದ್ಧಿ ಪಾಠ ಕಲಿತೆ!



ಬೆಂಗಳೂರಿನ ವಿಜಯನಗರ-ಮೈಸೂರು ರಸ್ತೆಯ ನಾಯಂಡಹಳ್ಳಿ ಬಳಿ ನೂತನ ರಸ್ತೆ ಮೇಲ್ಸೇತುವೆಯನ್ನು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಲೋಕಾರ್ಪಣೆಗೊಳಿಸಿದರು. ಸಚಿವ ಜಮೀರ್ ಅಹಮದ್ ಇನ್ನಿತರರಿದ್ದಾರೆ.


**ಬೆಂಗಳೂರು:** ಬೆಂಗಳೂರಿನ ವಿಜಯನಗರ-ಮೈಸೂರು ರಸ್ತೆಯ ನಾಯಂಡಹಳ್ಳಿ ಬಳಿ ನೂತನ ರಸ್ತೆ ಮೇಲ್ಸೇತುವೆಯನ್ನು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಮಂಗಳವಾರ ಲೋಕಾರ್ಪಣೆಗೊಳಿಸಿದರು.

ಈ ರಸ್ತೆ ಮೇಲ್ಸೇತುವೆ ಈ ಭಾಗದ ಜನರ ಬಹುದಿನದ ಬೇಡಿಕೆಯಾಗಿತ್ತು. ನೂತನ ಮೇಲ್ಸೇತುವೆಯು ವಿಜಯನಗರ ಹಾಗೂ ಪಾದರಾಯನಪುರದ ಜನತೆಗೆ ಸಹಕಾರಿಯಾಗಲಿದೆ ಎಂದು ಸಚಿವ ವಿ.ಸೋಮಣ್ಣ ತಿಳಿಸಿದರು.

ಇದೇ ವೇಳೆ ಮಾತನಾಡಿದ ರಾಜ್ಯ ವಸತಿ ಸಚಿವ ಜಮೀರ್ ಅಹ್ಮದ್ ಖಾನ್, ರಾಜ್ಯದಲ್ಲಿ ಕ್ಷೇತ್ರದ ಅಭಿವೃದ್ಧಿ ಕೆಲಸಗಳನ್ನು ಸೋಮಣ್ಣ ಮಾಡುವ ಹಾಗೆ ಯಾರು ಮಾಡೋಕೆ ಸಾಧ್ಯವಿಲ್ಲ ಎಂದು ಸೋಮಣ್ಣರನ್ನು ಕೊಂಡಾಡಿದರು. ರಾಜ್ಯದಲ್ಲಿನ 220 ಶಾಸಕರು ಸಹ ಸೋಮಣ್ಣ ರೀತಿ ಕ್ಷೇತ್ರದ ಅಭಿವೃದ್ಧಿಯನ್ನು ಮಾಡಲು ಸಾಧ್ಯವಿಲ್ಲ ಎಂದರು.

ಬಡವರ ಕೆಲಸ ಅಂದರೆ ದೇವರ ಕೆಲಸ ಎಂದು ಭಾವಿಸಿ ಸೋಮಣ್ಣ ಕೆಲಸ ಮಾಡುತ್ತಾರೆ. ನಾನು ಮೊದಲ ಸಲ ಶಾಸಕನಾದಾಗ ನನಗೆ ನನ್ನ ರಾಜಕೀಯ ಸ್ನೇಹಿತರು ಕ್ಷೇತ್ರದ ಕೆಲಸವನ್ನು ಯಾವ ರೀತಿ ಮಾಡಬೇಕು ಅಂತ ಕಲಿಯಬೇಕಾದರೆ ಸೋಮಣ್ಣನ ಕ್ಷೇತ್ರ ವಿಜಯನಗರವನ್ನು ನೋಡಿ ಎಂದು ನನಗೆ ಸಲಹೆ ನೀಡಿದ್ದರು ಎಂದು ಜಮೀರ್ ಹೇಳಿದ್ದಾರೆ.

## ಸಿದ್ದೇಗೌಡರಿಗೆ ಅಭಿನಂದನೆ...



ಮೈಸೂರು ತಾಲೂಕು, ಜಯಪುರ ಹೋಬಳಿ, ಧನಗಹಳ್ಳಿ ಗ್ರಾಮದಲ್ಲಿ ಇತ್ತೀಚೆಗೆ ನಡೆದ ಉತ್ತನಹಳ್ಳಿ ಮಾರಮ್ಮ ಹಬ್ಬದ ಪ್ರಯುಕ್ತ ಗ್ರಾಮದ ವಾಲ್ಮೀಕಿ ಯುವಕರ ಸಂಘದ ಸಹಯೋಗದಲ್ಲಿ ನಡೆದ ಕುರುಕ್ಷೇತ್ರ ನಾಟಕಕ್ಕೆ ದೇಣಿಗೆ ನೀಡಿದ ಮೈಮುಲ್ ಮಾಜಿ ಅಧ್ಯಕ್ಷ ಮಾವಿನಹಳ್ಳಿ ಎಸ್.ಸಿದ್ದೇಗೌಡ ಅವರನ್ನು ಧನಗಹಳ್ಳಿ ಗ್ರಾಮಸ್ಥರು ಸನ್ಮಾನಿಸಿದರು. ಗ್ರಾಮದ ಯಜಮಾನರಾದ ಶಂಕರನಾಯಕ, ನಿಂಗರಾಜು, ಶಿವಣ್ಣ ಕರಿಯಪ್ಪ, ರವಿ ಧನಗಹಳ್ಳಿ ಹಾಗೂ ಗುಮಚನಹಳ್ಳಿ ಚೌಡನಾಯಕ ಉಪಸ್ಥಿತರಿದ್ದರು.

## ಎಸ್‌ಬಿಎಂ ಮಂಜುಗೆ ಸನ್ಮಾನ...



ಮೈಸೂರು ನಗರ ಜನತಾದಳದ ನೂತನ ಅಧ್ಯಕ್ಷರಾಗಿ ನೇಮಕಗೊಂಡ ಮಾಜಿ ಕಾರ್ಪೋರೇಟರ್ ಎಸ್‌ಬಿಎಂ ಮಂಜು ಅವರನ್ನು ಅಲ್ಪಸಂಖ್ಯಾತರ ಮುಖಂಡ ರೆಹಮಾನ್ ತೋಷಿಕ್, ಮುಖಂಡರಾದ ಕುಮಾರ್, ಅರವಿಂದ್ ಸನ್ಮಾನಿಸಿದರು.

# ಭೂಮಿ ಫಲವತ್ತತೆ ಸಂರಕ್ಷಣೆಗೆ ಸಾವಯವ ಕೃಷಿ ಅಳವಡಿಕೆ ಅನಿವಾರ್ಯ

● ಮೈಸೂರು ವಿವಿ ಪರೀಕ್ಷಾಂಗ ಕುಲಸಚಿವ ಪ್ರೊ.ನಾಗರಾಜ್ ಅಭಿಮತ ● ಆರೋಗ್ಯ ದೃಷ್ಟಿಯಿಂದಲೂ ಸಾವಯವ ಕೃಷಿ ಅನಿವಾರ್ಯ: ಪ್ರತಿಪಾದನೆ

ಮೈಸೂರು,ಫೆ.17(ಎಂಟಿವೈ)-ರಾಸಾಯನಿಕ ಗೊಬ್ಬರಗಳಿಂದ ಹಾಳಾಗುತ್ತಿರುವ ನೆಲ-ಜಲವನ್ನು ಸಂರಕ್ಷಿಸುವುದರೊಂದಿಗೆ ಆರೋಗ್ಯ ಕಾಪಾಡಿಕೊಳ್ಳಲು ಸಾವಯವ ಕೃಷಿ ಪದ್ಧತಿ ಅಳವಡಿಸಿಕೊಳ್ಳಬೇಕು ಎಂದು ಮೈಸೂರು ವಿಶ್ವವಿದ್ಯಾಲಯದ ಪರೀಕ್ಷಾಂಗ ಕುಲಸಚಿವ ಪ್ರೊ.ಎನ್.ನಾಗರಾಜ ಸಲಹೆ ನೀಡಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಅಭಿವೃದ್ಧಿ ಅಧ್ಯಯನ ಸಂಸ್ಥೆಯ ವತಿಯಿಂದ ಸಂಸ್ಥೆಯ ಪ್ರೊ.ಆರ್.ಸಿ. ಮಿಶ್ರಾ ಸಭಾಂಗಣದಲ್ಲಿ 'ಸಾವಯವ ಕೃಷಿ ಮತ್ತು ಕೃಷಿ ವ್ಯವಹಾರದಲ್ಲಿ ಉದಯೋನ್ಮುಖ ಪ್ರವೃತ್ತಿಗಳು ಮತ್ತು ಗ್ರಾಮೀಣಾಭಿವೃದ್ಧಿಯ ಮೇಲೆ ಅದರ ಪ್ರಭಾವ' ಕುರಿತು ಮಂಗಳವಾರ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಮಾತನಾಡಿದರು.

ಇತ್ತೀಚಿನ ವರ್ಷಗಳಲ್ಲಿ ಕೃಷಿ ಕ್ಷೇತ್ರದಲ್ಲಿ ಮಿತಿಮೀರಿದ ಪ್ರಮಾಣದಲ್ಲಿ ರಾಸಾಯನಿಕ ಗೊಬ್ಬರ, ಕೀಟನಾಶಕ ಬಳಸಲಾಗುತ್ತಿದೆ. ಇದರಿಂದ ಭೂಮಿ ಫಲವತ್ತತೆ ಕಳೆದುಕೊಳ್ಳುವುದರೊಂದಿಗೆ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಈ ಹಿನ್ನೆಲೆಯಲ್ಲಿ ಸಾವಯವ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು. ಆಗ ನೆಲ ಮತ್ತು ಜಲವನ್ನು ಸಂರಕ್ಷಣೆ ಮಾಡುವುದರೊಂದಿಗೆ ಜನರ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಆ ನಿಟ್ಟಿನಲ್ಲಿ ಸಾವಯವ ಕೃಷಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದರು.

ಇತ್ತೀಚಿನ ವರ್ಷಗಳಲ್ಲಿ ಸಾವಯವ ಕೃಷಿ ಹಾಗೂ ಸಿರಿ ಧಾನ್ಯಗಳ ಬಳಕೆ ಹೆಚ್ಚಾಗಿ ಪ್ರವರ್ಧಮಾನಕ್ಕೆ ಬರುತ್ತಿದೆ. 30-40 ವರ್ಷಗಳ ಹಿಂದೆ ರಾಗಿ, ನವಣೆ, ಅರ್ಕ ಸೇರಿದಂತೆ ಸಿರಿಧಾನ್ಯಗಳನ್ನು ಸೇವಿಸುವವರನ್ನು ಬಡವರು ಎನ್ನುತ್ತಿದ್ದರು. ಆ ಸಿರಿಧಾನ್ಯಗಳನ್ನು ಬಡವರು ಬಳಸುವ ಪದಾರ್ಥ ಎನ್ನುತ್ತಿದ್ದರು. ಆದರೆ, ಇದೀಗ ಸಿರಿಧಾನ್ಯದ ಮಹತ್ವ ಎಲ್ಲರಿಗೂ ಅರ್ಥವಾಗುತ್ತಿದೆ. ಸಿರಿಧಾನ್ಯಗಳ ಬಳಕೆ ಆರೋಗ್ಯ ಕಾಪಾಡಿಕೊಳ್ಳುವುದಕ್ಕೆ ಸಹಕಾರಿಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮಲ್ಟಿ ನ್ಯಾಷನಲ್ ಕಂಪನಿಗಳು ಸಿರಿಧಾನ್ಯಗಳನ್ನು ರಫ್ತು ಮಾಡುವುದಕ್ಕೆ ಮುಂದಾಗಿವೆ ಎಂದು ತಿಳಿಸಿದರು.



ಮೈಸೂರು ವಿಶ್ವವಿದ್ಯಾನಿಲಯದ ಅಭಿವೃದ್ಧಿ ಅಧ್ಯಯನ ಸಂಸ್ಥೆಯ ವತಿಯಿಂದ ಸಂಸ್ಥೆಯ ಪ್ರೊ.ಆರ್.ಸಿ. ಮಿಶ್ರಾ ಸಭಾಂಗಣದಲ್ಲಿ ನಡೆದ 'ಸಾವಯವ ಕೃಷಿ ಮತ್ತು ಕೃಷಿ ವ್ಯವಹಾರದಲ್ಲಿ ಉದಯೋನ್ಮುಖ ಪ್ರವೃತ್ತಿಗಳು ಮತ್ತು ಗ್ರಾಮೀಣಾಭಿವೃದ್ಧಿಯ ಮೇಲೆ ಅದರ ಪ್ರಭಾವ' ಕುರಿತು ವಿಚಾರ ಸಂಕಿರಣವನ್ನು ಮೈಸೂರು ವಿವಿಯ ಪರೀಕ್ಷಾಂಗ ಕುಲಸಚಿವ ಪ್ರೊ.ಎನ್.ನಾಗರಾಜ ಉದ್ಘಾಟಿಸಿದರು.

ರೈತರು ಸಾವಯವ ಕೃಷಿ ಪದ್ಧತಿಯನ್ನು ಅನುಸರಿಸಬೇಕು. ಜನರ ಆರೋಗ್ಯದ ದೃಷ್ಟಿಯಿಂದ ಸಾವಯವ ಕೃಷಿ ಪದ್ಧತಿ ಮಹತ್ವದ್ದಾಗಿದೆ. ಸಾವಯವ ಕೃಷಿಯ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸುವ ಕಾರ್ಯ ಆಗಬೇಕು. ನಾವು ಪ್ರತಿನಿತ್ಯ ಕುಡಿಯುವ ಹಾಲು ಸಹ ಸಾವಯವ ಅಲ್ಲ. ರಾಸಾಯನಿಕ ವಸ್ತುಗಳನ್ನು ಬಳಸಿ ಕೃಷಿ ಚಟುವಟಿಕೆ ಕೈಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಹಸುಗಳು ಸಹ ಅನಿವಾರ್ಯವಾಗಿ ರಾಸಾಯನಿಕಯುಕ್ತ ಆಹಾರ ಸೇವಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ಅವುಗಳು ನೀಡುವ ಹಾಲು ಸಾವಯವ ಆಗಲು ಸಾಧ್ಯವಿಲ್ಲ ಎಂದರು.

ರೈತರು ಸಾವಯವ ಪದ್ಧತಿಯಿಂದ ಅಲ್ಪಾವಧಿಯಲ್ಲಿ ಬೆಳೆಯುವ ಲಾಭದಾಯಕ ಬೆಳೆ ಬೆಳೆಯುವುದಕ್ಕೆ ಮುಂದಾಗಬೇಕು. ಕಬ್ಬು ಬೆಳೆಯುವ ರೈತರು ಒಂದರಿಂದ ಒಂದೂವರೆ ವರ್ಷ ಕಬ್ಬು ಬೆಳೆಯನ್ನು ರಕ್ಷಣೆ ಮಾಡಬೇಕಾಗಿದೆ. ಆದರೆ, ಕಬ್ಬಿನ ದರ ಗಮನಿಸಿದರೆ, ಒಂದು ಕೆಜಿ ಕಬ್ಬಿಗೆ 2.30 ರೂ. ಮಾತ್ರ ಸಿಗುತ್ತದೆ. ಕೇವಲ 2.30 ರೂ. ಪಡೆಯಲು ಒಂದೂವರೆ ವರ್ಷ ಕಾಯಬೇಕಾದ ಅನಿವಾರ್ಯತೆ ಇದೆ. ಅಲ್ಲದೆ, ಹೆಚ್ಚಿನ ನೀರು ಪೂರೈಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಹಣ್ಣು, ತರಕಾರಿ ಸೇರಿದಂತೆ ಸಾವಯವ ಕೃಷಿ ಪದ್ಧತಿಯಲ್ಲಿ 3-4 ತಿಂಗಳಿಗೆ ಫಸಲು ನೀಡುವ ಕಡಿಮೆ ನೀರು ಬೇಕಾಗುವ ಬೆಳೆ ಬೆಳೆಯುವುದಕ್ಕೆ ಪಣ ತೊಡಬೇಕು ಎಂದು ಸಲಹೆ ನೀಡಿದರು.

ಸಾವಯವ ಕೃಷಿ ಪದ್ಧತಿ ಕುರಿತಂತೆ ರೈತರಲ್ಲಿ ಜಾಗೃತಿ ಮೂಡಿಸಬೇಕು. ಆ ಮೂಲಕ ಆ ಪದ್ಧತಿಯಿಂದ ಆಗುವ ಉಪಯೋಗಗಳ ಬಗ್ಗೆ ಮನವರಿಕೆ ಮಾಡಿಕೊಡಬೇಕು. ಅಲ್ಲದೆ, ಅಲ್ಪಾವಧಿ ಮತ್ತು ಲಾಭ ಬರುವ ಬೆಳೆಗಳ ಬಗ್ಗೆ ಜಾಗೃತಿ ಮೂಡಿಸಬೇಕು. ಕೃಷಿ ಚಟುವಟಿಕೆಯ ಮೂಲಕ ಗ್ರಾಮೀಣ ಭಾಗದಲ್ಲಿ ಉದ್ಯೋಗ ಸೃಷ್ಟಿಸುವ ಅವಶ್ಯಕತೆ ಇದೆ. ಆ ಮೂಲಕ ನಗರ ಪ್ರದೇಶಕ್ಕೆ ವಲಸೆ ಹೋಗುವುದನ್ನು ತಪ್ಪಿಸಬೇಕು. ಸ್ಥಳೀಯ ಜನರಿಗೆ ಸ್ಥಳೀಯವಾಗಿ ಉದ್ಯೋಗ ಸೃಷ್ಟಿಯಾಗಬೇಕು. ಇದಕ್ಕೆ ಪೂರಕವಾಗಿ ಗ್ರಾಮೀಣ ಭಾಗ ಅಭಿವೃದ್ಧಿ ಹೊಂದಬೇಕು. ಗ್ರಾಮೀಣ ಭಾಗಗಳಿಗೆ ಮೂಲಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬೆಂಗಳೂರಿನ ಜಿಕೆವಿಕೆ ಪ್ರಾಧ್ಯಾಪಕಿ ಪ್ರೊ.ಸಿ.ಪಿ. ಗ್ರೇಸಿ, ಅಭಿವೃದ್ಧಿ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ.ಹೆಚ್.ಎಂ. ಚಂದ್ರಶೇಖರ್, ಪ್ರಾಧ್ಯಾಪಕರಾದ ಪ್ರೊ.ಎಂ.ಎಸ್. ಗಣಪತಿ, ಪ್ರೊ.ಎಂ.ಮೀರಾ ಉಪಸ್ಥಿತರಿದ್ದರು.

# ನಾಯಕತ್ವ ಬದಲಾವಣೆ ಸಂಬಂಧ ಹೈಕಮಾಂಡ್ ನಿರ್ಧಾರ

## ಇದಕ್ಕೆ ಸಿಎಂ, ಡಿಸಿಎಂ ಸೇರಿದಂತೆ ಎಲ್ಲರೂ ಬದ್ಧ: ಸಂಸದ ಸುನೀಲ್ ಬೋಸ್



ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಸಂಸದ ಸುನೀಲ್ ಬೋಸ್ ಭೂಮಿ ಪೂಜೆ ನೆರವೇರಿಸಿದರು.

ತಿ.ನರಸೀಪುರ, ಫೆ.17– ರಾಜ್ಯದಲ್ಲಿ ನಾಯಕತ್ವ ಬದಲಾವಣೆಗೆ ಇದು ಸಕಾಲವಲ್ಲ. ಸೂಕ್ತ ಸಮಯದಲ್ಲಿ ಹೈಕಮಾಂಡ್ ಈ ಬಗ್ಗೆ ನಿರ್ಧಾರ ಕೈಗೊಳ್ಳಲಿದ್ದು, ಎಲ್ಲರೂ ಅದಕ್ಕೆ ಬದ್ಧರಾಗಿರಬೇಕು ಎಂದು ಸಂಸದ ಸುನೀಲ್ ಬೋಸ್ ತಿಳಿಸಿದರು.

ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಕಾಂಗ್ರೆಸ್ ಇತಿಹಾಸ ಇರುವ ಪಕ್ಷ. ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಬಗ್ಗೆ ಚರ್ಚೆ ಆಗುತ್ತಿದೆ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ನಾಯಕತ್ವ ಬದಲಾವಣೆ ಆಗದು. ಕಾಂಗ್ರೆಸ್ ಹೈಕಮಾಂಡ್ ಸಧೃಡ ಹಾಗೂ ಸಬಲವಾಗಿದ್ದು ಸೂಕ್ತ ಸಮಯದಲ್ಲಿ ಈ ಬಗ್ಗೆ ನಿರ್ಧಾರ ಕೈಗೊಳ್ಳಲಿದೆ. ಹೈಕಮಾಂಡ್ ನಿರ್ಧಾರಕ್ಕೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಶಾಸಕರು ಬದ್ಧರಾಗಬೇಕಿರುತ್ತದೆ ಎಂದರು.

ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಕೇವಲ ದಸರಾ ಉದ್ಘಾಟನೆ ಹಾಗೂ ಬಾವುಟ ಹಾರಿಸುವುದಕ್ಕಷ್ಟೇ ಸೀಮಿತ ಎಂಬ ವಿರೋಧ ಪಕ್ಷದವರ ಆರೋಪಕ್ಕೆ ಉತ್ತರಿಸಿದ ಸಂಸದರು ರಾಜ್ಯಕ್ಕೆ ಬಿಜೆಪಿಯವರ ಕೊಡುಗೆ ಏನೆಂದು ಪ್ರಶ್ನಿಸಿದ ಅವರು, ನಿಮಾನ್ಸ್, ಜಯದೇವ ಆಸ್ಪತ್ರೆ ಹಾಗೂ ಕೆ.ಆರ್.ಆಸ್ಪತ್ರೆ ನವೀಕರಣಕ್ಕೆ ನೂರಾರು ಕೋಟಿ ರೂ. ಅನುದಾನ ನೀಡಿದ್ದು ಯಾರು ಎಂಬುದನ್ನು ಆರೋಪ ಮಾಡಿದವರು ನೆನಪಿಸಿಕೊಳ್ಳಲಿ ಎಂದ ಅವರು ಉಸ್ತುವಾರಿ ಸಚಿವರಾಗಿ ಮಹದೇವಪ್ಪನವರೇ ದಸರಾ ಉದ್ಘಾಟನೆ ಮಾಡಬೇಕು. ಅದು ಬಿಟ್ಟು ಬೇರೆಯವರು ಮಾಡಲು ಸಾಧ್ಯವೇ ಎಂದು ವಿರೋಧ ಪಕ್ಷದವರ ಆರೋಪಕ್ಕೆ ಟಾಂಗ್ ನೀಡಿದರು.

ಮೈಸೂರು ಜಿಲ್ಲೆ ಅಭಿವೃದ್ಧಿಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ನಮ್ಮ ತಂದೆ, ಸಚಿವ ಮಹದೇವಪ್ಪನವರು ಅಪಾರ ಕೊಡುಗೆ ನೀಡಿ ಜಿಲ್ಲೆಯನ್ನು ಇನ್ನಿಲ್ಲದಂತೆ ಅಭಿವೃದ್ಧಿ ಪಡಿಸಿದ್ದು, ಉಳಿದ ಎರಡೂವರೆ ವರ್ಷಗಳಲ್ಲಿ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಪಡಿಸಲಿದ್ದಾರೆ ಎಂದು ತಿಳಿಸಿದರು.

ಬಿಜೆಪಿಯವರು ರಾಜ್ಯ ಸರ್ಕಾರದಲ್ಲಿ ದುಡ್ಡಿಲ್ಲ. ರಾಜ್ಯದ ಖಜಾನೆ ಖಾಲಿಯಾಗಿದೆ ಎಂದು ಬೊಬ್ಬೆ ಹೊಡೆಯುತ್ತಿದ್ದಾರೆ. ಖಜಾನೆ ಖಾಲಿಯಾಗಿದ್ದರೆ ಕ್ಷೇತ್ರದ ಅಭಿವೃದ್ಧಿಗೆ ನೂರಾರು ಕೋಟಿ ರೂ. ಅನುದಾನ ತರಲು ಸಾಧ್ಯವಾಗುತ್ತಿತ್ತೆ ಎಂದು ಪ್ರಶ್ನಿಸಿದ ಅವರು ರಾಜಕೀಯವಾಗಿ ವಿರೋಧ ಪಕ್ಷದವರು ನಾವು ಒಳ್ಳೆಯ ಕೆಲಸ ಮಾಡಿದರೂ ಟೀಕೆ ಮಾಡುತ್ತಾರೆ ಅವರ ಟೀಕೆಗೆ ಹೆಚ್ಚಿನ ಮಹತ್ವ ನೀಡಲಾಗದು ಎಂದರು.

ಈ ವೇಳೆ ಸಂಸದರು 20 ಲಕ್ಷ ರೂ. ವೆಚ್ಚದಲ್ಲಿ ಬನ್ನಹಳ್ಳಿ ಹುಂಡಿ ಗ್ರಾಮದ ಸಾಮಾನ್ಯ ವರ್ಗದ ಬೀದಿ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು. ಕರೋಹಟ್ಟಿ, ವಾಟಾಳು, ಹ್ಯಾಕನೂರು ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಸಾಮಾನ್ಯ ವರ್ಗದ ಕಾಲೋನಿ ಹಾಗೂ ಎಸ್‌ಇಪಿ ಹಾಗೂ ಟಿಎಸ್‌ಪಿ ಯೋಜನೆಯಡಿ ರಸ್ತೆ ಹಾಗೂ ಚರಂಡಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು.

> “ಕ್ಷೇತ್ರದ ಅಭಿವೃದ್ಧಿಗೆ ನಮ್ಮ ತಂದೆಯೊಂದಿಗೆ ಸಾವಿರಾರು ಕೋಟಿ ರೂ. ಅನುದಾನ ತಂದಿದ್ದೇನೆ. ಈ ಹಿಂದೆ ಚುನಾವಣೆ ವೇಳೆ ಕರೋಹಟ್ಟಿ ಗ್ರಾಮದ ಬಸವೇಶ್ವರ ದೇವಸ್ಥಾನಕ್ಕೆ ಹೋಗುವ ರಸ್ತೆ ಅಭಿವೃದ್ಧಿ ಪಡಿಸುವ ಭರವಸೆ ನೀಡಿದ್ದೆ. ಅದರಂತೆ ಇದೀಗ 4.5 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು, ಮುಂದಿನ ವಾರ ಭೂಮಿ ಪೂಜೆ ಮಾಡಲಾಗುತ್ತದೆ. ಕ್ಷೇತ್ರದ ರೈತರ ಬಹು ನಿರೀಕ್ಷಿತ ಚಿದರವಳ್ಳಿ–ಉಕ್ಕಲಗೆರೆ ನಾಲಾ ಕಾಮಗಾರಿಗೆ ನೂರು ಕೋಟಿ ರೂ. ಬಿಡುಗಡೆಯಾಗಿದ್ದು, ಸಚಿವರೊಡಗೂಡಿ ಫೆ.20ರಂದು ಭೂಮಿ ಪೂಜೆ ನೆರವೇರಿಸಲಾಗುವುದು. ತುರುಗನೂರು ನಾಲೆ 100 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಹೆಚ್ಚಿನ ಅನುದಾನ ತಂದು ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಲಾಗುತ್ತದೆ. – **ಸುನೀಲ್ ಬೋಸ್, ಸಂಸದರು.**

ತಾಪಂ ಮಾಜಿ ಅಧ್ಯಕ್ಷರಾದ ಹ್ಯಾಕನೂರು ಉಮೇಶ್, ಕುಕ್ಕೂರು ಗಣೇಶ್, ಸೋಸಲೆ ಪಿಎಸ್‌ಎಸ್ ಮಾಜಿ ಅಧ್ಯಕ್ಷ ಎಂ.ಪರಶಿವಮೂರ್ತಿ, ಪುಟ್ಟಸುಬ್ಬಯ್ಯ, ಹ್ಯಾಕನೂರು ಡೈರಿ ಅಧ್ಯಕ್ಷ ಕುಮಾರ್, ವಾಟಾಳು ಗ್ರಾಪಂ ಮಾಜಿ ಅಧ್ಯಕ್ಷ ನಾಗೇಶ್, ಗುತ್ತಿಗೆದಾರ ರಾಜೇಗೌಡ, ಸಂಸದರ ಆಪ್ತ ಕಾರ್ಯದರ್ಶಿ ಬಸವರಾಜು, ತಹಸೀಲ್ದಾರ್ ಸುರೇಶಾಚಾರ್, ಜಿಪಂ ಎಇಇ ಚೌತ, ಲೋಕೋಪಯೋಗಿ ಇಲಾಖೆ ಎಇಇ ಸತೀಶ್ ಚಂದ್ರ, ಡಾ.ರವಿಕುಮಾರ್, ಸಿಡಿಪಿಓ ಗೋವಿಂದರಾಜು ಇತರರಿದ್ದರು.

## ಆಡಿಟೋರಿಯಂ ಕಾಮಗಾರಿಗೆ ಚಾಲನೆ



ಕಾಮಗಾರಿಗೆ ಶಾಸಕ ದರ್ಶನ್ ಧ್ರುವನಾರಾಯಣ್ ಗುದ್ದಲಿ ಪೂಜೆ ನೆರವೇರಿಸಿದರು.

ನಂಜನಗೂಡು, ಫೆ17– ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಬೇಕಾದ ಮೂಲ ಸೌಕರ್ಯಗಳನ್ನು ಒದಗಿಸಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಎಸ್‌ಇಪಿ ಮತ್ತು ಟಿಎಸ್ಪಿ ಅನುದಾನದಲ್ಲಿ 3 ಕೋಟಿ ವೆಚ್ಚದಲ್ಲಿ ಆಡಿಟೋರಿಯಂ ನಿರ್ಮಾಣ ಮಾಡಲಾಗುವುದು ಎಂದು ಶಾಸಕ ದರ್ಶನ್ ಧ್ರುವನಾರಾಯಣ ತಿಳಿಸಿದರು.

ನಗರದ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಡಿಟೋರಿಯಂ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಗ್ರಾಮೀಣ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಸಲುವಾಗಿ ಇಲ್ಲಿನ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಗತ್ಯ ಮೂಲ ಸೌಕರ್ಯ ಒದಗಿಸಲು ಕ್ರಮ ವಹಿಸಲಾಗಿದೆ. ಕಳೆದ ವರ್ಷ ಹೆಚ್ಚುವರಿ ಕಟ್ಟಡ ನಿರ್ಮಾಣ ಕಾಮಗಾರಿ ನಡೆಸಲಾಗಿದೆ. ಪ್ರಸ್ತುತ ಉನ್ನತ ಶಿಕ್ಷಣ ಸಚಿವ ಸುಧಾಕರ್ ಅವರ ಮನವೊಲಿಸಿ ಅನುದಾನ ತರಲಾಗಿದ್ದು, 3 ಕೋಟಿ ವೆಚ್ಚದಲ್ಲಿ ಸಭಾಂಗಣ ನಿರ್ಮಿಸಲಾಗುವುದು. ಇದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಉತ್ತೇಜನ ದೊರೆಯಲಿದೆ ಎಂದರು.

ಕರ್ನಾಟಕ ಹೌಸಿಂಗ್ ಬೋರ್ಡ್ ಸಂಸ್ಥೆಯಿಂದ ಕಾಮಗಾರಿ ನಡೆಯಲಿದ್ದು 300 ವಿದ್ಯಾರ್ಥಿಗಳು ಕುಳಿತುಕೊಳ್ಳುವ ಸಭಾಂಗಣ, ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕ ಕೊಠಡಿ ಮತ್ತು ಶೌಚಾಲಯಗಳ ನಿರ್ಮಾಣ ಕಾರ್ಯ ನಡೆಯಲಿದೆ. ಕಾಮಗಾರಿ 9 ತಿಂಗಳ ಅವಧಿಯಲ್ಲಿ ಮುಕ್ತಾಯಗೊಂಡು ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ. ಎಲ್ಲರೂ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಮಾಜಿ ಶಾಸಕ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ನಗರಸಭಾ ಮಾಜಿ ಸದಸ್ಯರಾದ ಎಸ್.ಪಿ.ಮಹೇಶ್, ಗಾಯತ್ರಿ, ಕೆ.ಎಂ.ಬಸವರಾಜು, ಗಂಗಾಧರ್, ಪ್ರಾಂಶುಪಾಲ ಕೆಂಪೇಗೌಡ, ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗರಾಜು, ಯುವ ಕಾಂಗ್ರೆಸ್ ತಾಲೂಕು ಅಧ್ಯಕ್ಷ ವಿಜಯಕುಮಾರ್, ಅಕ್ರಮ ಸಕ್ರಮ ಸಮಿತಿ ಸದಸ್ಯ ಜಯರಾಂ, ಮುಖಂಡರಾದ ಗುರುಮಲ್ಲಪ್ಪ, ರಿಯಾನ ಬಾನು, ಡಿವೈಎಸ್‌ಪಿ ರಘು ಸೇರಿದಂತೆ ಇತರರಿದ್ದರು.

# ಹುಣಸೂರು ಬಳಿ 1296 ಚೀಲ ಯೂರಿಯಾ ವಶ



ಅಕ್ರಮವಾಗಿ ದಾಸ್ತಾನು ಮಾಡಿದ್ದ ಯೂರಿಯಾ ವಶಪಡಿಸಿಕೊಳ್ಳಲಾಯಿತು.

ಹುಣಸೂರು, ಫೆ.17– ಕೇರಳಕ್ಕೆ ಸಾಗಿಸಲು ಅಕ್ರಮವಾಗಿ ದಾಸ್ತಾನು ಮಾಡಿದ್ದ 1296 ಚೀಲ ಯೂರಿಯಾ ವಶಪಡಿಸಿಕೊಳ್ಳುವಲ್ಲಿ ಹುಣಸೂರು ಪೊಲೀಸರು ಯಶಸ್ವಿಯಾಗಿದ್ದಾರೆ.

112ಗೆ ಬಂದ ಖಚಿತ ಮಾಹಿತಿ ಮೇರೆಗೆ ಡಿವೈಎಸ್‌ಪಿ ರವಿ ನೇತೃತ್ವದಲ್ಲಿ ತಾಲೂಕಿನ ಕಲ್ ಬೆಟ್ಟದ ಜಮೀನಿನಲ್ಲಿ ನಿರ್ಮಿಸಿದ್ದ ಗೋಡೌನ್ ಮೇಲೆ ದಾಳಿ ನಡೆಸಿದ ಪೊಲೀಸರು ಸಬ್ಸಿಡಿ ಯೂರಿಯಾವನ್ನು ವಶಪಡಿಸಿಕೊಂಡಿದ್ದಾರೆ. ಈ ವೇಳೆ ಗೋಡೌನ್‌ನಲ್ಲಿ ಕೆಲಸ ಮಾಡುತ್ತಿದ್ದ 8 ರಿಂದ 10 ಮಂದಿ ಕಾರ್ಮಿಕರು ಪೊಲೀಸರನ್ನು ಕಂಡು ಪರಾರಿಯಾಗಿದ್ದಾರೆ.

ಗೋಡೌನ್‌ನಲ್ಲಿ ಕೇಂದ್ರ ಸರ್ಕಾರದ ಸಬ್ಸಿಡಿ ಚಿಹ್ನೆ ಇರುವ ಚೀಲಗಳನ್ನು ಬದಲಾಯಿಸಿ ಬೇರೆ ಚೀಲಕ್ಕೆ ತುಂಬುತ್ತಿರುವುದನ್ನು ಪತ್ತೆ ಹಚ್ಚಿದ ಪೊಲೀಸರು ಕೂಡಲೇ ಕೃಷಿ ಇಲಾಖೆಗೆ ಮಾಹಿತಿ ನೀಡಿದರು. ಈ ವೇಳೆ ಸ್ಥಳಕ್ಕಾಗಮಿಸಿದ ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಅನಿಲ್ ಕುಮಾರ್, ಕೃಷಿ ಅಧಿಕಾರಿ ಜಯಕುಮಾರ್ ಹಾಗೂ ಸಿಬ್ಬಂದಿ ಪರಿಶೀಲಿಸಿದರು.

ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಅನಿಲ್ ಕುಮಾರ್ ಮಾತನಾಡಿ, ವಶಪಡಿಸಿಕೊಂಡಿರುವ ಗೊಬ್ಬರವನ್ನು ಚಿಲ್ಕಂದ ಸರ್ಕಾರಿ ಗೋದಾಮಿಗೆ ಸಾಗಿಸಲಾಗುವುದು. ಮಂಡ್ಯದ ನಾಗನಹಳ್ಳಿ ಪ್ರಯೋಗಾಲಯಕ್ಕೆ ಸ್ಯಾಂಪಲ್ ಕಳುಹಿಸಿ ವರದಿ ಬಂದ ನಂತರ ಜಿಲ್ಲಾಧಿಕಾರಿಗಳ ಸೂಚನೆಯಂತೆ ಕ್ರಮ ಕೈಗೊಳ್ಳಲಾಗುವುದು ಎಂದರು.

**ಲಾರಿ ವಶ:** ಕೇರಳಕ್ಕೆ ಯೂರಿಯಾ ಸಾಗಿಸಲು ತುಂಬಿದ್ದ 3 ಲಾರಿ ಹಾಗೂ ಹೊರಗಡೆ ರಸ್ತೆ ಬದಿ ನಿಂತಿದ್ದ ಐಚರ್ ವಾಹನ ಸೇರಿದಂತೆ 5 ವಾಹನ ವಶಕ್ಕೆ ಪಡೆಯಲಾಗಿದ್ದು, ಅಗತ್ಯ ವಸ್ತುಗಳ ಅಕ್ರಮ ದಾಸ್ತಾನು ಕಾಯ್ದೆಯಡಿ ಪ್ರಕರಣ ದಾಖಲಿಸಲಾಗುವುದು ಎಂದು ಡಿವೈಎಸ್‌ಪಿ ರವಿ ತಿಳಿಸಿದರು.

ಕಾರ್ಯಾಚರಣೆಯಲ್ಲಿ ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್, ಸಬ್ ಇನ್ಸ್‌ಪೆಕ್ಟರ್ ರಾಧಾ, ಎಎಸ್‌ಐ ಮಹೇಶ್ ಹಾಗೂ ಸಿಬ್ಬಂದಿಗಳಿದ್ದರು.

# ಫೆ.22, ಕೆ.ಆರ್.ನಗರಕ್ಕೆ ನಿಖಿಲ್ ಕುಮಾರಸ್ವಾಮಿ

## ಜನರೊಂದಿಗೆ ಜನತಾದಳ ಹಾಗೂ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಚಾಲನೆ



ಜೆಡಿಎಸ್ ಮುಖಂಡರು ಕಾರ್ಯಕ್ರಮದ ಕರಪತ್ರ ಹಂಚಿದರು.

ಕೆ.ಆರ್.ನಗರ, ಫೆ17– ಜೆಡಿಎಸ್ ಅನ್ನು ಬಲಿಷ್ಠವಾಗಿ ಸಂಘಟಿಸುವ ಮೂಲಕ 2028ಕ್ಕೆ ರಾಜ್ಯದಲ್ಲಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಜೆಡಿಎಸ್ ರಾಜ್ಯ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಫೆ.18ರಿಂದ ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಪಕ್ಷ ಬಲವರ್ಧನೆ ಮಾಡಲಿದ್ದಾರೆ ಎಂದು ಪುರಸಭೆ ಸದಸ್ಯ ಕೆ.ಉಮೇಶ್ ತಿಳಿಸಿದರು.

ಮೈಸೂರು ಜಿಲ್ಲೆಯಲ್ಲಿ ಜನರೊಂದಿಗೆ ಜನತಾದಳ ಹಾಗೂ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಚಾಲನೆ ನೀಡಲು ಫೆ.22ರಂದು ಕೆ.ಆರ್.ನಗರಕ್ಕೆ ನಿಖಿಲ್ ಕುಮಾರಸ್ವಾಮಿ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಪಾದಯಾತ್ರೆ ಮೂಲಕ ಕರಪತ್ರ ಹಂಚಿ ಕಾರ್ಯಕ್ರಮಕ್ಕೆ ಆಹ್ವಾನಿಸಿ ಅವರು ಮಾತನಾಡಿದರು.

ಮೊದಲ ಹಂತದಲ್ಲಿ 58 ದಿನಗಳಲ್ಲಿ 90 ವಿಧಾನಸಭಾ ಕ್ಷೇತ್ರಗಳಿಗೆ ಭೇಟಿ ನೀಡಿರುವ ನಿಖಿಲ್ ಕುಮಾರಸ್ವಾಮಿ ಅವರು ಪ್ರವಾಸದ ವೇಳೆ ಕಾರ್ಯಕರ್ತರನ್ನು ಭೇಟಿ ಮಾಡಿ ಪಕ್ಷಕ್ಕಾಗಿ ದುಡಿಯುವ ತಳಮಟ್ಟದ ಕಾರ್ಯಕರ್ತರನ್ನು ಗುರುತಿಸುವ ಕೆಲಸ ಮಾಡಿದ್ದಾರೆ ಎಂದರು.

ಮುಂದಿನ ದಿನಗಳಲ್ಲಿ ರಾಜ್ಯ ಸರ್ಕಾರದ ವೈಫಲ್ಯಗಳನ್ನು ತೆರೆದಿಡುವ ಕೆಲಸ ಮಾಡಲಿದ್ದೇನೆ ಎಂದಿರುವ ನಿಖಿಲ್ ಅವರ ಹೇಳಿಕೆಗೆ ನಾನೂ ಕೂಡ ಧ್ವನಿಗೂಡಿಸಲಿದ್ದೇನೆ. ಕೆ.ಆರ್.ನಗರದಲ್ಲಿ ಕಾಂಗ್ರೆಸ್ ಪಕ್ಷದ ಶಾಸಕರು ಶಾಶ್ವತ ಕೆಲಸ ಏನು ಮಾಡಿದ್ದಾರೆ ಎಂದು ತಿಳಿಸಬೇಕು ಎಂದು ಒತ್ತಾಯಿಸುತ್ತೇನೆ ಎಂದರು.

ತಾಲೂಕಿನಲ್ಲಿ ಅಭಿವೃದ್ಧಿ ಕುರಿತು ಕ್ಷೇತ್ರದ ಮತದಾರರು ಪ್ರಶ್ನಿಸುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರದ ಆಡಳಿತ 3 ವರ್ಷ ಕಳೆದರೂ ಸಿಎಂ ಸ್ಥಾನಕ್ಕಾಗಿ ಪೈಪೋಟಿ ನಡೆಸುತ್ತಿದ್ದಾರೆ ಹೊರತು ಜನ ಸಾಮಾನ್ಯರ ಬಗ್ಗೆ ಸ್ವಲ್ಪವೂ ಕಾಳಜಿ ಇಲ್ಲದ ಸರ್ಕಾರವಾಗಿದೆ ಎಂದು ವಾಗ್ದಾಳಿ ನಡೆಸಿದರು.

ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಪಕ್ಷದ ಗೆಲುವಿಗಾಗಿ ಪ್ರತಿಯೊಬ್ಬರೂ ಶ್ರಮಿಸಬೇಕು. ಹೀಗಾಗಿ ಗ್ರಾಮ, ಹೋಬಳಿ ಮತ್ತು ತಾಲೂಕಿನ ಹಂತದವರೆಗೆ ಪಕ್ಷ ಗಟ್ಟಿಗೊಳಿಸಿ. ಕ್ಷೇತ್ರದ ಅಧ್ಯಕ್ಷರು, ಮುಖಂಡರು ನಿಮ್ಮನ್ನು ಗುರುತಿಸಿ ಜವಾಬ್ದಾರಿ ನೀಡಲಿದ್ದಾರೆ ಎಂದು ತಿಳಿಸಿದರು.

ತಾಲೂಕು ಜೆಡಿಎಸ್ ಅಧ್ಯಕ್ಷ ಕುಮಾರ್, ಯುವ ಜೆಡಿಸ್ ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಕುಚೇಲ, ತಾಲೂಕು ಯುವ ಜೆಡಿಎಸ್ ಅಧ್ಯಕ್ಷ ಯೋಗೇಶ್, ನಗರ ಜಾ.ದಳ ಅಧ್ಯಕ್ಷ ಸಂತೋಷ್ ಗೌಡ, ಭಾಗ್ಯಲಕ್ಷ್ಮಿ, ಪುರಸಭೆ ಮಾಜಿ ಅಧ್ಯಕ್ಷ ಡಿ.ಕಾಂತ ರಾಜ್, ಗೀತಾ ಮಹೇಶ್, ಮಾಜಿ ಸದಸ್ಯರಾದ ಗಿರೀಶ್, ಸುಬ್ರಮಣ್ಯ, ರಾಜಾ ಶ್ರೀಕಾಂತ್, ತಾಲೂಕು ಜಾ.ದಳ ವಕ್ತಾರ ಕೆ.ಎಲ್.ರಮೇಶ್, ಕೃಷ್ಣಶೆಟ್ಟಿ, ಶಿವಣ್ಣ, ಮನುಗೌಡ, ಗುರುಪ್ರಸಾದ್, ಅವಿನಾಶ್, ಶಿವಲಿಂಗೇಗೌಡ, ಮಲ್ಲಪ್ಪ ವಿಜಯ್ ಸೇರಿದಂತೆ ಇತರರಿದ್ದರು.

# ಶ್ರೀಕಾಡು ಬಸವೇಶ್ವರಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ



ಕಾಡು ಬಸವೇಶ್ವರಸ್ವಾಮಿ ದೇವಸ್ಥಾನದಲ್ಲಿ ಗ್ರಾಮಸ್ಥರಿಂದ ಅನ್ನಸಂತರ್ಪಣೆ ನಡೆಯಿತು.

ತಿ.ನರಸೀಪುರ, ಫೆ.17– ಅಮಾವಾಸ್ಯೆ ಹಿನ್ನೆಲೆಯಲ್ಲಿ ತಾಲೂಕಿನ ವರುಣ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಈಶ್ವರಗೌಡನಹಳ್ಳಿ ಹಾಗೂ ಹೆಳವರಹುಂಡಿ ಸಮೀಪದ ಶ್ರೀಕಾಡು ಬಸವೇಶ್ವರಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜಾ ಕಾರ್ಯಕ್ರಮದೊಂದಿಗೆ ಅನ್ನ ಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು.

ಅಮಾವಾಸ್ಯೆ ಹಿನ್ನೆಲೆಯಲ್ಲಿ ಶ್ರೀಕಾಡು ಬಸವೇಶ್ವರಸ್ವಾಮಿ ದೇವಸ್ಥಾನದಲ್ಲಿ ಬೆಳಗ್ಗೆಯಿಂದಲೇ ವಿಶೇಷ ಪೂಜಾ ಕೈಂಕರ್ಯಗಳು ನಡೆದವು. ಬಿಲಿಗೆರೆಹುಂಡಿ ಡೈರಿ ಮಾಜಿ ಅಧ್ಯಕ್ಷ ಮಂಟೇಲಿಂಗಪ್ಪ ಹಾಗೂ ಬಿಲಿಗೆರೆಹುಂಡಿ ಗ್ರಾಮಸ್ಥರ ಸೇವಾರ್ಥದೊಂದಿಗೆ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ನಡೆಯಿತು.

ದೇವಸ್ಥಾನಕ್ಕೆ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ಬೆಳಗ್ಗೆಯಿಂದಲೇ ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು ಪೂಜೆ ಸಲ್ಲಿಸಿದರು. ಹರಕೆ ಹೊತ್ತ ಭಕ್ತರು ದೇವರಿಗೆ ಕಾಣಿಕೆ ಸಲ್ಲಿಸಿದರು. ಅಮಾವಾಸ್ಯೆ ಹಿನ್ನೆಲೆಯಲ್ಲಿ ಬಸವೇಶ್ವರ ಸ್ವಾಮಿಗೆ ವಿಶೇಷ ಹೂವಿನ ಅಲಂಕಾರ ಮಾಡಲಾಗಿತ್ತು ಅನ್ನ ದಾಸೋಹಕ್ಕೆ ನಿರ್ಮಿಸಲಾಗಿದ್ದ ಕೌಂಟರ್‌ಗಳಲ್ಲಿ ಭಕ್ತರು ಸರತಿ ಸಾಲಿನಲ್ಲಿ ನಿಂತು ಪ್ರಸಾದ ಸ್ವೀಕರಿಸಿದರು.

ಈ ವೇಳೆ ನಾಡಗೌಡ ಮಹದೇವಸ್ವಾಮಿ, ಡೈರಿ ಅಧ್ಯಕ್ಷ ಮಹದೇವಸ್ವಾಮಿ, ಉಪಾಧ್ಯಕ್ಷ ಏಳುಮಲೆ ಮಂಜು, ವೆಂಕಟೇಶ್, ಬಿ.ಎಸ್.ಪ್ರಭುಸ್ವಾಮಿ, ಗೌಡ್ರ ಗಿರಿಸ್ವಾಮಿ, ಯಜಮಾನರಾದ ಬಸವನಾಯಕ, ಶ್ರೀನಿವಾಸ್, ಕೆಇಬಿ ಸಿದ್ದಲಿಂಗಸ್ವಾಮಿ, ವಕೀಲ ಪರಮೇಶ್, ಕಿರಗಸೂರು ರಾಜಪ್ಪ ಸೇರಿದಂತೆ ಗ್ರಾಮಸ್ಥರು, ಮುಖಂಡರು ಹಾಜರಿದ್ದರು.

## ಹೆಚ್.ಡಿ.ಕೋಟೆ: ಹುಲಿ ದಾಳಿಗೆ ಎತ್ತು ಬಲಿ



ಹೆಚ್.ಡಿ.ಕೋಟೆ, ಫೆ.17– ಹುಲಿ ದಾಳಿಗೆ ಎತ್ತು ಬಲಿಯಾಗಿರುವ ಘಟನೆ ತಾಲೂಕಿನ ಹೊಸಹೊಳಲು ಗ್ರಾಮದಲ್ಲಿ ಮಂಗಳವಾರ ಬೆಳಗ್ಗೆ ನಡೆದಿದೆ.

ಕೆಂಪೇಗೌಡನಹುಂಡಿ ಗ್ರಾಮದ ನಿವಾಸಿ, ರೈತ ಅಣ್ಣಯ್ಯ ಸ್ವಾಮಿ ಅವರಿಗೆ ಸೇರಿದ ಎತ್ತು ಹುಲಿ ದಾಳಿಗೆ ಬಲಿಯಾಗಿದೆ. ಇವರು ಎಂದಿನಂತೆ ತಮ್ಮ ಜಮೀನಿನಲ್ಲಿ ಎತ್ತನ್ನು ಕಟ್ಟಿ ಹಾಕಿದ್ದರು. ಈ ವೇಳೆ ಏಕಾಏಕಿ ದಾಳಿ ನಡೆಸಿದ ಹುಲಿ ಎತ್ತನ್ನು ಬಲಿ ಪಡೆದು ಅರೆಬರೆ ತಿಂದು ಪರಾರಿಯಾಗಿದೆ. ಇದರಿಂದ ರೈತ ಅಣ್ಣಯ್ಯ ಸ್ವಾಮಿ ಅವರಿಗೆ ಒಂದು ಲಕ್ಷಕ್ಕೂ ಹೆಚ್ಚು ರೂ. ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿ ಸೂಕ್ತ ಪರಿಹಾರ ಕೊಡಿಸುವ ಭರವಸೆ ನೀಡಿದ್ದಾರೆ.

## ಹುಣಸೂರು ಹಂಟರ್ಸ್‌ಗೆ ಮೊದಲ ಬಹುಮಾನ



ಹುಣಸೂರಿನಲ್ಲಿ ನಡೆದ ಸೆಸ್ಕ್ ಹುಣಸೂರು ಡಿವಿಷನ್ ಕ್ರಿಕೆಟ್ ಕಪ್ ಸೀಸನ್–4 ಪಂದ್ಯಾವಳಿಯಲ್ಲಿ ಹುಣಸೂರು ಹಂಟರ್ಸ್ ತಂಡ ಮೊದಲ ಬಹುಮಾನ ತನ್ನದಾಗಿಸಿಕೊಂಡಿತು. ಈ ವೇಳೆ ಟೂರ್ನಿ ವ್ಯವಸ್ಥಾಪಕರಾದ ಸಿದ್ದೇಶ್ವರ, ಬಸವರಾಜ್, ಶಾಂತರಾಜ್, ಶೇಖರ್, ಜಗದೀಶ್, ದೇವೇಂದ್ರ ಮತ್ತಿತರರಿದ್ದರು.

# ಕೃಷಿ ಉತ್ಪಾದಕ ಕೇಂದ್ರದ ಗೋಡೌನ್ ಉದ್ಘಾಟನೆ



ಕೃಷಿ ಉತ್ಪಾದಕ ಕೇಂದ್ರದ ಗೋಡೌನ್ ಅನ್ನು ಶಾಸಕ ದರ್ಶನ್ ಧ್ರುವನಾರಾಯಣ್ ಉದ್ಘಾಟಿಸಿದರು.

ನಂಜನಗೂಡು, ಫೆ.17– ನ್ಯಾಷನಲ್ ಫಾರ್ಮರ್ ಪ್ರೊಡ್ಯೂಸರ್ ಆರ್ಗನೈಸೇಷನ್ ಸಂಸ್ಥೆಯವರು ರೈತ ಅಭಿವೃದ್ಧಿ ಕೇಂದ್ರ ತೆರೆದು ರೈತರಿಗೆ ಕೃಷಿಗೆ ಬೇಕಾದ ಕೃಷಿ ಸಲಕರಣೆಗಳನ್ನು ಒದಗಿಸುತ್ತಿರುವುದು ಶ್ಲಾಘನೀಯ ಎಂದು ಶಾಸಕ ದರ್ಶನ್ ಧ್ರುವನಾರಾಯಣ ತಿಳಿಸಿದರು.

ತಾಲೂಕಿನ ಸಿಂಧುವಳ್ಳಿ ಗ್ರಾಮದಲ್ಲಿ ನ್ಯಾಷನಲ್ ಫಾರ್ಮರ್ ಪ್ರೊಡ್ಯೂಸರ್ ಆರ್ಗನೈಸೇಷನ್ ಕೃಷಿ ಉತ್ಪಾದಕ ಕೇಂದ್ರದ ಗೋಡೌನ್ ಉದ್ಘಾಟಿಸಿ ಮಾತನಾಡಿದ ಅವರು, ಈ ಕೃಷಿ ಉತ್ಪಾದಕ ಘಟಕವು ನಾಲ್ಕು ರಾಜ್ಯಗಳಲ್ಲಿ ಘಟಕ ತೆರೆದು ರೈತರಿಗೆ ಕೃಷಿ ಮಾರ್ಗದರ್ಶನ ನೀಡುವ ಜೊತೆಗೆ ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ತರಬೇತಿ ಸಹ ಕೊಡಿಸುತ್ತಿದ್ದಾರೆ. ಕೇಂದ್ರದ ಮುಖ್ಯಸ್ಥರು ಈ ಭಾಗದ ರೈತರೊಂದಿಗೆ ನಿರಂತರ ಸಂಪರ್ಕ ಇಟ್ಟುಕೊಂಡು ಕೃಷಿಯ ಬಗ್ಗೆ ಮಾರ್ಗದರ್ಶನ ನೀಡಬೇಕು ಎಂದು ಸಲಹೆ ನೀಡಿದ ಅವರು, ರೈತರು ಕೃಷಿ ಚಟುವಟಿಕೆಗಳನ್ನು ಸುಗಮವಾಗಿ ನಡೆಸಲು ಅಗತ್ಯ ಉಪಕರಣಗಳು ಹಾಗೂ ಔಷಧಿಗಳನ್ನು ಸಮರ್ಪಕವಾಗಿ ಸಂಗ್ರಹಿಸಿ ವಿತರಿಸಲು ಈ ಕೇಂದ್ರ ಸಹಾಯಕವಾಗಲಿದೆ ಎಂದರು.

ಶಾಸಕ ಗಣೇಶ್ ಪ್ರಸಾದ್ ಮಾತನಾಡಿ, ನ್ಯಾಷನಲ್ ಫಾರ್ಮರ್ ಪ್ರೊಡ್ಯೂಸರ್ ಆರ್ಗನೈಸೇಷನ್ ಕಂಪನಿಯವರು ರೈತರಿಗೆ ಕಡಿಮೆ ಬೆಲೆಯಲ್ಲಿ ಅಗತ್ಯವಾದ ಗೊಬ್ಬರ ಮತ್ತು ಕೃಷಿ ಉಪಕರಣಗಳನ್ನು ಪೂರೈಕೆ ಮಾಡುವ ಮೂಲಕ ಪ್ರೋತ್ಸಾಹ ನೀಡುತ್ತಿದ್ದಾರೆ. ಅಲ್ಲದೆ ರೈತರ ಬೆಳೆಗಳಿಗೆ ಮಾರುಕಟ್ಟೆ ಒದಗಿಸಿ ಉತ್ತಮ ಬೆಂಬಲ ಬೆಲೆ ಕೊಡುವ ಮೂಲಕ ರೈತರಿಗೆ ನೆರವಾಗುತ್ತಿದ್ದಾರೆ ಎಂದರು.

ಸಂಸ್ಥೆ ಮುಖ್ಯಸ್ಥ ಫಿಲಿಪ್ ಮಾತನಾಡಿ, ಕರ್ನಾಟಕ ಮತ್ತು ಕೇರಳ ಭಾಗದ ರೈತರಲ್ಲಿ ಸಾವಯವ ಕೃಷಿಯನ್ನು ಉತ್ತೇಜಿಸುವ ಸಲುವಾಗಿ ಸಂಸ್ಥೆ ವತಿಯಿಂದ ಕಾರ್ಖಾನೆ ತೆರೆದು ಸಾವಯವ ಗೊಬ್ಬರ ವಿತರಿಸಲಾಗುತ್ತಿದೆ. ಜೊತೆಗೆ ಕಬ್ಬು ಶುಂಠಿ, ಅರಿಶಿನದಂತಹ ಬೆಳೆಗಳಿಗೆ ರಾಸಾಯನಿಕ ಗೊಬ್ಬರ ಪೂರೈಕೆ ಮಾಡಲಾಗುತ್ತಿದೆ. ಈ ಸಂಸ್ಥೆ ರೈತರಿಂದ ರೈತರಿಗಾಗಿ ತೆರೆಯಲಾದ ಸಂಸ್ಥೆಯಾಗಿದ್ದು, ರೈತ ಅಭಿವೃದ್ಧಿ ಕೇಂದ್ರದ ಮೂಲಕ ವಿತರಿಸಲಾಗುವ ಗೊಬ್ಬರ ಸೇರಿದಂತೆ ಕೃಷಿ ಸಲಕರಣೆಗಳನ್ನು ಶೇ.10ರಷ್ಟು ಲಾಭಕ್ಕೆ ಮಾರಲಾಗುತ್ತಿದೆ ಎಂದರು.

ಮಾಜಿ ಶಾಸಕ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಗ್ರಾಪಂ ಅಧ್ಯಕ್ಷ ಹೊಣಕಾರ ನಾಯಕ, ಸದಸ್ಯರಾದ ಕೃಷ್ಣಮೂರ್ತಿ, ಗುರುಪ್ರಸಾದ್, ಶಾಂತಮಲ್ಲಪ್ಪ ಮಣಿಕಂಠ, ಜಯರಾಮ್ ಇತರರಿದ್ದರು.

# ವಿಜೃಂಭಣೆಯ ಮಲೆ ಮಹದೇಶ್ವರಸ್ವಾಮಿ ರಥೋತ್ಸವ



ನಂಜೀಪುರದಲ್ಲಿ ಮಲೆ ಮಹದೇಶ್ವರಸ್ವಾಮಿ ರಥೋತ್ಸವ ನಡೆಯಿತು.

ಸರಗೂರು, ಫೆ.17– ತಾಲೂಕಿನ ನಂಜೀಪುರದಲ್ಲಿ ಮಲೆ ಮಹದೇಶ್ವರಸ್ವಾಮಿ ರಥೋತ್ಸವ ಮತ್ತು ಕೊಂಡೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ರಥೋತ್ಸವ ಅಂಗವಾಗಿ ದೇವಾಲಯವನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಅಲ್ಲದೇ ವಿವಿಧ ಹೂಗಳಿಂದ ರಥವನ್ನು ಸಿಂಗರಿಸಲಾಗಿತ್ತು. ಬಳಿಕ ರಥದಲ್ಲಿ ಶ್ರೀಮಲೆ ಮಹದೇಶ್ವರಸ್ವಾಮಿ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ವೀರಗಾಸೆ ಕುಣಿತ, ನಗಾರಿ, ಮಂಗಳ ವಾದ್ಯ, ಸತ್ತಿಗೆಗಳೊಂದಿಗೆ ಮೆರವಣಿಗೆ ಮಾಡಲಾಯಿತು. ನಂತರ ದೇವಸ್ಥಾನದ ಆವರಣದಲ್ಲಿ ಹಾಕಲಾಗಿದ್ದ ಕೊಂಡೋತ್ಸವಕ್ಕೆ ವಿಶೇಷ ಪೂಜೆ ಸಲ್ಲಿಸಿ, ಭಕ್ತರು ಕೊಂಡ ಹಾಯುವ ಮೂಲಕ ಭಕ್ತಿ ಮೆರೆದರು. ನಂತರ ದೇವಸ್ಥಾನದ ಬಳಿ ವೃಕ್ಷ ಪೂಜೆ, ಬಸವ ಪೂಜೆ ಮಾಡಲಾಯಿತು. ಭಕ್ತರಿಗೆ ಅನ್ನ ಸಂತರ್ಪಣೆ ನಡೆಯಿತು.

# ಕೆಎಸ್‌ಐಸಿ ಆವರಣದಲ್ಲಿ ಕ್ರೀಡಾಂಗಣ ನಿರ್ಮಿಸದಂತೆ ಒತ್ತಾಯ

## ಪರಿಸರ ಕಾರ್ಯಕರ್ತರಿಂದ ಮನವಿ ಸಲ್ಲಿಕೆ



ಕ್ರೀಡಾಂಗಣ ನಿರ್ಮಾಣ ಕೈ ಬಿಡುವಂತೆ ಕಾರ್ಖಾನೆ ಮುಖ್ಯಸ್ಥರಿಗೆ ಮನವಿ ಸಲ್ಲಿಸಲಾಯಿತು.

ತಿ.ನರಸೀಪುರ, ಫೆ.17– ಪಟ್ಟಣದ ಕೆಎಸ್‌ಐಸಿ ಸಿಲ್ಕ್ ಫಿಲೇಚರ್ ಕಾರ್ಖಾನೆ ಆವರಣದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಕ್ರೀಡಾಂಗಣ ಯೋಜನೆ ಕೈ ಬಿಡಬೇಕೆಂದು ಪರಿಸರ ಕಾರ್ಯಕರ್ತರ ರಾಜ್ಯ ಸಂಘಟನೆ ಪ್ರಧಾನ ಕಾರ್ಯದರ್ಶಿ ಪರಶುರಾಮೇಗೌಡ ಒತ್ತಾಯಿಸಿದರು.

ಕಾರ್ಖಾನೆಯ 5 ಎಕರೆ ಭೂಮಿಯನ್ನು ಕ್ರೀಡಾಂಗಣ ನಿರ್ಮಿಸಲು ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ವರ್ಗಾಯಿಸಿರುವ ಹಿನ್ನೆಲೆಯಲ್ಲಿ ಕಾರ್ಖಾನೆಗೆ ಪರಿಸರ ಕಾರ್ಯಕರ್ತರ ರಾಜ್ಯ ಸಂಘಟನೆ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರೊಡಗೂಡಿ ಭೇಟಿ ನೀಡಿದ ಅವರು ಕೂಡಲೇ ಕ್ರೀಡಾಂಗಣ ನಿರ್ಮಾಣ ಪ್ರಸ್ತಾವನೆ ಕೈಬಿಟ್ಟು ಬೇರೆಡೆ ಕ್ರೀಡಾಂಗಣ ನಿರ್ಮಿಸುವಂತೆ ಆಗ್ರಹಿಸಿದರು.

ಕ್ರೀಡಾಂಗಣ ನಿರ್ಮಾಣ ಮಾಡಲು ಉದ್ದೇಶಿಸಿರುವ ಜಾಗ ವಿವಿಧ ಬಗೆಯ ನೂರಾರು ಮರಗಳು, ಪ್ರಾಣಿ ಪಕ್ಷಿಗಳು, ಚಿಟ್ಟೆಗಳು, ಅಸಂಖ್ಯಾತ ಕ್ರಿಮಿ ಕೀಟಗಳ ಆವಾಸ ಸ್ಥಾನ ಕೂಡ ಆಗಿರುವುದರಿಂದ ಮರಗಳನ್ನು ಕಡಿದು ಕ್ರೀಡಾಂಗಣ ನಿರ್ಮಿಸಲು ಸರ್ಕಾರ 5 ಎಕರೆ ಭೂಮಿಯನ್ನು ಕ್ರೀಡಾ ಇಲಾಖೆಗೆ ವರ್ಗಾವಣೆ ಮಾಡಿರುವುದು ತೀವ್ರವಾದ ಆತಂಕ ಉಂಟು ಮಾಡಿದೆ.

ವರ್ಗಾವಣೆ ಮಾಡಿರುವ 5 ಎಕರೆ ಜಾಗದಲ್ಲಿ 100 ವರ್ಷಗಳಿಗಿಂತ ಹೆಚ್ಚು ವಯಸ್ಸಿನ ಮರಗಳಿವೆ. ನಾವೀಗ ತಾಪಮಾನ ಏರಿಕೆ ಮತ್ತು ಹವಾಗುಣ ಬದಲಾವಣೆ ಭೀಕರತೆಯ ಪರಿಣಾಮಗಳನ್ನು ಎದುರಿಸುತ್ತಿದ್ದೇವೆ. ಇರುವ ಮರಗಳನ್ನು ಉಳಿಸಿಕೊಂಡು ಇನ್ನೂ ಹೆಚ್ಚಿನ ಗಿಡಗಳನ್ನು ನೆಟ್ಟು ಬೆಳೆಸುವ ಅನಿವಾರ್ಯ ಪರಿಸ್ಥಿತಿ ನಮ್ಮದಾಗಿದೆ. ಒಂದೊಂದು ಮರವು ಮುಖ್ಯವಾಗಿರುವುದರಿಂದ ಹತ್ತಾರು ಮರಗಳನ್ನು ಕೆಡವಿ ಕ್ರೀಡಾಂಗಣ ನಿರ್ಮಿಸುವ ನಿರ್ಧಾರಕ್ಕೆ ನಮ್ಮ ವಿರೋಧವಿದೆ. ಅಲ್ಲದೇ ಹತ್ತಾರು ಮರಗಳನ್ನು ಕಡಿಯುವುದು ಮನುಷ್ಯನ ಹತ್ಯೆಗಿಂತ ಹೇಯ ಕೃತ್ಯ ಎಂದು ಸುಪ್ರೀಂಕೋರ್ಟ್ ಕೂಡ ಹೇಳಿದೆ. ಹಾಗಾಗಿ ಇಂತಹ ಜಾಗದಲ್ಲಿ ಮರಗಳ ಹನನ ಮಾಡಿ ಕ್ರೀಡಾಂಗಣ ನಿರ್ಮಾಣ ಮಾಡುವುದು ಸರಿಯಲ್ಲ. ಮರಗಳನ್ನು ಕಡಿದು ಜೀವ ಪರಿಸರ ವ್ಯವಸ್ಥೆ ನಾಶ ಮಾಡಿದರೆ ಮತ್ತೆ ಪುನರ್ ನಿರ್ಮಾಣ ಮಾಡಲು ಕನಿಷ್ಠ 50 ವರ್ಷಗಳಾದರೂ ಬೇಕಾಗುತ್ತದೆ. ಅಲ್ಲದೇ ಕಾರ್ಖಾನೆಯ 5 ಎಕರೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಿದರೆ ಈಗಿರುವ ಕಾರ್ಖಾನೆ ನಡೆಸುವುದು ಕಷ್ಟವಾಗುತ್ತದೆ. ಕಲ್ಲಿದ್ದಲು ಬಳಸುವ 2 ಬಾಯ್ಲರ್‌ಗಳು, ಕಲ್ಲಿದ್ದಲು ಸಂಗ್ರಹಿಸಲು ಮತ್ತು ಕಲ್ಲಿದ್ದಲು ಉರಿದು ನಂತರ ಬರುವ ಸಿಂಡರ್ ಆ್ಯಷ್ ಹಾಕಲು ಸಾಕಷ್ಟು ಜಾಗ ಬೇಕಾಗುತ್ತದೆ. ಫಿಲೇಚರ್ ಕಾರ್ಖಾನೆಯ ಸುತ್ತಲು ಶೇ.35ರಷ್ಟು ಪ್ರದೇಶದಲ್ಲಿ ಮರಗಳನ್ನು ಬೆಳೆಸುವುದು ಕಡ್ಡಾಯವಾಗಿರುವುದರಿಂದ ಕ್ರೀಡಾಂಗಣ ನಿರ್ಮಿಸಿದರೆ ಕಾರ್ಖಾನೆ ನಡೆಸುವುದು ಕಷ್ಟವಾಗುತ್ತದೆ ಎಂದರು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ಮೈಸೂರು–ಚಾಮರಾಜನಗರ ಜಿಲ್ಲಾ ಕಾರ್ಯಾಧ್ಯಕ್ಷ ಕಿರಗಸೂರು ಶಂಕರ್ ಮಾತನಾಡಿದರು. ಮೈಸೂರು ಗ್ರಾಹಕ ಪರಿಷತ್ ಕಾರ್ಯದರ್ಶಿ ಪ್ರಭಾ ನಂದೀಶ್, ಶೈಲಜೇಶ್, ಪ್ರೊ.ಕಾಳಚೆನ್ನೇಗೌಡ, ರಂಗರಾಜು, ರವಿಬಳೆ, ಕಮಲ್ ಗೋಪಿನಾಥನ್, ಭಾನು ಪ್ರಶಾಂತ್, ವಿಶ್ವನಾಥ್, ಭಾಗ್ಯ ಶಂಕರ್, ಶೋಭಾ ಶಿವಕುಮಾರ್, ಗೀತಾ ವೇಲಮಣಿ, ಅಂಜನ, ಮಧುಶ್ರೀ, ಗಾಯಿತ್ರಿ, ಶಂಕರ್, ಗಂಟಯ್ಯ, ಸುಶೀಲ, ಗಣೇಶ್, ಲಕ್ಷ್ಮಣ್, ರಾಜೀವ್, ಸುಗುಣ, ಕಬ್ಬು ಬೆಳೆಗಾರರ ಸಂಘದ ಪ್ರಸಾದ್ ನಾಯಕ್, ಕುರುಬೂರು ಗೌರಿ ಶಂಕರ್, ಲಕ್ಷ್ಮಣ ಸೇರಿದಂತೆ ಮತ್ತಿತರರಿದ್ದರು.

> “ಕಾರ್ಖಾನೆಯಲ್ಲಿ ಉತ್ಪಾದನೆಯಾಗುವ ರೇಷ್ಮೆ ನೂಲು ಮೈಸೂರು ಮತ್ತು ಚನ್ನಪಟ್ಟಣದ ನೇಯ್ಗೆ ಕಾರ್ಖಾನೆಗಳಿಗೆ ಹೋಗುತ್ತದೆ. ಮೈಸೂರು ಸೀರೆಗಳ ನೇಯ್ಗೆಗೆ ಕಚ್ಚಾ ವಸ್ತು ಈ ರೇಷ್ಮೆ ನೂಲಾಗಿದೆ. ಇಲ್ಲಿ ಕ್ರೀಡಾಂಗಣ ಮಾಡಿ ಕಾರ್ಖಾನೆ ಮುಚ್ಚುವ ಪರಿಸ್ಥಿತಿ ಬಂದರೆ ಗ್ಲೋಬಲ್ ಇಂಡಿಕೇಟರ್ ಟ್ಯಾಗ್ ಹೊಂದಿರುವ ವಿಶ್ವ ವಿಖ್ಯಾತ ಮೈಸೂರು ಸಿಲ್ಕ್ ಸೀರೆಗಳ ತಯಾರಿಕೆಗೆ ಹೊಡೆತ ಬೀಳುತ್ತದೆ. 1912ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ ಸ್ಥಾಪನೆಯಾದ ಕಾರ್ಖಾನೆ ಮೈಸೂರು ಪರಂಪರೆಯ ಹೆಮ್ಮೆಯಾಗಿದ್ದು ಈಗಲೂ ಲಾಭದಲ್ಲಿ ನಡೆಯುತ್ತಿದೆ. ಕಾರ್ಖಾನೆ ಮುಚ್ಚಿದರೆ ರೇಷ್ಮೆ ಬೆಳೆಯುವ ರೈತನಿಗೂ ತೊಂದರೆ ಎದುರಾಗುವುದರಿಂದ ಕ್ರೀಡಾಂಗಣ ನಿರ್ಮಾಣವನ್ನು ಈ ಜಾಗದಲ್ಲಿ ಕೈ ಬಿಟ್ಟು ಬೇರೆಡೆ ಸೂಕ್ತ ಜಾಗ ಗುರುತಿಸಿ ನಿರ್ಮಿಸಲು ಸರ್ಕಾರ ಮುಂದಾಗಬೇಕಿದೆ.
> **– ಪರಶುರಾಮೇಗೌಡ, ಪರಿಸರ ಕಾರ್ಯಕರ್ತರ ರಾಜ್ಯ ಸಂಘಟನೆ ಪ್ರಧಾನ ಕಾರ್ಯದರ್ಶಿ.**

ಮೈಸೂರು ಮಿತ್ರ ಬುಧವಾರ 18 ಫೆಬ್ರವರಿ 2026

# ತಾಯಿ, ಶಿಶು ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳಿ

## ಮೈಸೂರು ಜಿಪಂ ಸಿಇಓ ಯುಕೇಶ್ ಕುಮಾರ್ ಸಲಹೆ



ಮೈಸೂರು ಜಿಲ್ಲಾ ಪಂಚಾಯತ್‌ನ ಡಿ.ದೇವರಾಜ ಅರಸ್ ಸಭಾಂಗಣದಲ್ಲಿ ಮಂಗಳವಾರ ನಡೆದ 2025–26ನೇ ಸಾಲಿನ ಜಿಲ್ಲಾ ಆರೋಗ್ಯ ಸೊಸೈಟಿಯ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮದ ಪ್ರಗತಿ ಪರಿಶೀಲನೆ ಸಭೆಯಲ್ಲಿ ಜಿ.ಪಂ ಸಿಇಓ ಎಸ್.ಯುಕೇಶ್ ಕುಮಾರ್ ಮಾತನಾಡಿದರು

ಮೈಸೂರು, ಫೆ.17(ಎಂಟಿವೈ)– ಮೈಸೂರು ಜಿಲ್ಲೆಯಲ್ಲಿ ತಾಯಿ ಮತ್ತು ಶಿಶು ಮರಣ ಸಂಖ್ಯೆ ಶೂನ್ಯಗೊಳಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಜಿ.ಪಂ ಸಿಇಓ ಎಸ್.ಯುಕೇಶ್ ಕುಮಾರ್ ಸಲಹೆ ನೀಡಿದ್ದಾರೆ.

ಮೈಸೂರು ಜಿಲ್ಲಾ ಪಂಚಾಯತ್‌ನ ಡಿ.ದೇವರಾಜ ಅರಸ್ ಸಭಾಂಗಣದಲ್ಲಿ ಮಂಗಳವಾರ ನಡೆದ 2025–26ನೇ ಸಾಲಿನ ಜಿಲ್ಲಾ ಆರೋಗ್ಯ ಸೊಸೈಟಿಯ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮದ ಪ್ರಗತಿ ಪರಿಶೀಲನೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 2025ರ ಜನವರಿಯಿಂದ ಡಿಸೆಂಬರ್‌ವರೆಗೆ ಒಟ್ಟು 9 ತಾಯಿ ಮರಣ ಪ್ರಕರಣ ಸಂಭವಿಸಿದೆ. ರಾಜ್ಯ ಮಟ್ಟದ ಸರಾಸರಿ ಶೇ.69 ರಷ್ಟಿದ್ದು, ಜಿಲ್ಲೆಯ ತಾಯಿ ಮರಣ ಪ್ರಮಾಣ ಶೇ.32.2ರಷ್ಟಿದೆ. ಜಿಲ್ಲೆಯಲ್ಲಿ ತಾಯಿ ಮತ್ತು ಶಿಶುಗಳ ಮರಣ ಪ್ರಮಾಣ ಇಳಿಮುಖವಾಗಿರುವುದು ಕಂಡು ಬಂದಿದೆ. ಡಿಸೆಂಬರ್–2025 ರ ಅಂತ್ಯಕ್ಕೆ 311 ಶಿಶು ಮರಣ ಪ್ರಕರಣಗಳು ಸಂಭವಿಸಿರುತ್ತದೆ. ಪ್ರಸ್ತುತ ರಾಜ್ಯ ಮಟ್ಟದಲ್ಲಿ ಸರಾಸರಿ 19 ರಷ್ಟು ಪ್ರಮಾಣದಲ್ಲಿದೆ. ಜಿಲ್ಲೆಯ ಶಿಶು ಮರಣ ಪ್ರಮಾಣ ಸರಾಸರಿ ಶೇ.11.1 ರಷ್ಟು ಈ ಪ್ರಮಾಣವನ್ನು ಶೂನ್ಯ ಪ್ರಮಾಣಕ್ಕೆ ತರುವ ನಿಟ್ಟಿನಲ್ಲಿ ಕಾರ್ಯ ಪ್ರವೃತರಾಗುವಂತೆ ಸೂಚನೆ ನೀಡಿದರು.

ಅಪೌಷ್ಟಿಕ ಮಕ್ಕಳ ಗುರುತಿಸುವಿಕೆ ಮತ್ತು ಅಪೌಷ್ಟಿಕ ಮಕ್ಕಳನ್ನು ಎನ್.ಆರ್.ಸಿ ಕೇಂದ್ರಗಳಿಗೆ ದಾಖಲೀಕರಣ ಮಾಡುವ ನಿಟ್ಟಿನಲ್ಲಿ ಆರ್.ಬಿ.ಎಸ್.ಕೆ ವೈದ್ಯರ ತಂಡದ ಮಹತ್ವದ ಬಗ್ಗೆ ಪರಿಶೀಲನೆ ನಡೆಸಿದರು.

**ಸೇವಾ ಸಿಂಧೂ ತಂತ್ರಾಂಶದಲ್ಲಿ ನಮೂದು:** ಆರೋಗ್ಯ ಕೇಂದ್ರಗಳಲ್ಲಿ ಗರ್ಭಿಣಿ ದಾಖಲಾತಿ ಮತ್ತು ನೋಂದಣಿ, ಸಾಂಸ್ಥಿಕ ಹೆರಿಗೆಗಳ ನಿರ್ವಹಣೆ, ಜೆಎಸ್‌ವೈ ಯೋಜನೆಯಲ್ಲಿ ಅರ್ಹ ಫಲಾನುಭವಿಗಳ ಮಾಹಿತಿಯನ್ನು ಸೇವಾ ಸಿಂಧೂ ತಂತ್ರಾಂಶದಲ್ಲಿ ದಾಖಲೀಕರಣ ಮಾಡುವುದು. ಪಿಎಂಎಸ್‌ಎಂಎ ಮತ್ತು ಇ–ಪಿಎಂಎಸ್‌ಎಂಎ ಕಾರ್ಯಕ್ರಮದಲ್ಲಿ ಗರ್ಭಿಣಿಯರು ಮತ್ತು ಹೆಚ್‌ಆರ್‌ಪಿ ಗರ್ಭಿಣಿಯರು ಹಾಗೂ ಬಾಣಂತಿಯರ ಆರೋಗ್ಯ ತಪಾಸಣೆ ಒಳಪಡಿಸಿರುವುದನ್ನು ಯು–ವಿನ್ ತಂತ್ರಾಂಶದಲ್ಲಿ ದಾಖಲೀಕರಿಸಿರುವ ಮಾಹಿತಿ, ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದ ಪರಿಶೀಲನೆ ಲಸಿಕಾ ವಂಚಿತ ಮಕ್ಕಳ ಪಟ್ಟಿ ಮತ್ತು ಲಸಿಕೆ ಪಡೆದು ಫಲಾನುಭವಿಗಳ ಮಾಹಿತಿಯನ್ನು ದಾಖಲೀಕರಣ ಮಾಡಬೇಕು. ಎಂಆರ್ ಲಸಿಕೆಯಲ್ಲಿ ಪೂರ್ಣ ಪ್ರಮಾಣದಲ್ಲಿ ಪ್ರಗತಿ ಸಾಧಿಸುವ ಮೂಲಕ ದಡಾರ–ರುಬೆಲ್ಲಾ ರೋಗ ನಿರ್ಮೂಲನೆಗೆ ಶ್ರಮಿಸುವಂತೆ ತಿಳಿಸಿದರು.

**ಪ್ರಗತಿ ಸಾಧಿಸಲು ಸೂಚನೆ:** ಎನ್‌ಸಿಡಿ ಕಾರ್ಯಕ್ರಮದಡಿಯಲ್ಲಿ ಸಿ–ಬ್ಯಾಕ್ ಕಾರ್ಯಚಟುವಟಿಕೆಯ ಸಮೀಕ್ಷೆ ಮತ್ತು ಸ್ಕ್ರೀನಿಂಗ್ ಹಾಗೂ ಎನ್‌ಸಿಡಿ ಕಾರ್ಯಕ್ರಮ ಫಾಲೋ ಅಫ್ ಬಗ್ಗೆ ಪರಿಶೀಲನೆ ನಡೆಸಲಾಯಿತು. 2025–26ನೇ ಸಾಲಿನ ಆರ್ಥಿಕ ವರ್ಷದ ಅಂತಿಮ ಹಂತದಲ್ಲಿರುವುದರಿಂದ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳಿಗೆ ನಿಗದಿ ಪಡಿಸಿರುವ ಮಾರ್ಗಸೂಚಿ ಅನುಸಾರ, ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಕ್ರಿಯಾ ಯೋಜನೆಯ ರೂಪುರೇಷೆ ತಯಾರಿಸಿ ಆ ಮೂಲಕ ಪರಿಣಾಮಕಾರಿಯಾಗಿ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಿ, ಶೇ.100ರಷ್ಟು ಭೌತಿಕ ಮತ್ತು ಆರ್ಥಿಕ ಪ್ರಗತಿ ಸಾಧಿಸಲು ಕಟ್ಟುನಿಟ್ಟಾಗಿ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಪಿ.ಸಿ. ಕುಮಾರಸ್ವಾಮಿ, ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳು, ಚೆಲುವಾಂಬ ಆಸ್ಪತ್ರೆಯ ಮಕ್ಕಳ ತಜ್ಞ ವೈದ್ಯರು ಎಲ್ಲಾ ತಾಲೂಕು ಆರೋಗ್ಯ ಅಧಿಕಾರಿಗಳು, ತಾಲೂಕು ಮತ್ತು ಆರೋಗ್ಯ ಸಿಬ್ಬಂದಿ ಭಾಗವಹಿಸಿದ್ದರು.

### ರಾಷ್ಟ್ರೀಯ ಮಾನ್ಯತೆ ಗಳಿಸಿದ ಆರೋಗ್ಯ ಕೇಂದ್ರಗಳು!

ಕಾಯಕಲ್ಪ ಕಾರ್ಯಕ್ರಮದಡಿಯಲ್ಲಿ ರಾಷ್ಟ್ರೀಯ ಮಾನ್ಯತೆಗೆ ಅರ್ಹತೆ ಪಡೆದಿದ್ದು, ಅದರಂತೆ ಮೈಸೂರು–27, ನಂಜನಗೂಡು–6, ಪಿರಿಯಾಪಟ್ಟಣ–8, ಟಿ.ನರಸೀಪುರ–32, ಹೆಚ್.ಡಿ.ಕೋಟೆ–7, ಹುಣಸೂರು–16 ಮತ್ತು ಕೆ.ಆರ್.ನಗರ–27 ಒಟ್ಟು 123 ಆರೋಗ್ಯ ಕೇಂದ್ರಗಳು ರಾಷ್ಟ್ರೀಯ ಪ್ರಮಾಣೀಕರಣಕ್ಕೆ ಅರ್ಹತೆ ಪಡೆದಿರುವುದು ಶ್ಲಾಘನೀಯ. ಜಿಲ್ಲೆಯ ಎಲ್ಲಾ ಆರೋಗ್ಯ ಕೇಂದ್ರಗಳು ಪ್ರಶಸ್ತಿ ಪಡೆಯುವ ನಿಟ್ಟಿನಲ್ಲಿ ಕರ್ತವ್ಯ ನಿರ್ವಹಿಸಬೇಕು.

ಗೃಹ ಆರೋಗ್ಯ ಕಾರ್ಯಕ್ರಮವನ್ನು ನಗರ ಪ್ರದೇಶಕ್ಕೆ ವಿಸ್ತರಿಸಲು ಕ್ರಮ ಕೈಗೊಂಡಿದೆ. ಸದರಿ ಕಾರ್ಯಕ್ರಮ ಪೂರ್ವ ಸಿದ್ಧತೆಯ ಬಗ್ಗೆ ಪರಿಶೀಲನೆ ನಡೆಸಿ ಸರ್ಕಾರದ ಮಾರ್ಗಸೂಚಿ ಅನುಸಾರ ಕಾರ್ಯಕ್ರಮವನ್ನು ಅನುಷ್ಠಾನ ಮಾಡಬೇಕು. ತಾಯಿ ಆರೋಗ್ಯ, ಮಕ್ಕಳ ಆರೋಗ್ಯ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮಗಳಲ್ಲಿ ಹಾಗೂ ಸಮುದಾಯ ಮಟ್ಟದಲ್ಲಿ ಬಾಲ್ಯ ವಿವಾಹ, ಭ್ರೂಣ ಲಿಂಗ ಪತ್ತೆ ಮತ್ತು ಪೋಕ್ಸೋ ಪ್ರಕರಣಗಳ ಬಗ್ಗೆ ನಿಗಾವಹಿಸಲು ತಿಳಿಸಿದರು.

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ** | (ದೂ: 2521923) |
| ಕಾ ದಿ ಫಾರೆಸ್ಟ್ (ತ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್** | (ದೂ: 2422871) |
| ರಕ್ಕಸಪುರದೋಳ್ (ಕ) | 4 ಪ್ರದರ್ಶನಗಳು |
| **ಬಾಲಾಜಿ** | (ದೂ: 2497199) |
| ಓ ರೋಮಿಯೋ (ಹಿ) | 3 ಪ್ರದರ್ಶನಗಳು |
| **ಮಹದೇಶ್ವರ** | (ಮೊ:9900820093) |
| 45 ಫೇಸ್ ದಿ ಇಯರ್ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಲ್ಯಾಂಡ್ ಲಾರ್ಡ್ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ಪೂಕಿ (ತ) | 4 ಪ್ರದರ್ಶನಗಳು |
| **ಸಂಗಂ** | |
| ಮೈ ಲಾರ್ಡ್(ತ) | 4 ಪ್ರದರ್ಶನಗಳು |
| **ಲಿಡೋ** | |
| ಕರಗ (ಕ) + ಶಿವಲೀಲಾ (ಕ) | 3+1 ಪ್ರದರ್ಶನಗಳು |
| **ತಿಬ್ಬಾದೇವಿ** | |
| – | – |
| **ಪ್ರಭಾ** | |
| ಓ ಸುಂದರ ರಾಕ್ಷಸಿ (ಕ) + ದೈವ (ಕ) | 2+2 ಪ್ರದರ್ಶನಗಳು |

# ಬಿಡದಿ–ರಾಮನಗರ ಮಧ್ಯೆ ಹಳಿ ತಪ್ಪಿದ ಗೂಡ್ಸ್ ರೈಲು

- ಐದು ಗಂಟೆಗೂ ಅಧಿಕ ಕಾಲ ರೈಲು ಸಂಚಾರದಲ್ಲಿ ವ್ಯತ್ಯಯ
- ರದ್ದುಗೊಂಡಿದ್ದ ಮೈಸೂರು–ಬೆಂಗಳೂರು ರೈಲು ಸಂಚಾರ

ಮೈಸೂರು,ಫೆ.17(ಪಿಎಂ)– ಬಿಡದಿ ಮತ್ತು ರಾಮನಗರದ ಮಧ್ಯೆ ಗೂಡ್ಸ್ ರೈಲು ಮಂಗಳವಾರ ಸಂಜೆ ಹಳಿ ತಪ್ಪಿದ ಪರಿಣಾಮ ಐದು ಗಂಟೆಗೂ ಅಧಿಕ ಕಾಲ ಮೈಸೂರು–ಬೆಂಗಳೂರು ನಡುವೆ ರೈಲು ಸಂಚಾರದಲ್ಲಿ ವ್ಯತ್ಯಯ ಉಂಟಾಗಿತ್ತು ಅದೃಷ್ಟವಶಾತ್ ಯಾವುದೇ ಅನಾಹುತ ಸಂಭವಿಸಿಲ್ಲ.

ಬೆಂಗಳೂರಿನಿಂದ ಮದ್ದೂರಿಗೆ ತೆರಳುತ್ತಿದ್ದ ಖಾಲಿ ಗೂಡ್ಸ್ ರೈಲು (ಎನ್‌ಎಂಜಿ ರೈಲು) ಬಿಡದಿ ಸಮೀಪದ ದಾಸಪ್ಪನದೊಡ್ಡಿ ಬಳಿ ಸಂಜೆ 5 ಗಂಟೆ ಸುಮಾರಿಗೆ ತಾಂತ್ರಿಕ ದೋಷದಿಂದ ಹಳಿ ತಪ್ಪಿತು. ಬೋಗಿಯೊಂದರ ಚಕ್ರವು ಹಳಿ ತಪ್ಪಿದ ಕೂಡಲೇ ಲೋಕೋಪೈಲಟ್ ರೈಲನ್ನು ನಿಲ್ಲಿಸಿ ಯಾವುದೇ ಅನಾಹುತಕ್ಕೆ ಆಸ್ಪದ ಆಗದಂತೆ ಸಮಯ ಪ್ರಜ್ಞೆ ಮೆರೆದಿದ್ದಾರೆ.



ಬಿಡದಿ ಮತ್ತು ರಾಮನಗರದ ನಡುವೆ ಗೂಡ್ಸ್ ರೈಲು ಹಳಿ ತಪ್ಪಿ ನಿಂತಿರುವುದು.

ಇದರ ಪರಿಣಾಮ ಬೆಂಗಳೂರಿನಿಂದ ಮೈಸೂರಿಗೆ ಹೊರಟಿದ್ದ ರೈಲುಗಳು ಗಂಟೆಗಟ್ಟಲೆ ಕಾದು ನಿಲ್ಲಬೇಕಾಯಿತು. ಸಂಜೆ 6.25ಕ್ಕೆ ಬೆಂಗಳೂರಿನಿಂದ ಮೈಸೂರಿಗೆ ಹೊರಡಬೇಕಿದ್ದ ಎಕ್ಸ್‌ಪ್ರೆಸ್ ರೈಲು (16216), ಬೆಂಗಳೂರು–ಅಶೋಕಪುರಂ ರೈಲು (06525), ಅಶೋಕಪುರಂ–ಬೆಂಗಳೂರು ರೈಲು (06526) ಹಾಗೂ ಅಶೋಕಪುರಂ–ಬೆಂಗಳೂರು ರೈಲು (66580)ಗಳ ಸಂಚಾರ ರದ್ದುಗೊಳಿಸಲಾಗಿತ್ತು ರಾತ್ರಿ 10 ಗಂಟೆ ವೇಳೆಗೆ ಹಳಿಯನ್ನು ಸಹಜ ಸ್ಥಿತಿಗೆ ತರಲಾಯಿತು. ಆ ಬಳಿಕ ರೈಲುಗಳ ಸಂಚಾರ ಪುನರಾರಂಭಗೊಂಡಿತು.

## ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಫೆ.17(ಪಿಎಂ)– ಬನ್ನಿಕುಪ್ಪೆ 66/11 ವಿದ್ಯುತ್ ವಿತರಣಾ ಕೇಂದ್ರದಲ್ಲಿ 4ನೇ ತ್ರೈಮಾಸಿಕ ನಿರ್ವಹಣಾ ಕಾರ್ಯ ಕೈಗೊಳ್ಳುವ ಕಾರಣ ಫೆ.18ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಬನ್ನಿಕುಪ್ಪೆ, ಮರದೂರು, ಉದ್ಬೂರು ಗ್ರಾಮ ಪಂಚಾಯಿತಿ ವ್ಯಾಪ್ತಿ ಮತ್ತು ಸುತ್ತಮುತ್ತಲ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ಹಾಗಾಗಿ ಸಾರ್ವಜನಿಕರು ಸಹಕರಿಸಬೇಕೆಂದು ಸೆಸ್ಕ್‌ನ ಬಿಳಿಕೆರೆ ಉಪವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ಕೋರಿದ್ದಾರೆ.

# ಒಂಟಿ ಸಲಗ ದಾಳಿ; ರೈತ ಬಲಿ

ಮೈಸೂರು, ಫೆ17(ಎಂಟಿವೈ)– ಒಂಟಿ ಸಲಗವೊಂದು ಹೊಲದಲ್ಲಿ ಹುಲ್ಲು ಕೀಳುತ್ತಿದ್ದ ರೈತರೊಬ್ಬರ ಮೇಲೆ ಹಾಡಹಗಲೇ ದಾಳಿ ಮಾಡಿ ಬಲಿ ಪಡೆದಿರುವ ಘಟನೆ ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲೂಕಿನ ತಲಕಾಡು ಹೋಬಳಿಯ ಪರಿಣಾಮಿಪುರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಗುರುಮಲ್ಲಪ್ಪ(69) ಆನೆಗೆ ಬಲಿಯಾದವರಾಗಿದ್ದಾರೆ. ಇಂದು ಬೆಳಗ್ಗೆ ಜಾನುವಾರುಗಳಿಗೆ ಮೇವು ತರಲೆಂದು ಹೊಲಕ್ಕೆ ಹೋಗಿದ್ದ ಗುರುಮಲ್ಲಪ್ಪ ಅವರು ಹೊಲದಲ್ಲಿ ಹುಲ್ಲು ಕುಯ್ಯುತ್ತಿದ್ದಾಗ ಏಕಾಏಕಿ ಒಂಟಿ ಸಲಗ ಮೇಲೆರಗಿದೆ. ನೆಲಕ್ಕುರುಳಿದ ಗುರುಮಲ್ಲಪ್ಪ ಅವರನ್ನು ಸೊಂಡಿಲಿನಿಂದ ಮೇಲೆತ್ತಿ ಒಗೆದಿದೆ ಅಲ್ಲದೆ, ಸುಮಾರು 300 ಮೀಟರ್ ವರೆಗೂ ದೇಹವನ್ನು ಕಾಲಿನಿಂದ ನೆಲಕ್ಕೆ ಉಜ್ಜಿ ಕೊನೆಗೆ ಬಿಸಾಡಿ ಹೋಗಿದೆ. ಆನೆ ದಾಳಿ ಮಾಡಿರುವುದು ಬಹಳ ಹೊತ್ತಿನ ವರೆಗೆ ಸ್ಥಳೀಯರಿಗೆ ಗೊತ್ತೇ ಆಗಿಲ್ಲ.

**ತಡವಾಗಿ ಬೆಳಕಿಗೆ ಬಂದ ಆನೆ ದಾಳಿ ಪ್ರಕರಣ:** ಜಾನುವಾರುಗಳಿಗೆ ಮೇವು ತರಲು ಹೊಲಕ್ಕೆ ಹೋಗಿದ್ದ ಗುರು ಮಲ್ಲಪ್ಪ ಅವರು ಮಧ್ಯಾಹ್ನವಾದರೂ ಮನೆಗೆ ವಾಪಸ್ಸು ಬರದೇ ಇದ್ದಾಗ ಮಕ್ಕಳು ಹೊಲದ ಬಳಿ ಹೋಗಿ ನೋಡಿದ್ದಾರೆ. ಈ ವೇಳೆ ಹೊಲದಲ್ಲಿ ಗುರುಮಲ್ಲಪ್ಪ ಅವರ ಬಟ್ಟೆ, ಚಪ್ಪಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದು, ಆನೆ ಹೆಜ್ಜೆ ಗುರುತು ಕಂಡು ಬಂದಿದೆ. ಕೂಡಲೇ ಗ್ರಾಮಸ್ಥರು ಅರಣ್ಯ ಸಿಬ್ಬಂದಿ ಹಾಗೂ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಬಂದ ಪೊಲೀಸರು ಹಾಗೂ ಅರಣ್ಯ ಸಿಬ್ಬಂದಿ ಪರಿಶೀಲಿಸಿದ್ದು, ಆನೆ ದಾಳಿ ನಡೆಸಿರುವುದು ದೃಢಪಟ್ಟಿದೆ. ಕೂಡಲೇ ಡ್ರೋನ್ ಸೇರಿದಂತೆ ಪೊಲೀಸರೊಂದಿಗೆ ಹುಡುಕಾಟ ನಡೆಸಿದರೂ ಮೃತದೇಹ ಪತ್ತೆಯಾಗಲಿಲ್ಲ. ಸಂಜೆ 4 ಗಂಟೆ ವೇಳೆಗೆ ದಾಳಿ ನಡೆದ ಸ್ಥಳದಿಂದ 300 ಮೀಟರ್ ದೂರದಲ್ಲಿ ಮೃತದೇಹ ಪತ್ತೆಯಾಗಿದೆ. ಅಲ್ಲದೆ, ಘಟನೆ ನಡೆದ ಸ್ಥಳದಿಂದ ಒಂದು ಕಿ.ಮಿ. ದೂರದ ತೋಟವೊಂದರಲ್ಲಿ ಒಂಟಿ ಸಲಗ ಇರುವುದು ಕಂಡು ಬಂದಿದೆ



ಗುರುಮಲ್ಲಪ್ಪ

**ಆನೆ ಓಡಾಟ ವಿರಳ:** ತಲಕಾಡು ಭಾಗದಲ್ಲಿ ಇದುವರೆಗೆ ಐದಾರು ಬಾರಿಯಷ್ಟೇ ಕಾಡಾನೆ ಪ್ರತ್ಯಕ್ಷವಾಗಿದ್ದು, ಯಾವುದೇ ದಾಳಿ ಪ್ರಕರಣ ನಡೆದಿರಲಿಲ್ಲ. ಕಳೆದ 2–3 ತಿಂಗಳ ಹಿಂದೆ 3–4 ಆನೆಗಳು ಈ ಭಾಗದಲ್ಲಿ ಓಡಾಡಿದ್ದವು. ಅದನ್ನು ಹೊರತುಪಡಿಸಿದರೆ, ಒಂಟಿ ಸಲಗದ ಉಪಟಳದಿಂದ ಜನ–ಜಾನುವಾರುಗಳಿಗೆ ತೊಂದರೆಯಾಗಿರಲಿಲ್ಲ.

**ಮಳವಳ್ಳಿ ಕಡೆಯಿಂದ ಬಂದಿರುವ ಸಲಗ:** ಇಂದು ತಲಕಾಡು ಬಳಿ ದಾಳಿ ನಡೆಸಿರುವ ಒಂಟಿ ಸಲಗ ಮಳವಳ್ಳಿ ಕಡೆಯಿಂದ ಮುತ್ತತ್ತಿ ಅರಣ್ಯ ಪ್ರದೇಶದಿಂದ ಬಂದಿರುವ ಶಂಕೆ ವ್ಯಕ್ತವಾಗಿದೆ. ಕಾಡಾನೆ ಓಡಾಟ ಯಾರ ಕಣ್ಣಿಗೂ ಬಿದ್ದಿಲ್ಲದೇ ಇರುವುದರಿಂದ ಯಾರಿಗೂ ಮಾಹಿತಿ ಗೊತ್ತಾಗಿಲ್ಲ. ತಲಕಾಡು ಹೋಬಳಿಯ ಪರಿಣಾಮಿಪುರಿ ಗ್ರಾಮದ ಬಳಿ ಕಬ್ಬಿನ ಗದ್ದೆಯಲ್ಲಿ ಆಶ್ರಯ ಪಡೆದಿದ್ದ ಸಲಗ ಆಕಸ್ಮಿಕವಾಗಿ ಹುಲ್ಲು ಕುಯ್ಯುತ್ತಿದ್ದ ವ್ಯಕ್ತಿಯಿದ್ದ ಜಾಡಿನಲ್ಲಿ ಬಂದು ದಾಳಿ ಮಾಡಿದೆ. ದಾಳಿನುತುರ ಆ ಆನೆಯೂ ಗಾಬರಿಗೊಳಗಾಗಿ ತೋಟವೊಂದರ ಪೊದೆಯಲ್ಲಿ ಅವಿತುಕೊಂಡಿತ್ತು.

**ಸ್ಥಳದಲ್ಲಿ ಜಮಾಯಿಸಿದ ಜನ:** ಕಾಡಾನೆ ದಾಳಿಗೆ ಗುರುಮಲ್ಲಪ್ಪ ಮೃತಪಟ್ಟ ಹಿನ್ನೆಲೆಯಲ್ಲಿ ಪರಿಣಾಮಿಪುರ ಗ್ರಾಮದ ಸ್ಥಳಕ್ಕೆ ಆಗಮಿಸಿ ಜಮಾಯಿಸಿದರು. ಈ ವೇಳೆ ಮೃತರ ಪತ್ನಿ ಶಿವಮ್ಮ, ಮಗ ಜಿ.ರವಿ, ಮಗಳು ಪವಿತ್ರ ಸೇರಿದಂತೆ ಸಂಬಂಧಿಗಳು ಸ್ಥಳಕ್ಕಾಗಮಿಸಿ ನ್ಯಾಯಕ್ಕಾಗಿ ಆಗ್ರಹಿಸಿದರು. ಸ್ಥಳಕ್ಕೆ ಅರಣ್ಯಾಧಿಕಾರಿಗಳು ಬಂದು ಸೂಕ್ತ ಪರಿಹಾರ ಘೋಷಿಸುವವರೆಗೂ ಮೃತದೇಹವನ್ನು ಸ್ಥಳಾಂತರ ಮಾಡದಂತೆ ಆಗ್ರಹಿಸಿದರು.


ಡಿಎಫ್‌ಓ ಬರುವವರೆಗೂ ಪ್ರತಿಭಟನೆ ಕೈಬಿಡುವುದಿಲ್ಲ, ಸ್ಥಳದಲ್ಲೇ 25 ಲಕ್ಷ ರೂ. ಪರಿಹಾರ ನೀಡಬೇಕು ಎಂದು ಪಟ್ಟು ಹಿಡಿದರು. ಈ ವೇಳೆ ಸ್ಥಳದಲ್ಲಿದ್ದ ಅರಣ್ಯಾಧಿಕಾರಿ ಹಾಗೂ ತಹಶಿಲ್ದಾರ್, ಈಗ 5 ಲಕ್ಷ ರೂ. ಚೆಕ್ ನೀಡಿ, ನಂತರ ಸರ್ಕಾರದಿಂದ 10 ಲಕ್ಷ ರೂ. ಪರಿಹಾರ ಕೊಡಿಸುವುದಾಗಿ ಭರವಸೆ ನೀಡಿದರು. ಆದರೂ ಪ್ರತಿಭಟನಾನಿರತರು ತಮ್ಮ ಪಟ್ಟು ಸಡಿಲಿಸಲಿಲ್ಲ. ಕಡೆಗೆ ಅಧಿಕಾರಿಗಳು ಗ್ರಾಮಸ್ಥರ ಮನವೊಲಿಸಿ, ಮೃತರ ಕುಟುಂಬಕ್ಕೆ 5 ಲಕ್ಷ ರೂ. ಚೆಕ್ ನೀಡಿದ ನಂತರ ದೇಹವನ್ನು ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸಾಗಿಸಲಾಯಿತು. ಈ ಸಂಬಂಧ ತಲಕಾಡು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಫೆ. 17– ಮೈಸೂರಿನ ಲಕ್ಷ್ಮೀಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಫೆ. 19 ರಂದು ಬೆಳಗ್ಗೆ 10 ರಿಂದ ಸಂಜೆ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

# ಕಪ್ಪು ನರಿ ಎಂದು ಹೇಳಿ ಸುಳ್ಳು ಸುದ್ದಿ ಹರಡುವವರ ವಿರುದ್ಧ ಕ್ರಮದ ಎಚ್ಚರಿಕೆ

ಮೈಸೂರು, ಫೆ.17(ಎಂಟಿವೈ)– ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲದ ಬಳಿ ಕಪ್ಪು ನರಿ ಪ್ರತ್ಯಕ್ಷವಾದ ಚಿತ್ರವೊಂದು ವೈರಲ್ ಆಗಿದ್ದು, ಅದು ಸುಳ್ಳು ಎಂದು ಅರಣ್ಯಾಧಿಕಾರಿಗಳು ಸ್ಪಷ್ಟನೆ ನೀಡಿದ್ದು, ಹೀಗೆ ಸುಳ್ಳು ಸುದ್ದಿ ಹಬ್ಬಿಸುವವರ ವಿರುದ್ಧ ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಿದ್ದಾರೆ.



ಚಾಮರಾಜನಗರದ ಕೊಳ್ಳೇಗಾಲದ ಮುಡುಗುಂಡದಿಂದ ಬಿಳಿಗಿರಿ ರಂಗನಬೆಟ್ಟದ ವಡ್ಡುಗೆರೆಗೆ ಹೋಗುವ ರಸ್ತೆಯ ಬದಿ ಕಪ್ಪು ನರಿ ಪ್ರತ್ಯಕ್ಷವಾಗಿದೆ. ಇಬ್ಬರು ಛಾಯಾಗ್ರಾಹಕರು ಅದರ ಫೋಟೋ ತೆಗೆದಿದ್ದಾರೆ ಎಂದು ಛಾಯಾಗ್ರಾಹಕರೊಬ್ಬರು ವಿವಿಧ ವಾಟ್ಸಪ್ ಗ್ರೂಪ್‌ಗಳಲ್ಲಿ ಹರಿಬಿಟ್ಟಿದ್ದರು. ಇದು ಚಾಮರಾಜನಗರ ಜಿಲ್ಲೆಯ ಅರಣ್ಯಾಧಿಕಾರಿಗಳ ಗಮನಕ್ಕೂ ಬಂದಿತ್ತು. ವೈರಲ್ ಆದ ಫೋಟೊ 2012ರ ಜೂನ್ 27ರಂದು ಪ್ರಾನ್ಸ್ ವೆಬ್‌ಸೈಟ್‌ವೊಂದರಲ್ಲಿ ಪ್ರಕಟವಾಗಿದ್ದು, 'ದ್ವೀಪದಲ್ಲಿ ಕಪ್ಪು ನರಿ' ಶೀರ್ಷಿಕೆಯಲ್ಲಿ ಫೋಟೊ ಪ್ರಕಟಗೊಂಡಿದೆ. ಆದರೆ, ಅದೇ ಫೋಟೊ ಬಳಸಿಕೊಂಡು ಕೊಳ್ಳೇಗಾಲದ ಬಳಿ ಕಪ್ಪು ನರಿ ಪ್ರತ್ಯಕ್ಷವಾಗಿರುವುದಾಗಿ ತಪ್ಪು ಮಾಹಿತಿ ರವಾನಿಸಿ, ವೈರಲ್ ಮಾಡಲಾಗಿದೆ.

ಈ ಸಂಬಂಧ ಚಾಮರಾಜನಗರ ಜಿಲ್ಲೆಯ ಸಿಸಿಎಫ್ ಡಾ.ಮಾಲತಿ ಪ್ರಿಯಾ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಸುಳ್ಳು ಸುದ್ದಿ ವೈರಲ್ ಮಾಡುವವರ ವಿರುದ್ಧ ಅರಣ್ಯ ಇಲಾಖೆ ಕ್ರಮ ಕೈಗೊಳ್ಳಲಿದೆ. ಕಪ್ಪು ನರಿ ಚಿತ್ರ ವೈರಲ್ ಆಗಿರುವ ಸಂಬಂಧ ಪರಿಶೀಲಿಸಲು ಡಿಸಿಎಫ್‌ಗೆ ಸೂಚನೆ ನೀಡುತ್ತೇನೆ. ಉದ್ದೇಶಪೂರ್ವಕವಾಗಿ ವೈರಲ್ ಮಾಡಿದ್ದರೆ, ಅವರಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುತ್ತದೆ ಎಂದರು.

## ಕನಕದಾಸ ಮಂಡಳಿ ನೂತನ ಪದಾಧಿಕಾರಿಗಳು

ಮೈಸೂರು, ಫೆ. 17–ಮೈಸೂರಿನ ಕನಕದಾಸ ಮಂಡಳಿ ವಿದ್ಯಾರ್ಥಿನಿಲಯದ ಆವರಣದಲ್ಲಿ ನಡೆದ ವಿಶೇಷ ವಾರ್ಷಿಕ ಮಹಾಸಭೆಯಲ್ಲಿ 2025–26 ರಿಂದ 2029–30ರ ಸಾಲಿನ ಐದು ವರ್ಷಗಳ ಅವಧಿಗೆ ಆಡಳಿತ ಮಂಡಳಿಯ ಪದಾಧಿಕಾರಿಗಳಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ರಾಹುಲ್ ಕನ್ವೆನ್ಷನ್ ಹಾಲ್ ಮಾಲೀಕ ಎಸ್. ಮೂರ್ತಿ–ಅಧ್ಯಕ್ಷ, ಮೈಸೂರು ವಿವಿ ಕಾರ್ಯನಿರ್ವಾಹಕ ಅಭಿಯಂತರ ಆರ್. ಭಾಸ್ಕರ್–ಉಪಾಧ್ಯಕ್ಷ, ಅಕ್ಷಯ ಸೋಲಾರ್ ಮಾಲೀಕ ಜೆ. ಶ್ರೀನಿವಾಸ–ಕಾರ್ಯದರ್ಶಿ, ಗೃಹರಕ್ಷಕದಳದ ನಿವೃತ್ತ ಹಿರಿಯ ಪ್ಲಟೂನ್ ಕಮಾಂಡರ್–ಸಹ ಕಾರ್ಯದರ್ಶಿ, ಸಿವಿಲ್ ಗುತ್ತಿಗೆದಾರ ಎಂ. ಮಹಾದೇವ–ಖಜಾಂಚಿ.

ಸಿ. ಮಹದೇವ್, ಶ್ರೀಮತಿ ಚಿಕ್ಕಮ್ಮ ಬಸವರಾಜ್, ಎಸ್. ಮಹಾದೇವ್, ಹೆಚ್. ಶೇಖರ್, ಎಂ.ಸಿ. ಮಲ್ಲೇಶ್, ಎನ್. ಮನೋಜ್, ಎಂ. ದೇವರಾಜು, ಪಿ. ಗುರುರಾಜ್, ಕುಮಾರ, ಬೀರೇಗೌಡ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

# ಚಾಮುಂಡಿಬೆಟ್ಟ ಸಂರಕ್ಷಣೆ ನಿಟ್ಟಿನಲ್ಲಿ ತುರ್ತು ಕ್ರಮಕ್ಕೆ ಪರಿಸರ ಕಾರ್ಯಕರ್ತರಿಂದ ಶಾಸಕ ಜಿ.ಟಿ.ದೇವೇಗೌಡರಿಗೆ ಮನವಿ ಸಲ್ಲಿಕೆ

## ಬೆಟ್ಟದ ಸಹಜ ಸೌಂದರ್ಯ ನಶಿಸುತ್ತಿರುವುದಕ್ಕೆ ಬೇಸರ



'ಪರಿಸರಕ್ಕಾಗಿ ನಾವು' ಸಂಘಟನೆಯ ಸದಸ್ಯರ ನಿಯೋಗವು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರಿಗೆ ಮನವಿ ಸಲ್ಲಿಸಿತು.

ಮೈಸೂರು, ಫೆ.17– ಚಾಮುಂಡಿಬೆಟ್ಟ ಸಂರಕ್ಷಣೆ ನಿಟ್ಟಿನಲ್ಲಿ ತುರ್ತು ಕ್ರಮಗಳಿಗೆ ಆಗ್ರಹಿಸಿ 'ಪರಿಸರಕ್ಕಾಗಿ ನಾವು' ಪರಿಸರ ಕಾರ್ಯಕರ್ತರ ರಾಜ್ಯ ಸಂಘಟನೆಯು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರಿಗೆ ಮನವಿ ಸಲ್ಲಿಸಿದೆ.

ಚಾಮುಂಡಿಬೆಟ್ಟ ಮೈಸೂರಿನ ಹೆಮ್ಮೆಯ ಹೆಗ್ಗುರುತು. ನಾಡ ಅಧಿದೇವತೆ ಚಾಮುಂಡೇಶ್ವರಿಯ ನೆಲೆವೀಡು. ಲಕ್ಷಾಂತರ ಭಕ್ತರು ನಂಬಿ ನಡೆದುಕೊಳ್ಳುವ ಧಾರ್ಮಿಕ ಮತ್ತು ಪಾರಂಪರಿಕ ತಾಣ. ಬೆಟ್ಟವು ಸಂರಕ್ಷಿತ ಅರಣ್ಯ ಪ್ರದೇಶವೂ ಹೌದು. ಅಪರೂಪದ ಸಸ್ಯಗಳು, ಪ್ರಾಣಿ–ಪಕ್ಷಿ–ಚಿಟ್ಟೆಗಳ ಆಶ್ರಯ ತಾಣ. ಮೈಸೂರು ನಗರ ಮತ್ತು ಸುತ್ತಲಿನ ಹಳ್ಳಿಗಳಿಗೆ ಪ್ರಮುಖ ಜಲ ಮೂಲವೂ ಆಗಿದೆ. ಆದರೆ, ಪ್ರಸ್ತುತ ಬೆಟ್ಟದ ಚಿತ್ರಣವೇ ಬದಲಾಗುತ್ತಿದೆ. ಎಲ್ಲೆಂದರಲ್ಲಿ ಆಟಿಕೆ, ಸೀರೆ ಅಂಗಡಿಗಳು, ತಿಂಡಿ ಬಂಡಿಗಳು, ಪ್ಲಾಸ್ಟಿಕ್ ಮತ್ತು ಕಸದ ರಾಶಿಗಳು, ವಿಪರೀತ ಸಂಚಾರ ದಟ್ಟಣೆಯಿಂದಾಗಿ ಬೆಟ್ಟವು ಧಾರ್ಮಿಕ ಪಾವಿತ್ರ್ಯ, ಪಾರಂಪರಿಕ ಸ್ವರೂಪ ಮತ್ತು ಪ್ರಾಕೃತಿಕ ಸೌಂದರ್ಯವನ್ನು ಕಳೆದುಕೊಳ್ಳುತ್ತಿದೆ. ಧಾರ್ಮಿಕ ಶ್ರದ್ಧಾ ಕೇಂದ್ರದಲ್ಲಿ ಇರಬೇಕಾದ ಸ್ವಚ್ಛತೆ, ಪ್ರಶಾಂತತೆ ಮಾತ್ರವಲ್ಲದೆ ಬೆಟ್ಟದ ಸಹಜ ಸೌಂದರ್ಯವೂ ಮರೆಯಾಗುತ್ತಿದೆ.

ಚಾಮುಂಡಿಬೆಟ್ಟದ ಸಂರಚನೆ ತುಂಬಾ ಸೂಕ್ಷ್ಮ ಮತ್ತು ದುರ್ಬಲವಾಗಿದೆ ಎಂಬುದು ತಜ್ಞರ ಅಭಿಪ್ರಾಯ. ಇಂತಹ ಬೆಟ್ಟದ ಮೇಲೆ ಕಳೆದ 25 ವರ್ಷಗಳಲ್ಲಿ ವಿಪರೀತ ಮನೆಗಳು ಮತ್ತು ಕಟ್ಟಡಗಳನ್ನು ನಿರ್ಮಿಸಲಾಗಿದೆ. ಇದುವರೆಗೆ ಬೆಟ್ಟದ ಧಾರಣಾ ಸಾಮರ್ಥ್ಯ ಮತ್ತು ಪರಿಸರದ ಮೇಲಾಗುವ ಪರಿಣಾಮಗಳ ಮೌಲ್ಯಮಾಪನ ಮಾಡಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಇನ್ನೂ ಕಟ್ಟಡಗಳನ್ನು ಕಟ್ಟುತ್ತಾ ಹೋದರೆ ಅಪಾಯಗಳು ಖಚಿತ. ಇದರಿಂದ ಅವಘಡಗಳು ಸಂಭವಿಸಿ, ಜೀವಹಾನಿಯೂ ಆಗಬಹುದು ಎಂದು ತಜ್ಞರು ಎಚ್ಚರಿಸುತ್ತಲೇ ಇದ್ದಾರೆ. ಈ ಹಿಂದೆ ರಸ್ತೆ, ಗುಡ್ಡ ಕುಸಿತಗಳು ಆಗಿವೆ ಎಂದು ಮನವಿ ಪತ್ರದಲ್ಲಿ ಆತಂಕ ವ್ಯಕ್ತಪಡಿಸಲಾಗಿದೆ.

**ಸಂಘಟನೆಯ ಹಕ್ಕೊತ್ತಾಯಗಳು:** ಆಧ್ಯಾತ್ಮಿಕ ಕೇಂದ್ರಗಳ ಪುನರುಜ್ಜೀವನದ ಹೆಸರಿನಲ್ಲಿ ಚಾಮುಂಡಿಬೆಟ್ಟದ ಮೇಲೆ ಕಟ್ಟಡಗಳನ್ನು ನಿರ್ಮಿಸುವ ಮೂಲಕ ಮುಂದಿನ ದಿನಗಳಲ್ಲಿ ದೊಡ್ಡ ಅನಾಹುತ ಸಂಭವಿಸದಂತೆ ಹಾಗೂ ಪರಿಸರದ ಪ್ರಶಾಂತತೆಗೆ ಭಂಗವಾಗದಂತೆ ತಡೆಯಲು 'ಪ್ರಸಾದ್' ಯೋಜನೆ ಕಾಮಗಾರಿಗಳನ್ನು ತಕ್ಷಣ ನಿಲ್ಲಿಸಲು ಕ್ರಮ ಕೈಗೊಳ್ಳುವುದು. ಇಐಎ ಮತ್ತು ಬೆಟ್ಟದ ಧಾರಣಾ ಶಕ್ತಿಯನ್ನು ಪರೀಕ್ಷೆ ಮಾಡಿಸಲು ಕ್ರಮವಹಿಸುವುದು. ಗೋಪಾಲಸ್ವಾಮಿ ಬೆಟ್ಟದಲ್ಲಿರುವಂತೆ ಎಲ್ಲಾ ಖಾಸಗಿ ವಾಹನಗಳ ಸಂಚಾರವನ್ನು ನಿಷೇಧಿಸುವುದು. ಕೇಂದ್ರ ಸರ್ಕಾರದ 'ಪ್ರಸಾದ್' ಯೋಜನೆ ಹಣವನ್ನು ಬೆಟ್ಟದ ತಪ್ಪಲಿನ ಸೂಕ್ತ ಜಾಗದಲ್ಲಿ ಪಾರ್ಕಿಂಗ್ ಸ್ಥಳ ನಿರ್ಮಾಣಕ್ಕೆ ಬಳಸುವುದು. ಬೆಟ್ಟದ ಮೇಲೆ ಪ್ಲಾಸ್ಟಿಕ್ ಕವರ್, ಪ್ಲಾಸ್ಟಿಕ್ ಅಂಶವುಳ್ಳ ಫ್ಲೆಕ್ಸ್, ಬ್ಯಾನರ್, ತಟ್ಟೆ, ಲೋಟ, ಬಾಟಲ್ ಇತ್ಯಾದಿ ವಸ್ತುಗಳ ಬಳಕೆಯನ್ನು ಸಂಪೂರ್ಣ ನಿಷೇಧಿಸಿ, ಬಳಸಿದವರಿಗೆ ದಂಡ ವಿಧಿಸುವುದು. ಸಮರ್ಪಕ ತ್ಯಾಜ್ಯ ವಿಲೇವಾರಿ ನಿರ್ವಹಣೆ ಜೊತೆಗೆ ಎಲ್ಲೆಂದರಲ್ಲಿ ಕಸ ಹಾಕುವವರಿಗೆ ದಂಡ ಹಾಕುವುದು. ಅಂಗಡಿ ಮಳಿಗೆಗಳು, ವ್ಯಾಪಾರಿ ಕೇಂದ್ರಗಳನ್ನು ನಿಯಂತ್ರಿಸುವುದು. ಚಾಮುಂಡಿಬೆಟ್ಟದ ಪ್ರಾಧಿಕಾರವನ್ನು ಪುನರ್ ರಚನೆ ಮಾಡಿ, ಭೂ ವಿಜ್ಞಾನಿ, ಪರಿಸರ ತಜ್ಞ, ಜಲತಜ್ಞ ಮತ್ತು ಪಾರಂಪರಿಕ ತಜ್ಞರನ್ನು ಪ್ರಾಧಿಕಾರದ ಸದಸ್ಯರನ್ನಾಗಿ ನೇಮಕ ಮಾಡುವುದು.

ಶಾಸಕರಿಗೆ ಮನವಿ ಸಲ್ಲಿಸಿದ ನಿಯೋಗದಲ್ಲಿ 'ಪರಿಸರಕ್ಕಾಗಿ ನಾವು' ಸಂಘಟನೆಯ ಪ್ರಧಾನ ಕಾರ್ಯದರ್ಶಿ ಪರಶುರಾಮೇಗೌಡ, ಪಿಯುಸಿಎಲ್‌ನ ಕಮಲ್ ಗೋಪಿನಾಥ್, ಡಾ.ಎನ್.ಎಸ್.ರಂಗರಾಜು, ಭಾಮಿ ಶೆಣೈ, ಪ್ರೊ.ಕಾಳೇಗೌಡ ನಾಗವಾರ, ಡಾ.ಕಾಳಚನ್ನೇಗೌಡ, ಪ್ರಭಾ ನಂದೀಶ್, ಲೀಲಾ ಶಿವಕುಮಾರ್, ಗಂಟಯ್ಯ, ಬಾನು ಪ್ರಶಾಂತ್, ಗೋಕುಲ್, ಗಾಯತ್ರಿ, ರಾಜೇಶ್, ವಿಶ್ವನಾಥ್, ಮಧುಶ್ರೀ ಮುಂತಾದವರಿದ್ದರು.

ನಿಯೋಗದ ಎಲ್ಲಾ ಸದಸ್ಯರ ಅಭಿಪ್ರಾಯವನ್ನು ಆಲಿಸಿದ ಶಾಸಕ ಜಿ.ಟಿ. ದೇವೇಗೌಡರು, ಚಾಮುಂಡಿ ಬೆಟ್ಟದ ಸಂರಕ್ಷಣೆಗಾಗಿ ಶಕ್ತಿಮೀರಿ ಪ್ರಯತ್ನಿಸುವುದಾಗಿ ಭರವಸೆ ನೀಡಿದರಲ್ಲದೆ, ತಕ್ಷಣ ಪರಿಸರ ಸಂಘಟನೆಗಳ ಪ್ರತಿನಿಧಿಗಳ ಸಭೆ ಕರೆದು ಚರ್ಚಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದರು.

# ನಿರ್ವಹಣೆ ಕೊರತೆಯಿಂದ ಅವಸಾನದತ್ತ ಸಾಗಿದ ಉದ್ಯಾನವನ!

ಮೈಸೂರು, ಫೆ.17(ವಿವಿಹೆಚ್)– ಜನರನ್ನು ಹೆಚ್ಚು ಆಕರ್ಷಿಸಬೇಕಾದ ಉದ್ಯಾನವನವೊಂದು ಕಳಪೆ ನಿರ್ವಹಣೆಯಿಂದ ಕನಿಷ್ಠ ಸೌಕರ್ಯವೂ ಇಲ್ಲದೆ ದುಸ್ಥಿತಿ ಹಂತಕ್ಕೆ ಬಂದು ತಲುಪಿದೆ.



ಪಾರ್ಕ್‌ನ ಮುಖ್ಯದ್ವಾರ ಇಲ್ಲದೇ ಇರುವುದು.

ತನ್ನ ಮುರಿದ ಗೇಟ್ ಮತ್ತು ಕಸರತ್ತು ಪರಿಕರಗಳು, ಒಣ ಕಸದ ರಾಶಿ, ಒಳಾಂಗಣ ಸುತ್ತ ಬೆಳೆದು ನಿಂತಿರುವ ಗಿಡ–ಗಂಟಿಗಳು ಚರಂಡಿಗೆ ಮುಚ್ಚಲು ಹಾಕಿರುವ ಸ್ಲ್ಯಾಬ್ ಹೊಡೆದಿರುವುದು ಇದು ಗಂಗೋತ್ರಿ ಬಡಾವಣೆಯ ಪಾರ್ಕ್‌ವೊಂದರ ಅವ್ಯವಸ್ಥೆಯ ಚಿತ್ರಣ.

ನಗರದ ಗಂಗೋತ್ರಿ ಹುಡ್ಕೋ ಬಡಾವಣೆಯ 5ನೇ ಅಡ್ಡ ರಸ್ತೆಯ ಒಂದನೇ 'ಎ' ಅಡ್ಡ ರಸ್ತೆಯಲ್ಲಿರುವ ಎರಡು ಪಾರ್ಕ್‌ಗಳು ಸಂಪೂರ್ಣವಾಗಿ ಹಾಳಾಗಿದ್ದು, ಸಮರ್ಪಕ ನಿರ್ವಹಣೆ ಇಲ್ಲದೇ ಹಾಳಾಗಿದೆ. ಇದರಿಂದಾಗಿ ಸಂಜೆ ವೇಳೆ ವಾಯುವಿಹಾರಕ್ಕೆ ತೆರಳುವ ಮಹಿಳೆಯರು, ಮಕ್ಕಳು, ಹಿರಿಯರಿಗೆ ಅನಾನುಕೂಲ ಉಂಟಾಗುತ್ತಿದೆ ಎಂದು ಸ್ಥಳೀಯರು ಬೇಸರಿಸಿದ್ದಾರೆ.

**ಮುರಿದು ಬಿದ್ದಿರುವ ಎರಡೂ ಪಾರ್ಕ್ ಗೇಟ್‌ಗಳು:** ಅಕ್ಕಪಕ್ಕದಲ್ಲಿರುವ ಎರಡು ಸಣ್ಣ ಉದ್ಯಾನವನಗಳ ಎರಡೂ ಪ್ರಮುಖ ಗೇಟ್‌ಗಳು ಮುರಿದುಬಿದ್ದಿವೆ. ಒಂದು ಪಾರ್ಕ್‌ನ ಚಿಕ್ಕಗೇಟ್ ಸಂಪೂರ್ಣವಾಗಿ ಹಾಳಾಗಿದ್ದರೆ, ಮತ್ತೊಂದು ಪಾರ್ಕ್‌ನ ಗೇಟ್, ರಕ್ಷಣಾ ಬೇಲಿಯೇ ಕಾಣೆಯಾಗಿದೆ. ಒಂದು ಪಾರ್ಕ್‌ನಲ್ಲಿ ಕಸದ ರಾಶಿ, ಸೈಜುಗಲ್ಲುಗಳು ಅಡ್ಡಾದಿಡ್ಡಿಯಲ್ಲಿ ಬಿದ್ದಿವೆ. ಮರದ ಸುತ್ತಲೂ ಎಲ್ಲೆಂದರಲ್ಲಿ ದೇವತಾ ಮೂರ್ತಿಗಳ ಚಿತ್ರಪಟಗಳನ್ನು ಬಿಸಾಡಲಾಗಿದೆ. ಮತ್ತೊಂದು ಪಾರ್ಕ್ ಮುಂಭಾಗದ ಗೇಟ್ ಮುರಿದಿದೆ. ಪಾರ್ಕ್ ಒಳಾಂಗಣದಲ್ಲಿ ಗಿಡಗಂಟಿಗಳು ಬೆಳೆದು ನಿಂತಿವೆ. ಮತ್ತೊಂದೆಡೆ ಮಕ್ಕಳ ಆಟಿಕೆಗಳು, ವ್ಯಾಯಾಮ ಮಾಡುವ ಪರಿಕರಗಳು ಮುರಿದು ಬಿದ್ದಿವೆ. ಒಣ ಕಸದ ರಾಶಿಯಲ್ಲಿ ವಿಷಕಾರಿ ಕೀಟಗಳು ಅಥವಾ ಹಾವುಗಳು ಸೇರಿಕೊಂಡಲ್ಲಿ, ಅದರಿಂದ ಆಟವಾಡುವ ಮಕ್ಕಳಿಗೆ ಕುತ್ತಾಗಲಿದೆ. ಈ ಸಂಬಂಧ ಕೂಡಲೇ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ಪಾರ್ಕ್ ಸ್ವಚ್ಛತೆ ಬಗ್ಗೆ ಗಮನಹರಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಪಾರ್ಕ್‌ಗಳ ಮುಂಭಾಗದಲ್ಲಿರುವ ಗಣಪತಿ ದೇವಾಲಯದ ರಸ್ತೆಯನ್ನು ಮ್ಯಾನ್ ಹೋಲ್ ನಿರ್ಮಾಣಕ್ಕಾಗಿ ಕಿತ್ತು ಹಾಕಲಾಗಿದ್ದು, ಆದರೆ ವರ್ಷಗಳೇ ಕಳೆದರೂ ರಸ್ತೆ ದುರಸ್ತಿಪಡಿಸುವ ಕೆಲಸಕ್ಕೆ ಯಾರೂ ಮುಂದಾಗಿಲ್ಲ. ಮಳೆ ಬಂದರೆ ರಸ್ತೆಯೆಲ್ಲ ಕೆಸರು ಗದ್ದೆಯಂತಾಗುತ್ತದೆ. ಬೇಸಿಗೆ ಕಾಲದಲ್ಲಿ ವಿಪರೀತ ಧೂಳು ಮನೆಯನ್ನೆಲ್ಲ ಒಕ್ಕರಿಸುತ್ತದೆ. ಈ ಬಗ್ಗೆ ಪಾಲಿಕೆ ತ್ವರಿತ ಕ್ರಮ ಕೈಗೊಂಡು ಸಮಸ್ಯೆಗಳಿಗೆ ಪರಿಹಾರ ನೀಡಬೇಕು ಎಂದು ಸಾರ್ವಜನಿಕರು ಆಕ್ರೋಶ ಹೊರಹಾಕಿದ್ದಾರೆ.

> ಹುಡ್ಕೋ ಬಡಾವಣೆಯಲ್ಲಿನ ಪಾರ್ಕ್, ರಸ್ತೆ, ಆಟೋಟ ಉಪಕರಣ ಎಲ್ಲವೂ ದುರಸ್ತಿ ಆಗಬೇಕಿದೆ. ಜನರು ರಸ್ತೆಯಲ್ಲಿ ಮೂಗುಮುಚ್ಚಿ ತಿರುಗಾಡುವ ಸ್ಥಿತಿ ನಿರ್ಮಾಣವಾಗಿದೆ. ಪಾರ್ಕ್‌ನ ಮುಖ್ಯ ದ್ವಾರವೇ ಕಾಣುತ್ತಿಲ್ಲ. ರಕ್ಷಣಾ ಬೇಲಿಯಂತೂ ಇಲ್ಲವೇ ಇಲ್ಲ. ಬೇಸಿಗೆಯಲ್ಲಿ ಮಕ್ಕಳು ವಿಹಾರಕ್ಕಾಗಿ ಹೆಚ್ಚಾಗಿ ಪಾರ್ಕ್‌ಗಳನ್ನೇ ಅವಲಂಬಿಸಿರುತ್ತಾರೆ. ಈ ಬಗ್ಗೆ ಸಂಬಂಧಪಟ್ಟವರು ಗಮನಹರಿಸಬೇಕಿದೆ.
>
> -ಶ್ರೀನಿವಾಸ್.ಎಸ್., ಸ್ಥಳೀಯರು.



## ಸಾರ್ವಜನಿಕ ಗಮನಕ್ಕೆ

ನಮ್ಮ ಕಕ್ಷಿದಾರರಾದ ಬೆಂಗಳೂರು, ಬೆಂಗಳೂರು ದಕ್ಷಿಣ, ಪಾಲ್ ಚೆನ್ನಪ್ಪ ಲೇಔಟ್, 1ನೇ ಕ್ರಾಸ್, 3ನೇ ಮುಖ್ಯರಸ್ತೆ, 3ನೇ ಮಹಡಿ, ಟಿ1 ಸಾಗರ್ ವಿಶ್ವ, ಮನೆ ನಂ. 118ರಲ್ಲಿ ವಾಸವಾಗಿರುವ ಲೇಟ್ ಎ. ತಿಬ್ಬಯ್ಯ ರವರ ಮಗನಾದ ಶ್ರೀ ದಿಲೀಪ್. ಎ. ಟಿ (ಮೊಬೈಲ್ ನಂ. 9886561591) ರವರು ಕೆಳಕಂಡ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಅದರ ಮಾಲೀಕರಾದ ಮಂಡ್ಯ ಜಿಲ್ಲೆ, ಚಿನಕುರಳಿ ಹೋಬಳಿ, ಗುಮ್ಮನಹಳ್ಳಿ, ರಾಗಿಮುದ್ದನಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ಶ್ರೀ ರವಿ. ಎಂ. ಎಸ್ ರವರ ಧರ್ಮಪತ್ನಿಯಾದ ಶ್ರೀಮತಿ. ಕವಿತ.ಬಿ.ಸಿ ರವರಿಂದ ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಮುಂದಾಗಿರುತ್ತಾರೆ. ಆದ್ದರಿಂದ, ಸಾರ್ವಜನಿಕರು ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ತಂಟೆ ತಕರಾರುಗಳು ಹಾಗೂ ಆಕ್ಷೇಪಣೆಗಳು ಇದ್ದಲ್ಲಿ ಏಳು (07) ದಿನಗಳ ಒಳಗಾಗಿ ನಮ್ಮ ವಕೀಲರನ್ನು ದಾಖಲಾತಿಗಳ ಸಮೇತ ಸಂಪರ್ಕಿಸಿ ಲಿಖಿತ ರೂಪದಲ್ಲಿ ಅವರಿಗೆ ಆಕ್ಷೇಪಣೆ ಸಲ್ಲಿಸುವುದು. ಒಂದು ವೇಳೆ ಏಳು (07) ದಿನಗಳ ಒಳಗಾಗಿ ಯಾವುದೇ ಆಕ್ಷೇಪಣೆಗಳು ಕಂಡುಬರದಿದ್ದಲ್ಲಿ ನಮ್ಮ ಕಕ್ಷಿದಾರರು ಕ್ರಯದ ವ್ಯವಹಾರವನ್ನು ಮುಂದುವರೆಸಲು ಇಚ್ಛೆವುಳ್ಳವರಾಗಿರುತ್ತಾರೆ ಎಂದು ತಿಳಿಯತಕ್ಕದ್ದು.

**ಷೆಡ್ಯೂಲ್ ಸ್ವತ್ತಿನ ವಿವರ**

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು. ಇಲವಾಲ ಹೋಬಳಿ, ಮಾದಗಳ್ಳಿ ಗ್ರಾಮದ ಸರ್ವೆ ನಂ. 12/1, 12/2, 13, 14, 15/1, 15/2, 18/2, 20/3ಎ, 127ಪಿ, 128ಪಿ ಮತ್ತು 129ರಲ್ಲಿಯ ಒಟ್ಟು ವಿಸ್ತೀರ್ಣ 24 ಎಕರೆ 17 ಗುಂಟೆ ಜಮೀನಿನಲ್ಲಿ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ ಎ.ಎಲ್.ಎನ್.(1)ಸಿ.ಆರ್.101/2004-05 ದಿನಾಂಕ 02-02-2005ರ ಮೇರೆಗೆ ಅನ್ಯಕ್ರಾಂತ ಮಂಜೂರಾತಿ ಪಡೆದು ಮೈ.ನ.ಪ್ರಾಧಿಕಾರ ದಿಂದ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪಡೆದು ಆಟೋಮೋಟಿವ್ ಆಕ್ಸೆಲ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಮೈಸೂರು ರವರು ಅಭಿವೃದ್ಧಿಪಡಿಸಿ ನಿರ್ಮಿಸಿರುವ ಕಲ್ಯಾಣಿ ನಗರ ಬಡಾವಣೆಯಲ್ಲಿರುವ ನಿವೇಶನದ ನಂ. 203, ಬೋಗಾದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿರುವ (ನಮೂನೆ-3 ರ ಪ್ರಕಾರ) ಸ್ವತ್ತಿನ ಸಂಖ್ಯೆ 7101882189, ನಿರ್ಧರಣಾ ಸಂಖ್ಯೆ 203, ದಾಖಲೆ ಸಂಖ್ಯೆ 25559596, ಸ್ವತ್ತಿಗೆ ಚಕ್ಕುಬಂದಿ; ಪೂರ್ವಕ್ಕೆ : ನಿವೇಶನ ಸಂಖ್ಯೆ: 186, ಪಶ್ಚಿಮಕ್ಕೆ : 9.00 ಮೀಟರ್ ರಸ್ತೆ, ಉತ್ತರಕ್ಕೆ : ನಿವೇಶನ ಸಂಖ್ಯೆ: 202 ಹಾಗೂ ದಕ್ಷಿಣಕ್ಕೆ : ನಿವೇಶನ ಸಂಖ್ಯೆ: 204 ಈ ಮಧ್ಯೆ ಇರುವ ವಿಸ್ತೀರ್ಣ ಪೂರ್ವ-ಪಶ್ಚಿಮ 12.00 ಮೀಟರ್‌ಗಳು ಹಾಗೂ ದಕ್ಷಿಣೋತ್ತರ 9.00 ಮೀಟರ್‌ಗಳು, ಒಟ್ಟು ವಿಸ್ತೀರ್ಣ 108.00 ಚದರ ಮೀಟರ್‌ಗಳುಳ್ಳ ಪೂರ್ತಾ ಖಾಲಿ ನಿವೇಶನವು ಮಾತ್ರ ಈ ಪತ್ರಿಕಾ ಪ್ರಕಟಣೆಗೆ ಒಳಪಟ್ಟ ಸ್ವತ್ತಾಗಿರುತ್ತದೆ.

ಸಹಿ/- ಎನ್. ಲೋಕೇಶ್, ಬಿ.ಎ, ಎಲ್‌ಎಲ್‌ಬಿ
ವಕೀಲರು, #374/1, 1ನೇ ಮಹಡಿ, ತ್ಯಾಗರಾಜ ಮುಖ್ಯ ರಸ್ತೆ, ಕೆ.ಆರ್.ಮೊಹಲ್ಲಾ, ಮೈಸೂರು
ಸ್ಥಳ: ಮೈಸೂರು. ಮೊ: 9448434564
ದಿನಾಂಕ: 16/02/2026





ಕರ್ನಾಟಕ ಸರ್ಕಾರ
ಪಿ.ಎಮ್.ಶ್ರೀ ಸರ್ಕಾರಿ ಆದರ್ಶ ವಿದ್ಯಾಲಯ,
ಚಿಕ್ಕಹುಣಸೂರು, ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ -571105
Email id: adarshahunsur@gmail.com
DISE NO:29260427501

ಪತ್ರ ಸಂಖ್ಯೆ:34/2025-26 ದಿನಾಂಕ: 13.02.2026

### ಅಲ್ಪಾವಧಿ ಮ್ಯಾನ್ಯುಯಲ್ ಟೆಂಡರ್ ಪ್ರಕಟಣೆ

(ಎರಡು ಕವರ್ ಪದ್ಧತಿ ಮುಖಾಂತರ)

2025-26ನೇ ಸಾಲಿಗೆ ಪಿಎಂಶ್ರೀ ಯೋಜನೆಯಡಿ ಪಿ.ಎಂ.ಶ್ರೀ. ಸರ್ಕಾರಿ ಆದರ್ಶ ವಿದ್ಯಾಲಯ, ಚಿಕ್ಕಹುಣಸೂರು, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ, ಶಾಲೆಗೆ ಬ್ಯಾಂಡ್ ಸೆಟ್, ಯೋಗ ಮ್ಯಾಟ್, ಬ್ಯಾಂಡ್‌ಸೆಟ್ ಯುನಿಫಾರಂ, ಬ್ಯಾಂಡ್‌ಸೆಟ್ ಶೂ & ಸಾಕ್ಸ್ ವಿಜ್ಞಾನ ಉದ್ಯಾನವನ ನಿರ್ಮಾಣ ಹಾಗೂ ವಿಜ್ಞಾನ ಪ್ರಯೋಗಾಲಯಕ್ಕೆ ಪ್ರಯೋಗಾಲಯ ಸಾಮಗ್ರಿಗಳನ್ನು ಸರಬರಾಜು ಮಾಡುವ ಸಂಬಂಧ ಅರ್ಹ ಸಂಸ್ಥೆ/ಏಜೆನ್ಸಿಯವರಿಂದ ದ್ವಿಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಮ್ಯಾನ್ಯುಯಲ್ ಟೆಂಡರ್ ಅರ್ಜಿಗಳನ್ನು ದಿ: 13.02.2026 ರಿಂದ ದಿ: 24.02.2026 5.00PM ಒಳಗೆ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್ ಅನ್ನು ದಿನಾಂಕ 26.02.2026ರ ಬೆಳಿಗ್ಗೆ 11.00. ಗಂಟೆಗೆ ಹಾಗೂ ಆರ್ಥಿಕ ಬಿಡ್ ಅನ್ನು ದಿನಾಂಕ 27.02.2026ರ ಬೆಳಿಗ್ಗೆ 11.00. ಗಂಟೆಗೆ ತೆರೆಯಲಾಗುತ್ತದೆ. ಪ್ರತಿ ವಿಷಯಕ್ಕೆ 2% ರಷ್ಟು ಇ.ಎಂ.ಡಿ ಮೊತ್ತವನ್ನು ಸಲ್ಲಿಸುವುದು.

**ಸೂಚನೆ:** ಪ್ರತಿ ಘಟಕಕ್ಕೆ/ವಿಷಯಕ್ಕೆ ಪ್ರತ್ಯೇಕ ದರಪಟ್ಟಿಯನ್ನು ಕಡ್ಡಾಯವಾಗಿ ಸಲ್ಲಿಸುವುದು. ಟೆಂಡರ್‌ನಲ್ಲಿ ವಿಧಿಸಲಾಗಿರುವ ಷರತ್ತು ಹಾಗೂ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಕಛೇರಿ ಕೆಲಸದ ವೇಳೆಯಲ್ಲಿ ವಿವರಗಳನ್ನು ಪಡೆಯಬಹುದಾಗಿದೆ. ದೂರವಾಣಿ ಸಂಖ್ಯೆ: 7892118767

DIPR/DDMYS/1674/KSMCA/948/2025-26 ಸಹಿ/- ಮುಖ್ಯ ಶಿಕ್ಷಕರು, ವಿದ್ಯಾಲಯ



## ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ



### ಶ್ರೀ ಸತೀಶ್ ಎಮ್.ವಿ. ರವರು

ಇವರು ದಿನಾಂಕ: 08-02-2026 ಭಾನುವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇನೆ. ತತ್ಸಂಬಂಧವಾಗಿ ವೈಕುಂಠ ಸಮಾರಾಧನೆಯನ್ನು ದಿನಾಂಕ: 18-02-2026 ರ ಬುಧವಾರ ಮಧ್ಯಾಹ್ನ 1.00 ಗಂಟೆಗೆ ನಮ್ಮ ಸ್ವಗೃಹ # 460, 2ನೇ ಕ್ರಾಸ್, ಶ್ರೀ ನಿಂಬುಜಾದೇವಿ ದೇವಸ್ಥಾನದ ರಸ್ತೆ, ನಜರ್‌ಬಾದ್, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನ ಎಂದು ತಿಳಿದು, ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

ದುಃಖತಪ್ತರು : ಪತ್ನಿ: ಶ್ರೀಮತಿ ಚೈತ್ರ ಮತ್ತು ಮಕ್ಕಳು ಹಾಗೂ ಕುಟುಂಬ ವರ್ಗದವರು

ಭೋಜನ : ಮಧ್ಯಾಹ್ನ 1.00 ಗಂಟೆಗೆ





## ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



# 503, 15ನೇ ಮುಖ್ಯ ರಸ್ತೆ, 5ನೇ ಅಡ್ಡ ರಸ್ತೆ, ಸರಸ್ವತಿಪುರಂ, ಮೈಸೂರು
ಇಲ್ಲಿ ವಾಸವಾಗಿರುವ **ಶ್ರೀಮತಿ ಜಯಲಕ್ಷ್ಮಿ**
ಇವರು ಮಾಡುವ ವಿಜ್ಞಾಪನೆಗಳು
ದಿನಾಂಕ 07-02-2026 ಶನಿವಾರ ರಂದು ನನ್ನ ಪೂಜ್ಯ ಪತಿಯವರಾದ
**ಶ್ರೀ ಶಿವರುದ್ರಪ್ಪ (ಸ್ವಾಮಿ)** ರವರು
(ಲೇ|| ಶ್ರೀಮತಿ ಚೆನ್ನಮ್ಮ ಮತ್ತು ಲೇ|| ಶ್ರೀ ಭದ್ರಯ್ಯ ರವರ ಮಗ)
ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇನೆ. ತತ್ಸಂಬಂಧವಾಗಿ **ದಿನಾಂಕ 18-02-2026 ನೇ ಬುಧವಾರ** ಬೆಳಿಗ್ಗೆ 11-00 ಕ್ಕೆ **ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ಶ್ರೀ ಮರುಳೇಶ್ವರ ದೇವಸ್ಥಾನ ಶಾಂತಿಧಾಮ**, ಕಾವೇರಿ ಶಾಲೆ ಎದುರು, ಜಯನಗರ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ, ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಶ್ರೀ ಶಿವರುದ್ರಪ್ಪ (ಸ್ವಾಮಿ) ರವರು

ಇಂತಿ ದುಃಖತಪ್ತರು
ಶ್ರೀಮತಿ ಜಯಲಕ್ಷ್ಮಿ
ಶ್ರೀಮತಿ ಶಾಂತಮಣಿ ಮತ್ತು ಶ್ರೀ ವೀರಭದ್ರ
ಹಾಗೂ ಕುಟುಂಬವರ್ಗದವರು

ಭೋಜನ: ಮಧ್ಯಾಹ್ನ 1-00 ಗಂಟೆಗೆ